15-31, ಜುಲೈ 2011 KARKAN/2007/20389 12-00

# ಪ್ರಸ್ತುತ

ಪಾಕ್ಷಿಕ



ಸತ್ಯಸುದ್ದಿಯ
# ಪ್ರಸ್ತುತ
ಪಾಕ್ಷಿಕ
PRASTHUTHA KANNADA FORTNIGHTLY

ಜುಲೈ 15-31, 2011 ಸಂಪುಟ : 5 ಸಂಚಿಕೆ : 13 ಬೆಲೆ : 12.00 ಪುಟ : 60 ಮಂಗಳೂರು

## ಅಂತರಾಳದಲ್ಲಿ...





**ಅಂಕಣಗಳು**

| | |
|---|---|
| ಮೀಟುಗೋಲು | 05 |
| ಪ್ರತಿಕ್ರಿಯೆ | 04 |
| ಸಹಾಭಾಗಳೊಂದಿಗೆ | 24 |
| ರಾಷ್ಟ್ರೀಯ | 56 |
| ಮಿನಿಕಥೆ: | 20 |
| ಸುದ್ದಿಸಮುಚ್ಚಯ | 48 |
| ಇಂಚರ | 34 |
| ಇನಿದನಿ | 37 |

**ಲೇಖನಗಳು**

| | |
|---|---|
| ಮುಸ್ಲಿಮ್ ಸಂಸದರಿಲ್ಲದ ಕರ್ನಾಟಕ | 13 |
| ಭ್ರಷ್ಟ ವ್ಯವಸ್ಥೆಗೆ ಶಸ್ತ್ರ ಚಿಕಿತ್ಸೆ ಅತ್ಯಗತ್ಯ | 17 |
| ಅಮಾಯಕರಿಗೆ ಪರಮೋಚ್ಚ ತೀರ್ಪು | 30 |
| ಷಡ್ಯಂತ್ರಕ್ಕೆ ಬಲಿಯಾದರೇ... | 22 |
| ದೇವಾಲಯ, ಸ್ವಾಮೀಜಿಗಳ ಶ್ರೀಮಂತಿಕೆ... | 33 |

**ವಿಶೇಷ ಲೇಖನ**

| | |
|---|---|
| ನೆರೆ ಸಂತ್ರಸ್ತರ ಶೋಕಗೀತೆ... | 08 |


ಪ್ರಧಾನ ಸಂಪಾದಕರು
ಕೆ.ಎಂ. ಶರೀಫ್

ಸಂಪಾದಕರು
ಫಯಾರುಝ್ ಎನ್.

ಸಹ ಸಂಪಾದಕರು
ಶಬೀರ್ ಕೆ.

ಸಂಪಾದಕ ಮಂಡಳಿ:
ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.

ಗ್ರಾಫಿಕ್ ಡಿಸೈನರ್
ಎಂ. ಶಬೀರ್

ವ್ಯವಸ್ಥಾಪಕರು
ಅಬ್ದುಲ್ ಖಾದರ್ ಪಿ.

PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com



ನೆರೆ ಸಂತ್ರಸ್ತರು ಸೂರಿಲ್ಲದೆ ಸಂಕಷ್ಟದಲ್ಲಿದ್ದರೂ ಸರಕಾರ ಮಾತ್ರ ಭಗವದ್ಗೀತೆ ಬೋಧಿಸಲು ಹೊರಟಿದೆ! - 08



ಕರ್ನಾಟಕದಲ್ಲಿ ಶೇ. 16 ಮುಸ್ಲಿಂ ಜನಸಂಖ್ಯೆ ಇದ್ದರೂ ಒಬ್ಬನೇ ಒಬ್ಬ ಸಂಸದನಿಲ್ಲ! -13



ದೇಶದ ಆಡಳಿತ ವ್ಯವಸ್ಥೆ ಭ್ರಷ್ಟವಾಗಿದೆ. ಕಾನೂನಿನಡಿಯಲ್ಲಿ ಇದನ್ನು ಶಸ್ತ್ರಚಿಕಿತ್ಸೆಗೊಳಪಡಿಸಬೇಕಾಗಿದೆ. -17



ಸಲ್ವಾ ಜುಡಂ ಕಾನೂನು ಬಾಹಿರ ಎಂದು ತೀರ್ಪು ನೀಡುವ ಮೂಲಕ ಸು.ಕೋರ್ಟ್ ಅಮಾಯಕರನ್ನು ರಕ್ಷಿಸಿದೆ. -30

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

## ವರದಕ್ಷಿಣೆ ಪಿಡುಗನ್ನು ಹೋಗಲಾಡಿಸೋಣ

ವರದಕ್ಷಿಣೆ ಒಂದು ಸಾಮಾಜಿಕ ಪಿಡುಗಾಗಿದೆ. ಬಡವರು ಈ ಪಿಡುಗಿನಿಂದ ಬಹಳಷ್ಟು ಸಂಕಷ್ಟಕ್ಕೊಳಗಾಗಿದ್ದು, ಶ್ರೀಮಂತ ವರ್ಗದಲ್ಲಿ ಹೆಚ್ಚಿನವರು ಇದನ್ನು ತಮ್ಮ ಪ್ರತಿಷ್ಠೆಯ ಸಂಕೇತವೆಂದು ತಿಳಿದುಕೊಂಡಂತಿದೆ.

ಪ್ರಾಯ ತುಂಬಿದ ಅದೆಷ್ಟೋ ಹೆಣ್ಮಕ್ಕಳು ವರದಕ್ಷಿಣೆಯ ಕಾರಣದಿಂದ ದಾಂಪತ್ಯದ ಬಾಗಿಲು ಪ್ರವೇಶಿಸದೆ ಮನೆಯ ಮೂಲೆಯಲ್ಲಿ ಕೊಳೆಯುತ್ತಿದ್ದಾರೆ. ಹಲವರ ಆಯುಷ್ಯವಿಡೀ ತಮ್ಮ ಹೆಣ್ಣು ಮಕ್ಕಳ ವಿವಾಹಕ್ಕಾಗಿ ಹಣ ಸಂಪಾದಿಸುವ ಕಾಯಕದಲ್ಲೇ ಬೆಂದು ಹೋಗಿದೆ. ಹಲವು ತಂದೆತಾಯಂದಿರು ಇದೇ ಚಿಂತೆಯಲ್ಲಿ ಹಾಸಿಗೆ ಹಿಡಿದಿದ್ದಾರೆ. ಪ್ರಾಯ ತುಂಬಿದ ಹಲವು ಹೆಣ್ಮಕ್ಕಳು ತಮ್ಮ ಬಾಳಿಗೊಂದು ದಾರಿಯಿಲ್ಲ ಎಂಬ ಚಿಂತೆಯಿಂದ ಮನೋರೋಗಿಯಾಗಿದ್ದಾರೆ. ವರದಕ್ಷಿಣೆ ರಹಿತ ವಿವಾಹವೆಂಬ 'ಪ್ರತಿಜ್ಞೆ'ಗೈದ ಹಲವರೂ ತಮ್ಮ ಸಹೋದರಿಯರನ್ನು ಪತಿಯ ಮನೆಗೆ ಕಳುಹಿಸಬೇಕಾದ ಅನಿವಾರ್ಯತೆಯ ಮುಂದೆ ಈ ಸಂಪ್ರದಾಯಕ್ಕೆ ಬಲಿಯಾಗಿದ್ದಾರೆ.

ಸಮುದಾಯದಲ್ಲಿರುವ ಈ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಲು ಪ್ರಜ್ಞಾವಂತರು ಕೈಜೋಡಿಬೇಕು. ವರದಕ್ಷಿಣೆಯ ವಿರುದ್ಧ ಪ್ರಾಯೋಗಿಕವಾದ ಹಾಗೂ ಸಮಾಜದಲ್ಲಿ ಪರಿವರ್ತನೆಯನ್ನುಂಟು ಮಾಡುವ ಕಾರ್ಯಾಚರಣೆ ಅತೀ ಅಗತ್ಯವಾಗಿದೆ.

ಎಂ.ಎಚ್. ನಾಝಿಯಾ ಮಲ್ಲೂರು

ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನ, ಬರಹಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.
ಕಚೇರಿ ವಿಳಾಸ ಇಂತಿದೆ.

ಪ್ರಸ್ತುತ ಪಾಕ್ಷಿಕ
ಡಿ.ನಂ.10-23-1009(1)
ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ
ಯತೀಮ್‌ಖಾನಾ ಹಾಲ್ ಬಳಿ, ಬಂದರ್
ಮಂಗಳೂರು-1
**ಈ ಮೇಲ್ ವಿಳಾಸ:**
prasthutha2007@gmail.com

## ಸಾಮಾಜಿಕ ಅನಿಷ್ಟಗಳಿಗೆ ಕೊನೆ ಎಂದು?



ಪ್ರಸ್ತುತ ಪಾಕ್ಷಿಕದಲ್ಲಿ ನವಾಝ್ ಬಂಟ್ವಾಳರವರ ''ದೇವದಾಸಿ ಪದ್ಧತಿಯು ಇನ್ನೂ ಜೀವಂತ'' ಶೀರ್ಷಿಕೆಯಡಿ ಪ್ರಕಟವಾದ ಸಚಿತ್ರ ವರದಿಯು ಓದುಗರ ಗಮನ ಸೆಳೆದಿದೆ. ಜೀತ ಪದ್ಧತಿಯು ಇನ್ನೂ ಕೂಡ ಆಚರಣೆಯಲ್ಲಿರುವುದು ಮಾಧ್ಯಮಗಳಲ್ಲಿ ವರದಿಯಾಗುತ್ತಿವೆ.

ಬಸವ ಕಲ್ಯಾಣದ ಡಾಬಾವೊಂದರಲ್ಲಿ ಮಾಲಕನಿಂದ ತನ್ನ ತಂದೆಯು 3000 ರೂ. ಸಾಲ ಪಡೆದುದಕ್ಕಾಗಿ ಇಬ್ರಾಹೀಂ ನಬೀ ಸಾಬ್ ರಾಜೋಳೆವಾಲೆ ಎಂಬ 18 ವರ್ಷದ ಯುವಕನ ಕಾಲಿಗೆ ಕಬ್ಬಿಣದ ಸರಪಳಿಯನ್ನು ತೊಡಿಸಿ ಜೀತದಾಳುವಿನಂತೆ ದುಡಿಸಲಾಗುತ್ತಿತ್ತು. ಇಂಥಹ ಕೆಲವೇ ಕೆಲವು ಪ್ರಕರಣಗಳು ಮಾತ್ರ ಬೆಳಕಿಗೆ ಬರುತ್ತಿವೆ. ಬೆಳಕಿಗೆ ಬಾರದಂತಹ ಇಂತಹ ಅದೆಷ್ಟೋ ಪ್ರಕರಣಗಳಿವೆ.

''ಭಾರತ ಪ್ರಕಾಶಿಸುತ್ತಿದೆ'' ಎನ್ನುತ್ತಾ ಭ್ರಷ್ಟ ರೂಪದಲ್ಲಿ ಕೋಟ್ಯಾಧಿಪತಿಗಳಾಗಿರುವ ರಾಜಕಾರಣಿಗಳೆಲ್ಲಿ?, ಕೇವಲ 3 ಸಾವಿರ ರೂ. ಸಾಲ ತೀರಿಸಲು ಸಾಧ್ಯವಾಗದ ಬಡ ವ್ಯಕ್ತಿಯೆಲ್ಲಿ? ಹೀಗಾದಲ್ಲಿ 'ಭಾರತ್ ನಿರ್ಮಾಣ್ ಸಾಧ್ಯವೇ?

ಅಬ್ದುಲ್ ಜಲೀಲ್ ನಂದಾವರ, ಎಸ್‌ಡಿಎಂ ಮಂಗಳೂರು

## ಮುಖ್ಯಮಂತ್ರಿಗೆ ಭಯವೇ?

ಕುಮಾರಸ್ವಾಮಿ ಇದೀಗ ಬಿಜೆಪಿ ತನ್ನ ಕುಟುಂಬದ ವಿರುದ್ಧ ಮಾಡಿರುವ ಅಕ್ರಮ ಆಸ್ತಿಯ ಆರೋಪವನ್ನು ಸಿಬಿಐ ತನಿಖೆಗೆ ನೀಡುವಂತೆ ಆಗ್ರಹಿಸಿ ಆಮರಣ ಉಪವಾಸ ಕುಳಿತಿದ್ದಾರೆ.

ಅತ್ತ 1500 ಕೋಟಿ ರೂ. ಅಕ್ರಮ ಆಸ್ತಿ ಹೊಂದಿದ್ದಾರೆ ಎಂದು ಆರೋಪಿಸಿ ಚಾರ್ಜ್ ಶೀಟ್ ಬಿಡುಗಡೆಗೊಳಿಸಿದ್ದ ಮುಖ್ಯಮಂತ್ರಿ ಇದೀಗ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ.

ಮಾಜಿ ಮುಖ್ಯಮಂತ್ರಿ ತಾನು ಮಾಡಿರುವ ತಪ್ಪಿನ ತನಿಖೆಯನ್ನು ಸಿಬಿಐಗೊಪ್ಪಿಸಿ ಎನ್ನುತ್ತಿದ್ದರೆ ಹಾಲಿ ಮುಖ್ಯಮಂತ್ರಿ ಮಾತ್ರ ತೆಪ್ಪಗೆ ಕುಳಿತಿದ್ದಾರೆ. ಇದರ ಅರ್ಥ ಎಲ್ಲಿ ಆ ಬಳಿಕ ತನ್ನ ಬಂಡವಾಳವೂ ಹೊರಬೀಳಬಹುದು ಎಂಬ ಆತಂಕ.

ರಾಯನ್ ಫೆರ್ನಾಂಡೀಸ್, ಪಕ್ಷಿಕೆರೆ

## ಮಾನವೀಯತೆ ಉಳಿವಿಗಾಗಿ ಒಂದಾಗಬೇಕಾಗಿದೆ

ಭಾರತದ ಕೋಮುಗಲಭೆಗೂ ಆರೆಸ್ಸೆಸ್‌ನ ಹುಟ್ಟಿಗೂ ಅವಿನಾಭಾವ ಸಂಬಂಧವಿದೆ. ಈ ದೇಶದಲ್ಲಿ ಕೋಮುಗಲಭೆ ಮತ್ತು ಆರೆಸ್ಸೆಸ್ ಎಂಬುದು ಸಮವಯಸ್ಸಿನ ಎರಡು ಅನಿಷ್ಟಗಳು. ದೇಶದಲ್ಲಿ ಕೋಮುಗಲಭೆಗೆ ಎಷ್ಟು ಇತಿಹಾಸವಿದೆಯೋ ಆರೆಸ್ಸೆಸ್‌ಗೂ ಅಷ್ಟೇ ಇತಿಹಾಸವಿದೆ. 1925ರಲ್ಲಿ ಆರೆಸ್ಸೆಸ್ ಹುಟ್ಟಿಕೊಳ್ಳುತ್ತಲೇ ಫ್ಯಾಷಿಸಂ ಕೂಡ ಇಲ್ಲಿ ಜನ್ಮತಾಳುತ್ತದೆ. ಬರೋಬ್ಬರಿ 100 ವರ್ಷಗಳ ದೂ(ದು)ರಾಲೋಚನೆಯ ಯೋಜನೆಯನ್ನು ಹಾಕಿಕೊಂಡ ಸಂಘಪರಿವಾರ ಆಲಿಯಾಸ್ ಆರೆಸ್ಸೆಸ್‌ಗೆ ಈಗ 86ರ ಹರೆಯ. ಅದರ ಗುರಿಸಾಧನೆಗೆ ಇನ್ನುಳಿದಿರುವುದು 15 ವರ್ಷಗಳು ಮಾತ್ರ. ಭಾರತ ಎಂಬ ಜಾತ್ಯತೀತ ರಾಷ್ಟ್ರವನ್ನು ಹಿಂದು ರಾಷ್ಟ್ರವನ್ನಾಗಿಸುವುದು ಆರೆಸ್ಸೆಸ್‌ನ ಪರಮೋಚ್ಛ ಗುರಿ.

ಸದ್ಯ ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸುವಾಗ ಆರೆಸ್ಸೆಸ್‌ನ ಇತಿಹಾಸವನ್ನು ನೆನಪಿಸಿಕೊಳ್ಳುವ ಮತ್ತು ಆ ಮೂಲಕ ಭವಿಷ್ಯದ ಅಪಾಯವನ್ನು ಅರಿಯುವ ಅನಿವಾರ್ಯತೆ ಎದ್ದು ಕಾಣುತ್ತಿದೆ. ಪ್ರಮೋದ್ ಮುತಾಲಿಕ್ ರಾಜ್ಯಮಟ್ಟದಲ್ಲಿ ಮಿಲಿಟರಿಯನ್ನು ತರಬೇತುಗೊಳಿಸುತ್ತಿದ್ದಾನೆ. ಅತ್ತ ರಾಷ್ಟ್ರಮಟ್ಟದಲ್ಲಿ ತಾನು ಶಸ್ತ್ರಸಜ್ಜಿತ ಪಡೆಯನ್ನು ನಿಯೋಜಿಸುವುದಾಗಿ ಬಾಬಾ ರಾಮ್‌ದೇವ್ ಘೋಷಿಸಿಬಿಟ್ಟಿದ್ದಾನೆ.

ರಾಜ್ಯದಲ್ಲಿ ಬೆಳಗಾವಿಯ ಅಥಣಿ ಎಂಬಲ್ಲಿನ ಆಶ್ರಮವೊಂದರಲ್ಲಿ ರಹಸ್ಯವಾಗಿ ನಡೆಯುತ್ತಿರುವ ಈ ಮಿಲಿಟರಿ ತರಬೇತಿಯಲ್ಲಿ ನಿವೃತ್ತ ಸೇನಾಧಿಕಾರಿಯೋರ್ವರು ತರಬೇತಿ ನೀಡುತ್ತಿದ್ದಾರೆ. ಈಗಾಗಲೇ ಈ ರೀತಿ ತರಬೇತಿ ನೀಡಿದ ಫಲವಾಗಿ ಮಾಲೆಗಾಂವ್, ಮಕ್ಕಾ ಮಸ್ಜಿದ್, ನಾಂದೇಡ್, ಮಡಗಾಂವ್ ಸ್ಫೋಟಗಳು ದೇಶದಲ್ಲಿ ಸಂಭವಿಸಿವೆ. ಮುತಾಲಿಕ್ ಅಂತೂ ಹುಬ್ಬಳ್ಳಿ ನ್ಯಾಯಾಲಯದಲ್ಲಿ ಸಂಭವಿಸಿದ ಸ್ಫೋಟದ ಶಂಕಿತ ಆರೋಪಿ. ಈ ರೀತಿಯ ತರಬೇತಿ ಚಟುವಟಿಕೆಗಳು ವೀಡಿಯೋ ಸಹಿತ ಬಹಿರಂಗಗೊಳ್ಳುತ್ತಿದ್ದರೂ ಅದನ್ನು ಕೇವಲ ಪರ ವಿರೋಧದ ಚರ್ಚೆಯ ವಿಷಯವಾಗಿ ಪರಿಗಣಿಸಲಾಗುತ್ತಿದೆಯೇ ಹೊರತು ಆತನನ್ನು ಯಾವ ಸೆಕ್ಷನ್‌ನಡಿ ಬಂಧಿಸಬೇಕು, ಯಾವ ಜೈಲು ಆತನಿಗೆ ಸೂಕ್ತ ಎಂಬದರ ಕುರಿತು ಚರ್ಚೆಯೇ ನಡೆಯುತ್ತಿಲ್ಲ.

ಇಂತಹ ಸಂದರ್ಭದಲ್ಲಿ ಕರ್ನಾಟಕದ ಬಿಜೆಪಿ ಸರಕಾರ, ಮುತಾಲಿಕ್‌ನ ಮಿಲಿಟರಿ ತರಬೇತಿ ವಿಚಾರವು ಸುದ್ದಿಯಾಗುವುದನ್ನು ತಡೆಯುವುದಕ್ಕಾಗಿ ಭಗವದ್ಗೀತೆಯ ವಿಚಾರವನ್ನು ತೇಲಿಬಿಟ್ಟಿದೆ. ಕೆಲವು ದಿನಗಳಲ್ಲಿ ಕೇವಲ ಭಗವದ್ಗೀತೆಯ ವಿಚಾರವಾಗಿ ಚರ್ಚೆ ನಡೆದು, ಅದು ತಣ್ಣಗಾಗುವ ವೇಳೆಗೆ ಮುತಾಲಿಕ್ ತನ್ನ ಮಿಲಿಟರಿ ತರಬೇತಿ ಮುಗಿಸಿಯಾಗಿರುತ್ತದೆ. ಇತ್ತ ಸರಕಾರವು ಶಿಕ್ಷಣವನ್ನು ಕೇಸರೀಕರಣಗೊಳಿಸಲು ಹೊರಟರೆ, ಅತ್ತ ಸರಕಾರದ ಒಂದು ಪರಿವಾರವೇ ಆಗಿರುವ ಶ್ರೀರಾಮಸೇನೆ ದೇಶದ್ರೋಹಿ ಚಟುವಟಿಕೆಯಲ್ಲಿ ಸಕ್ರಿಯವಾಗಿದೆ.

ಇಂತಹ ಸಂದರ್ಭದಲ್ಲಿ ನಾವು ಒಂದು ಅಂಶವನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಇನ್ನುಳಿದಿರುವ 15 ವರ್ಷಗಳಲ್ಲಿ ಸಂಘಪರಿವಾರದ ಚಟುವಟಿಕೆಗಳು ಬಿರುಸಿನಿಂದ ಸಾಗಲಿವೆ ಎಂಬುದರ ಮುನ್ಸೂಚನೆಯಾಗಿವೆ ಈ ಎಲ್ಲ ಬೆಳವಣಿಗೆಗಳು. ಈವರೆಗೆ ಜನರನ್ನು ಧರ್ಮ ರಕ್ಷಣೆಯ ಹೆಸರಿನಲ್ಲಿ ವಿಭಜಿಸಿ, ಹಿಂದುತ್ವದ ವಿಷ ಬೀಜವನ್ನು ಬಿತ್ತುತ್ತಿದ್ದ ಆರೆಸ್ಸೆಸ್, ಇದೀಗ ನೇರವಾಗಿ ಶಸ್ತ್ರಾಸ್ತ್ರ ಹಿಡಿದು ಉಗ್ರರೂಪವನ್ನು ಪ್ರದರ್ಶಿಸಲು ಸಿದ್ಧವಾಗಿದೆ. ಈಗಾಗಲೇ ಬಾಂಬ್ ತಯಾರಿಕೆ, ಸ್ಫೋಟ ಕೃತ್ಯಗಳಲ್ಲಿ ಹಿಂದುತ್ವ ಶಕ್ತಿಗಳು ತೊಡಗಿರುವುದು ಬೆಳಕಿಗೆ ಬರುತ್ತಿರುವಂತೆಯೇ ಆರೆಸ್ಸೆಸ್ ತನ್ನ ಗುಪ್ತ ಅಜೆಂಡಾವನ್ನು ತಾನಾಗಿಯೇ ಬಹಿರಂಗಪಡಿಸಿಕೊಳ್ಳುತ್ತಾ, ಅದನ್ನು ದೇಶಸೇವೆ, ರಕ್ಷಣೆಗಾಗಿ ಮಾಡಲಾಗುತ್ತಿದೆ ಎಂಬ ಹೊಸ ಪ್ರಚಾರತಂತ್ರದಲ್ಲೂ ತೊಡಗಿದೆ.

ಭಾರತ ದೇಶದ ಜಾತ್ಯತೀತ ಪರಂಪರೆ, ಪ್ರಜಾತಂತ್ರ ವ್ಯವಸ್ಥೆ ಉಳಿಯಬೇಕಾದರೆ ಪ್ರಜ್ಞಾವಂತ ನಾಗರಿಕರೆಲ್ಲ ಶಕ್ತಿಯುತವಾಗಿ ಒಂದಾಗಬೇಕಾದ ಅಗತ್ಯ ಇದೆ. ಇದು ಕೇವಲ ದೇಶದ ಉಳಿವಿನ ಪ್ರಶ್ನೆಯಲ್ಲ, ಮಾನವೀಯತೆಯ ಉಳಿವು ಕೂಡ ಹೌದು.

## ಸಂಪಾದಕೀಯ ಉತ್ತಮವಾಗಿತ್ತು

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ರೈತನಿಂದ ಮಂಜುನಾಥನವರೆಗೆ' ಸಂಪಾದಕೀಯವು ವಚನ ಭಂಗ ಸರಕಾರಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಮೊದಮೊದಲು ಯಡಿಯೂರಪ್ಪ ತಾನೊಬ್ಬ ರೈತ, ತಾನೊಬ್ಬ ರೈತಪರ ಹೋರಾಟಗಾರ ಎಂದು ಈ ರಾಜ್ಯದ ಜನತೆಯನ್ನು ನಂಬಿಸಿಕೊಂಡು ಅಧಿಕಾರಕ್ಕೆ ಏರಿದರು. ಆದರೆ ಆ ಬಳಿಕ ಕೆಲವೇ ದಿನಗಳಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ಪ್ರಕರಣವು ಸರಕಾರದ ರೈತ ವಿರೋಧಿ ಧೋರಣೆಗೆ ಸಾಕ್ಷಿಯಾಯಿತು.

ಆ ಬಳಿಕ ನಡೆದ ಅನೇಕಾನೇಕ ಭೂ ಕಬಳಿಕೆಯಂತಹ ಘಟನೆಗಳು ವಚನಭಂಗ ಸರಕಾರದ ಇನ್ನಷ್ಟು ಕ್ರೂರ ಮುಖವನ್ನು ಬಹಿರಂಗಪಡಿಸಿದವು.

ಭೂ ಹಗರಣ, ಸೈಟು ಕಬಳಿಕೆ, ನೈಸ್ ಕಂಪೆನಿಗೆ ಹಾಗೂ ಪೊಸ್ಕೊ ಸ್ಟೀಲ್‌ನಂತಹ ಬಂಡವಾಳಶಾಹಿ ಕಂಪೆನಿಗೆ ರೈತರ ಭೂಮಿಯನ್ನು ಧಾರೆ ಎರೆದುಕೊಡುತ್ತಿರುವ ಯಡಿಯೂರಪ್ಪ ನೇತೃತ್ವ ಸರಕಾರವು ವಚನ ಭಂಗ ಸರಕಾರ ಎಂಬುದು ಸಾಬೀತಾಗುತ್ತಲೇ ಇದೆ.

ಸಿನಾನ್, ಬಂದರ್

## ರಾಜ್ಯ ಸರಕಾರದ ಸಾಧನೆ: ಭ್ರಷ್ಟಾಚಾರದಲ್ಲಿ ನಂ.1

ಈಗಿನ ಸರಕಾರದ ಪ್ರಮುಖ ಸಾಧನೆ ಏನು ಎಂದು ಶಾಲಾ ವಿದ್ಯಾರ್ಥಿಗಳಲ್ಲಿ ಕೇಳಿದರೂ ಅವರಿಂದ ದೊರೆಯುವ ಉತ್ತರ ಭ್ರಷ್ಟಾಚಾರದಲ್ಲಿ ಕರ್ನಾಟಕವನ್ನು ನಂ.1 ಸ್ಥಾನಕ್ಕೇರಿಸಿದ್ದು.

ಪ್ರಸ್ತುತ ಆಡಳಿತ ನಡೆಸುತ್ತಿರುವ ರಾಜ್ಯದ ಬಿಜೆಪಿ ಸರಕಾರವು ಭ್ರಷ್ಟಾಚಾರ, ಭೂದರೋಡೆ, ಹಗರಣಗಳಿಂದ ಗಬ್ಬೆದ್ದು ನಾರುತ್ತಿದೆ. ಜನಸಾಮಾನ್ಯರಿಗೆ, ರೈತರಿಗೆ ಈ ಶಾಪಗ್ರಸ್ಥ ಸರಕಾರ ದೊಡ್ಡ ತಲೆ ನೋವಾಗಿ ಪರಿಣಮಿಸಿದೆ.

ಮಾಧ್ಯಮಗಳಲ್ಲಿ ಯಾವತ್ತೂ ನೋಡಿದರೂ ಶಾಸಕರ ಭೂಹಗರಣ ಬಯಲಿಗೆ, ಮುಖ್ಯಮಂತ್ರಿಯಿಂದ ಭೂಕಬಳಿಕೆ, ರಾಜ್ಯದ ಭೂಮಿಯನ್ನು ಮಕ್ಕಳ ಹೆಸರಿಗೆ ವರ್ಗಾಯಿಸುತ್ತಿರುವ ಮುಖ್ಯಮಂತ್ರಿ ಹೀಗೆ ಹಲವು ರೀತಿಯಲ್ಲಿ ಹಗರಣಗಳ ಬಗ್ಗೆ ವರದಿಗಳು ಪ್ರಕಟವಾಗುತ್ತಲೇ ಇದೆ. ಇದರಿಂದಾಗಿ ಜನತೆಯೇ ಖುದ್ದು ರಾಜ್ಯ ಸರಕಾರವೆಂದರೆ ಅದು ಭ್ರಷ್ಟರ ಸಾಮ್ರಾಜ್ಯ ಎಂದು ಹೀಯಾಳಿಸುತ್ತಿದ್ದಾರೆ.

ಇದೀಗ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಖೆಹರ್ ಕರ್ನಾಟಕ ಭ್ರಷ್ಟಾಚಾರದಲ್ಲಿ ನಂ.1 ಸ್ಥಾನದಲ್ಲಿದೆ ಎಂದು ಹೇಳುವ ಮೂಲಕ ರಾಜ್ಯ ಸರಕಾರಕ್ಕೆ ಸರ್ಟಿಫಿಕೇಟ್ ಕೂಡ ನೀಡಿ ರಾಜ್ಯ ಸರಕಾರಕ್ಕೆ ಕಪಾಳಮೋಕ್ಷ ಮಾಡಿರುವುದು ಉತ್ತಮ ಬೆಳವಣಿಗೆ.

ಮುಹ್ಸಿನ್, ಉಡುಪಿ




## ಪೊಲೀಸರ ವಿರುದ್ಧ ಕ್ರಮ ಅಗತ್ಯ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ''ಶಾಂತಿ ಕಾಪಾಡಲು ಹಸುಳೆಯನ್ನೇ ಕೊಂದರು'' ಲೇಖನವು ಫಾರ್ಬಸ್‌ಗಂಜ್‌ನಲ್ಲಿ ಪೊಲೀಸರ ಅಟ್ಟಹಾಸದ ಚಿತ್ರಣ ನೀಡಿದೆ.

ನಿತೀಶ್ ಕುಮಾರ್ ನೇತೃತ್ವದ ಜೆಡಿಯು-ಬಿಜೆಪಿ ಆಡಳಿತ ನಡೆಸುತ್ತಿರುವ ಬಿಹಾರದಲ್ಲಿ ಪೊಲೀಸರು ಕ್ರೌರ್ಯಕ್ಕೆ ಫೋರ್ಬಸ್‌ಗಂಜ್ ಸಾಕ್ಷಿಯಾಗಿ ನಿಂತಿದೆ. ಫೋರ್ಬಸ್‌ಗಂಜ್‌ನ ನಾಗರಿಕರು ಬಳಸುತ್ತಿರುವ ದಾರಿಯನ್ನು ಕೇವಲ ಬಿಜೆಪಿ ಪ್ರಮುಖನ ಪುತ್ರ ಮತ್ತು ಸ್ನೇಹಿತ ನಡೆಸುತ್ತಿರುವ ಕಂಪೆನಿಗಾಗಿ ಮುಚ್ಚುವ ಯೋಜನೆ ಹಾಕಲಾಗಿತ್ತು. ಆದರೆ ಇದನ್ನು ಅಲ್ಲಿನ ನಾಗರಿಕರು ಪ್ರತಿಭಟಿಸಿದರು.

ಯಾವ ಪೊಲೀಸರು ಅಲ್ಲಿನ ನಾಗರಿಕರಿಗೆ ರಕ್ಷಣೆ ನೀಡಬೇಕಿತ್ತೋ, ಅದೇ ಪೊಲೀಸರು ದೌರ್ಜನ್ಯ ನಡೆಸಿ ಹಲವು ಅಮಾಯಕರನ್ನು ಗುಂಡಿಕ್ಕಿ ಕೊಂದರು. ಗುಂಡಿಕ್ಕಿ ಕೊಂದ ಬಳಿಕವೂ ಪೊಲೀಸ್ ಪೇದೆಯೊಬ್ಬ ಅಮಾಯಕನನ್ನು ತನ್ನ ಬೂಟಿನಿಂದ ಬಲವಾಗಿ ಹೊಡೆಯುತ್ತಲೇ ಇದ್ದ. ಪೊಲೀಸರ ಈ ರಾಕ್ಷಸೀ ಕೃತ್ಯವನ್ನು ಅಂತರ್ಜಾಲ ತಾಣಗಳಲ್ಲಿ ಪ್ರಕಟಿಸಲಾಗಿರುವ ವೀಡಿಯೋ ತುಣುಕುಗಳಲ್ಲಿ ಕಾಣ ಸಿಗುತ್ತದೆ.

ಇತ್ತೀಚಿನ ದಿನಗಳಲ್ಲಿ ಪೊಲೀಸ್ ದೌರ್ಜನ್ಯದಂತಹ ಪ್ರಕರಣಗಳು ದೇಶವ್ಯಾಪಿಯಾಗಿ ನಡೆಯುತ್ತಿದೆ. ದೌರ್ಜನ್ಯ ನಡೆಸುವ ಇಂತಹ ಪೊಲೀಸ್ ಅಧಿಕಾರಿಗಳ ವಿರುದ್ಧ ಆಡಳಿತ ವರ್ಗವು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಿ.

ಶೌಕತ್ ಅಲಿ, ಸುರತ್ಕಲ್

## ದ್ವೇಷದ ರಾಜಕಾರಣ

ಆರೆಸ್ಸೆಸ್ ಎಂಬ ಭಯೋತ್ಪಾದಕ ಸಂಘಟನೆಗೆ ಎಲ್ಲರನ್ನು ಭಯೋತ್ಪಾದಕರಾಗಿ ಚಿತ್ರೀಕರಿಸುವ ಯೋಜನೆಯಿಂದಲೇ ಗೃಹ ಮಂತ್ರಿ ಅಶೋಕರಿಗೆ ಯಾರೋ ಮಾಡಿದ, ಮಾಡಿಸಿದ್ದ ಕುಕೃತ್ಯಕ್ಕೆ ಪ್ರಗತಿಪರ ಸಂಘಟನೆಯಾಗಿರುವ ಪಾಪ್ಯುಲರ್ ಫ್ರಂಟ್‌ನ್ನು ಬೊಟ್ಟು ಮಾಡಿ ದ್ವೇಷದ ರಾಜಕಾರಣವನ್ನು ಮಾಡುತ್ತಿದ್ದಾರೆ.

2-3 ವರ್ಷಗಳ ಹಿಂದೆಯೇ ಕೆಎಫ್‌ಡಿ ಎಂಬ ಸಂಘಟನೆ ಪಿಎಫ್‌ಐಯೊಂದಿಗೆ ವಿಲೀನಗೊಂಡಿದ್ದರೂ ಈ ಬಗ್ಗೆ ಅಲ್ಪಜ್ಞಾನವು ಸಹ ಇಲ್ಲದೆ ಗೃಹಮಂತ್ರಿಗೆ ಕೊಲೆ ಕೃತ್ಯ ಕೆಎಫ್‌ಡಿ ಸಂಘಟನೆ ನಡೆಸಿದೆ ಎಂಬ ಹೇಳಿಕೆ ನೀಡುತ್ತಿರುವುದು ಸೋಜಿಗವೇ ಸರಿ.

ಸ್ವತಃ ತಾವು ಸ್ವಾತಂತ್ರ್ಯೋತ್ಸವ ಆಚರಿಸುವ ನೈತಿಕತೆ ಕಳೆದುಕೊಂಡಿದ್ದರೂ ಪಿಎಫ್‌ಐಯು ಸ್ವಾತಂತ್ರ್ಯೋತ್ಸವದ ಪ್ರಯುಕ್ತ ನಡೆಸುತ್ತಾ ಬಂದಿರುವ ಫ್ರೀಡಂ ಪರೇಡ್‌ನ್ನು ತಡೆಯುವುದೇ ಇಲ್ಲಿ ಸರಕಾರದ ಮುಖ್ಯ ಗುರಿ ಎಂಬುದು ಎದ್ದು ಕಾಣುತ್ತಿದೆ.

ಇಲ್ಲಿ ಗಮನಿಸ ಬೇಕಾದ ಮತ್ತೊಂದು ವಿಷಯವೆಂದರೆ ಸರಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಇದನ್ನು ತಪ್ಪಿಸಲು ಧರ್ಮ, ದೇವಸ್ಥಾನ ಎಂದು ದಾರಿತಪ್ಪಿಸುತ್ತಿರುವುದು ಕನ್ನಡಿಗರಿಗೆ ಮನದಟ್ಟಾಗಿದೆ. ಜನರ ಗಮನವನ್ನು ಬೇರೆಡೆಗೆ ತಿರುಗಿಸುವುದು ಸರಕಾರಕ್ಕೆ ಅತೀ ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಯಾವುದೇ ಸಾಕ್ಷ್ಯಾಧಾರವಿಲ್ಲದೆಯೇ ಗೃಹ ಸಚಿವರು ಆರೋಪವನ್ನು ಸಂಘಟನೆಯ ಮೇಲೆ ಹೊರಿಸಿರುವುದು.

ಮಾಝಿನ್, ಮಲ್ಪೆ

## ಇದೆಂತಾ 'ಆತಂಕ' ಪಡೆ

ಕೆಲವು ದಿನಗಳ ಹಿಂದೆ ಚೆನ್ನೈಯಲ್ಲಿ ಭದ್ರತಾ ವಲಯದೊಳಕ್ಕೆ ಪ್ರವೇಶಿಸಿದ ಆರೋಪದಲ್ಲಿ ಭದ್ರತಾ ಸಿಬ್ಬಂದಿ 13ರ ಹರೆಯದ ದಿಲ್ಶನ್ ಎಂಬ ಬಾಲಕನನ್ನು ಗುಂಡಿಟ್ಟು ಕೊಂದು ಹಾಕಿದೆ.

ಭದ್ರತಾ ವಲಯದೊಳಗಿದ್ದ ಮರವೊಂದರಿಂದ ಹಣ್ಣು ಕೊಯ್ಯಲು ಪ್ರಯತ್ನಿಸಿದ್ದೇ ಈ ಬಾಲಕ ಮಾಡಿದ ತಪ್ಪು. ಬಾಲಕನನ್ನು ಹತ್ಯೆಗೈದಿರುವುದು ಸೇನಾ ಸಿಬ್ಬಂದಿಗಳ ರಾಕ್ಷಸೀ ಕೃತ್ಯವಾಗಿದೆ. ಸೇನೆ ಇರುವುದು ಈ ದೇಶದ ನಾಗರಿಕರ ರಕ್ಷಣೆಗಾಗಿ ಹೊರತು ಆತಂಕ ಹುಟ್ಟಿಸಲು ಅಲ್ಲ. ಸೇನೆಗೆ ನೀಡಿರುವ ಬಂದೂಕನ್ನು ಯಾವುದೇ ಕಾರಣಕ್ಕೂ ದುರುಪಯೋಗಪಡಿಸುವಂತಿಲ್ಲ. ಆದರೆ ಇಲ್ಲಿ ಸೇನಾ ಸಿಬ್ಬಂದಿಗಳು ಮಾಡಿರುವುದು ಘೋರ ಅಪರಾಧ.

ಸರಕಾರ ಕೂಡಲೇ ಎಚ್ಚೆತ್ತುಕೊಂಡು ಗುಂಡು ಹಾರಿಸಿ ಬಾಲಕನನ್ನು ಹತ್ಯೆಗೈದ ಸಿಬ್ಬಂದಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿ. ಸಂತ್ರಸ್ತ ಕುಟುಂಬಕ್ಕೆ ಪರಿಹಾರವನ್ನೂ ನೀಡಲಿ.

ರಾಜೇಶ್, ಉಡುಪಿ

## ಶಾಸಕರ ವಿರುದ್ಧ ಕ್ರಮ ಕೈಗೊಳ್ಳಿ

ಇತ್ತೀಚಿಗೆ ಟಿವಿ ಚಾನೆಲ್‌ವೊಂದರಲ್ಲಿ ಮುಖಾಮುಖಿ ಕಾರ್ಯಕ್ರಮ ನಡೆಯುತ್ತಿದ್ದ ಸಂದರ್ಭದಲ್ಲಿ ಜಯನಗರದ ಶಾಸಕ ವಿಜಯಕುಮಾರ್ ಮುಸ್ಲಿಮರ ಭಾವನೆಗಳಿಗೆ ನೋವಾಗುವ ರೀತಿಯಲ್ಲಿ ಮಾತನಾಡಿದ್ದಾರೆ.

ಮಸೀದಿ ಮೇಲೆ ಭಗವಾಧ್ವಜ ಹಾರಿಸುತ್ತೇವೆ ಎನ್ನುತ್ತಾ ಬಹಿರಂಗವಾಗಿ ಕೋಮು ಪ್ರಚೋದನಾ ಹೇಳಿಕೆಯನ್ನು ನೀಡಿದ್ದಾರೆ.

ಜಾತ್ಯತೀತ ಭಾರತ ದೇಶದ ಸಂವಿಧಾನದಲ್ಲಿ ಎಲ್ಲಾ ಜಾತಿ ಧರ್ಮದವರಿಗೂ ಸಮಾನವಾಗಿ ಜೀವಿಸುವ ಹಕ್ಕು ಇದೆ.

ಜನಪ್ರತಿನಿಧಿಯಾಗಿ ಇಂತಹ ಕೋಮು ಪ್ರಚೋದಕ ಹೇಳಿಕೆ ನೀಡುವ ಶಾಸಕ ಜಯಕುಮಾರ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೇಲೆ ಕ್ರಮ ಜರಗಿಸಬೇಕು.

ಶಬ್ಬೀರ್, ಬೆಂಗಳೂರು

## ಮುತಾಲಿಕ್‌ನಿಂದ ವಿಧ್ವಸಂಕ ಕೃತ್ಯಕ್ಕೆ ಸಂಚು!

ಹುಬ್ಬಳ್ಳಿ ಸ್ಫೋಟ ಪ್ರಕರಣದ ಆರೋಪಿ ನಾಗರಾಜ ಜಂಬಗಿ ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್‌ನ ಆಪ್ತನಾಗಿದ್ದ ಸುದ್ದಿ ಈಗಾಗಲೇ ಜಗಜ್ಜಾಹೀರಾಗಿದೆ.

ಭಯೋತ್ಪಾದನೆಯ ವಿರುದ್ಧ ಹೋರಾಟ ನಡೆಸಲು ತನ್ನ ನೇತೃತ್ವದಲ್ಲಿಯೇ ಇದೀಗ ಬೆಳಗಾವಿಯ ನಂದಗಾಂವದಲ್ಲಿ 180 ಯುವಕರಿಗೆ ಮಿಲಿಟರಿ ತರಬೇತಿ ನೀಡಲಾಗುತ್ತಿದೆ ಎಂದು ಪ್ರಮೋದ್ ಮುತಾಲಿಕ್ ನೇತೃತ್ವದಲ್ಲಿ ಟಿವಿ ವಾಹಿನಿಯಲ್ಲಿ ಬಹಿರಂಗಗೊಳಿಸಿದ್ದಾನೆ.

ಪ್ರಮೋದ್ ಮುತಾಲಿಕ್‌ನ ಆಪ್ತ ಮಿತ್ರ ನಾಗರಾಜ ಜಂಬಗಿ ಸ್ಫೋಟ ಪ್ರಕರಣದ ಆರೋಪಿ. ಮಾತ್ರವಲ್ಲ ಶ್ರೀರಾಮ ಸೇನೆಯ ಕಾರ್ಯಕರ್ತರು ಈ ಹಿಂದೆ ಪಬ್ ದಾಳಿ, ಪ್ರೇಮಿಗಳ ಮೇಲೆ ದಾಳಿ... ಮುಂತಾದ ದುಷ್ಕೃತ್ಯಗಳನ್ನು ನಡೆಸುತ್ತಿರುವಾಗ ಮುತಾಲಿಕ್‌ನ ನೇತೃತ್ವದಲ್ಲಿ ತಯಾರಾಗುತ್ತಿರುವ ಮಿಲಿಟರಿ ಸೈನ್ಯವು ದುಷ್ಕೃತ್ಯದಲ್ಲಿ ಭಾಗವಹಿಸದಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಹುಬ್ಬಳ್ಳಿ ಸೇರಿದಂತೆ ಮುಂತಾದ ಸ್ಫೋಟಗಳನ್ನು ಮುಸ್ಲಿಮರ ತಲೆಗೆ ಕಟ್ಟಿ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿರುವ ಸಂಘಪರಿವಾರ ಇದೀಗ ಬಹಿರಂಗವಾಗಿಯೇ ಅದನ್ನು ಸಮರ್ಥಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಉದಾಹರಣೆ ಎಂಬಂತೆ ಜಯನಗರದ ಬಿಜೆಪಿ ಶಾಸಕ ವಿಜಯಕುಮಾರ್ ಹಿಂದುತ್ವವಾದಿಗಳು ನಡೆಸಿದ ಸ್ಫೋಟಗಳನ್ನು 'ಪ್ರತಿರೂಪ' ಎಂದು ಬಹಿರಂಗವಾಗಿಯೇ ಸಮರ್ಥಿಸಿಕೊಂಡಿದ್ದಾರೆ.

ಶಾಂತಿ- ಸೌಹಾರ್ದತೆಯನ್ನು ಬಯಸುವ ಜನರು ಇಂತಹ ವಿಧ್ವಂಸಕ ಕೃತ್ಯ ಮತ್ತು ಹೇಳಿಕೆಗಳ ವಿರುದ್ಧ ಪ್ರತಿಭಟಿಸದಿದ್ದರೆ ಮುತಾಲಿಕನ ಹಿಂಬಾಲಕರು ಆತನ ನೇತೃತ್ವದಲ್ಲಿ ಇನ್ನಷ್ಟು ಸಮಾಜ ಘಾತುಕ ಕೃತ್ಯಗಳನ್ನು ನಡೆಸಬಹುದು. ಇದಕ್ಕೆ ಮುನ್ನ ಜನರು ಮತ್ತು ಸರಕಾರ ಎಚ್ಚೆತ್ತುಕೊಳ್ಳಬೇಕಾಗಿದೆ.

ಎಂ.ಶಬೀರ್

# ನೆರೆಸಂತ್ರಸ್ತರ ಶೋಕಗೀತೆ

## ಸರಕಾರದ ಭಗವದ್ಗೀತೆ

■ ಪಿಎನ್‌ಬಿ






**ಪ್ರವಾಹದ ನೀರು ಇಳಿದು ಇಂದಿಗೆ ಎರಡು ವರ್ಷ ಸಂದರೂ ಸಂತ್ರಸ್ತರ ಪಾಡು ಹಾಗೆಯೇ ಇದೆ. ಸಂತ್ರಸ್ತರ ಮನೆನಿರ್ಮಾಣ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ರಸ್ತೆ, ಶಾಲೆ, ವಿದ್ಯುತ್ ವ್ಯವಸ್ಥೆಯನ್ನು ಮರುಸ್ಥಾಪಿಸಲಾಗಿಲ್ಲ. ಇಂತಹ ಸಂದರ್ಭದಲ್ಲೇ ಸರಕಾರವು ಭಗವದ್ಗೀತೆ ಅಭಿಯಾನವನ್ನು ಹಮ್ಮಿಕೊಂಡಿರುವುದು ಎಷ್ಟೊಂದು ಅಮಾನವೀಯವಲ್ಲವೇ?**

ಪ್ರಜಾತಂತ್ರ ಆಡಳಿತ ವ್ಯವಸ್ಥೆ ಹೊಂದಿರುವ ರಾಜ್ಯದಲ್ಲಿ ಏನೆಲ್ಲಾ ನಡೆಯಬಾರದೋ ಅವೆಲ್ಲವುಗಳಿಗೆ ಕರ್ನಾಟಕ ರಾಜ್ಯ ಸಾಕ್ಷಿಯಾಗುತ್ತಿದೆ. ಫ್ಯಾಷಿಸಂ ಒಂದೇ ಆಡಳಿತ ಮಂತ್ರ ಎಂಬುದು ದಿನೇದಿನೇ ದಿಟವಾಗುತ್ತಿದೆ. ಅದಕ್ಕೊಂದು ಹೊಸ ಸೇರ್ಪಡೆ ಸರಕಾರದ ಭಗವದ್ಗೀತೆ ಅಭಿಯಾನ. ಭಗವದ್ಗೀತೆ ಪಕ್ಕಕ್ಕಿಟ್ಟು ಉತ್ತರ ಕರ್ನಾಟಕದ ನೆರೆಸಂತ್ರಸ್ತರ ಶೋಕಗೀತೆ ಏನೆಂಬುದನ್ನು ಮೊದಲು ಗಮನಿಸೋಣ. ಕಾರಣ, ನಿರಂತರ ಎರಡನೇ ವರ್ಷವೂ ಸೂರಿಲ್ಲದೆ ಮಳೆಗೆ ಮೈಯೊಡ್ಡಿ ದಿನದೂಡುತ್ತಿರುವ ನೆರೆಸಂತ್ರಸ್ತರ ಪಾಡು ನಾಯಿಪಾಡಾಗಿ ಬಿಟ್ಟಿದೆ. ನೆರೆಪರಿಹಾರದ ಹೆಸರಿನಲ್ಲಿ ಬಿಜೆಪಿ ಸರಕಾರ ಬೀದಿಗಿಳಿದು ಸಂಗ್ರಹಿಸಿದ ಕೋಟ್ಯಂತರ ರೂಪಾಯಿ ಹಣವು ಈಗಾಗಲೇ ಸರಕಾರ ಎದುರಿಸಿದ ಹಲವು ಚುನಾವಣೆಗಳಿಗೆ ಖರ್ಚಾಗಿದೆ. ಪ್ರವಾಹದ ನೀರು ಇಳಿದು ಇಂದಿಗೆ ಎರಡು ವರ್ಷ ಸಂದರೂ ಸಂತ್ರಸ್ತರ ಪಾಡು ಹಾಗೆಯೇ ಇದೆ. ಸಂತ್ರಸ್ತರ ಮನೆನಿರ್ಮಾಣ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ರಸ್ತೆ, ಶಾಲೆ, ವಿದ್ಯುತ್ ವ್ಯವಸ್ಥೆಯನ್ನು ಮರುಸ್ಥಾಪಿಸಲಾಗಿಲ್ಲ. ಇಂತಹ ಸಂದರ್ಭದಲ್ಲೇ ಸರಕಾರವು ಭಗವದ್ಗೀತೆ ಅಭಿಯಾನವನ್ನು ಹಮ್ಮಿಕೊಂಡಿರುವುದು ಎಷ್ಟೊಂದು ಅಮಾನವೀಯವಲ್ಲವೇ? ಭಗವದ್ಗೀತೆಯನ್ನು ಕೇಳಿ ಒಳ್ಳೆಯದಾಗಬೇಕಾಗಿರುವುದು ಸರಕಾರವೇ ಹೊರತು ಏನೂ ಅರಿಯದ ಮುಗ್ಧ ಶಾಲಾ ವಿದ್ಯಾರ್ಥಿಗಳಲ್ಲ. ಇಂದು ರಾಜ್ಯದಲ್ಲಿ ಭ್ರಷ್ಟಾಚಾರ, ಅಕ್ರಮ, ಅನಾಚಾರದಿಂದಾಗಿ ಗಬ್ಬೆದ್ದು ನಾರುತ್ತಿರುವುದು ಸರಕಾರವೇ ಹೊರತು ಶಾಲೆಗಳಾಗಲೀ, ವಿದ್ಯಾರ್ಥಿಗಳಾಗಲೀ ಅಲ್ಲ. ಒಂದು ವೇಳೆ ಭಗವದ್ಗೀತೆ ಪಠಣ, ಅಧ್ಯಯನ ಮಾಡುವುದರಿಂದ ಸಂಸ್ಕಾರ ಬೆಳೆಯುತ್ತದೆ, ಮಾನವೀಯ ಗುಣ ಬೆಳೆಯುತ್ತದೆ ಎಂಬ ನಂಬಿಕೆ ಸರಕಾರಕ್ಕೆ ನಿಜವಾಗಿಯೂ ಇದ್ದಿದ್ದರೆ ಖಂಡಿತವಾಗಿಯೂ ಅದನ್ನು ಪಠಣ, ಅಧ್ಯಯನ ಮಾಡಲು ಬಿಜೆಪಿ ಶಾಸಕ, ಸಚಿವರಿಗಿಂತ ಅರ್ಹರಾದವರು ಬೇರಾರೂ ಈ ರಾಜ್ಯದಲ್ಲಿ ಇರಲಿಕ್ಕಿಲ್ಲ.

**ನೆರೆಸಂತ್ರಸ್ತರ ಶೋಕಗೀತೆ**

2009ರ ಸೆಪ್ಟೆಂಬರ್‌ನಲ್ಲಿ ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಭೀಕರ ಪ್ರವಾಹ ತಲೆದೋರಿತ್ತು. ಆಗ ಯಡಿಯೂರಪ್ಪ ಮತ್ತು ಅವರ ಸಚಿವ ಸಂಪುಟವು ಸುತ್ತೂರು ಮಠದಲ್ಲಿ ಬೈಠಕ್‌ನಲ್ಲಿ ಕುಳಿತು ನರೇಂದ್ರ ಮೋದಿಯಿಂದ ಪಾಠ ಕೇಳುತ್ತಿತ್ತು. ಬೈಠಕ್ ಮುಗಿಸಿ ನೇರ ಮಂತ್ರಾಲಯಕ್ಕೆ ತೆರಳಿದ ಶೋಭಾ ಕರಂದ್ಲಾಜೆ ಸಹಿತ ಪ್ರಮುಖ ಸಚಿವರು ಜಲಾವೃತಗೊಂಡಿರುವ ಗ್ರಾಮದ ಕಡೆಗೆ ಧಾವಿಸಲೇ ಇಲ್ಲ. ನೀರು ಇಳಿದ ಬಳಿಕವೂ ಅವರ ಅಹವಾಲನ್ನು ಕೇಳಲೇ ಇಲ್ಲ. ಅಂದು ಉತ್ತರ ಕರ್ನಾಟಕದ ಗ್ರಾಮಗಳೆಲ್ಲ ಜಲಾವೃತಗೊಂಡು ಜನರು ಸಂತ್ರಸ್ತರಾಗಿದ್ದರೂ ಸರಕಾರ ತಲೆಕೆಡಿಸಿಕೊಂಡದ್ದು ಮಂತ್ರಾಲಯಕ್ಕೆ ರಸ್ತೆ ಸಂಪರ್ಕ ಕಲ್ಪಿಸುವ ಬಗ್ಗೆ ಮಾತ್ರ. ಇವತ್ತಿಗೂ ಬಿಜೆಪಿಯ ಅದೇ ಧೋರಣೆ ಮುಂದುವರಿದಿದೆ. ಪ್ರವಾಹ ಸಂಭವಿಸಿ ಎರಡು ವರ್ಷ ಸಂದರೂ ಸಂತ್ರಸ್ತರಿಗೆ ಪರಿಹಾರ ಒದಗಿಸಿಕೊಡುವಲ್ಲಿ ಇನ್ನೂ ಮನಸ್ಸು ಮಾಡಿಲ್ಲ. ಸದ್ಯಕ್ಕೆ ಸರಕಾರದ ಚಿತ್ತ ಇರುವುದು ಭಗವದ್ಗೀತೆಯ ಮಂತ್ರ ಪಠಿಸುವುದರಲ್ಲಿ ಮಾತ್ರ.

*ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ಸಂಗ್ರಹವಾದ ಹಣ ಒಟ್ಟು 2476.48 ಕೋಟಿ ರೂಪಾಯಿ. ಈ ಪೈಕಿ ಕೇಂದ್ರ ಸರಕಾರವು 947 ಕೋಟಿ ರೂಪಾಯಿಗಳನ್ನು ನೀಡಿತ್ತು. ಹೀಗೆ 2476.48 ಕೋಟಿ ರೂಪಾಯಿಗಳಲ್ಲಿ ಈವರೆಗೆ ಸರಕಾರ ನೆರೆಸಂತ್ರಸ್ತರಿಗೆಂದು ಖರ್ಚು ಮಾಡಿರುವುದು ಕೇವಲ 455 ಕೋಟಿ ರೂಪಾಯಿ ಮಾತ್ರ ! ನೆರೆಪೀಡಿತ ಪ್ರದೇಶಗಳಲ್ಲಿ ಸರಕಾರಿ ದಾಖಲೆಗಳ ಪ್ರಕಾರ 58,672 ಮನೆಗಳು ಸಂಪೂರ್ಣವಾಗಿ ನಾಶಗೊಂಡಿವೆ. ಒಟ್ಟು 6,93,546 ಹಾನಿಗೊಳಗಾಗಿವೆ ಎಂದು ಸರಕಾರಿ ದಾಖಲೆ ತಿಳಿಸುತ್ತದೆ.*

2009ರಲ್ಲಿ ಸಂಭವಿಸಿದ್ದ ಪ್ರವಾಹವು ಶತಮಾನದ ಅತಿದೊಡ್ಡ ಪ್ರಕೃತಿ ವಿಕೋಪವೆನಿಸಿಕೊಂಡಿತ್ತು. ಒಟ್ಟು 229 ಮಂದಿ ಭಾರೀ ಪ್ರವಾಹಕ್ಕೆ ಬಲಿಯಾಗಿದ್ದರು. 25 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದ ಫಸಲು ಕೊಚ್ಚಿ ಹೋಗಿತ್ತು. ಇಡೀ ರಾಜ್ಯದ ಜನತೆ ಉತ್ತರ ಕರ್ನಾಟಕದ ಜನತೆಯ ನೋವಿಗೆ ಸ್ಪಂದಿಸಿತು. ಅಲ್ಲಲ್ಲಿ ಮಾನವೀಯ ನೆಲೆಯಲ್ಲಿ ಪ್ರವಾಹ ನಿಧಿ ಸಂಗ್ರಹಿಸಲಾಯಿತು. ಸ್ವತಹ ಯಡಿಯೂರಪ್ಪ ಅವರು ಕೂಡ ಬೀದಿಯಲ್ಲಿ ಸಂಚರಿಸಿ ದೇಣಿಗೆ ಸಂಗ್ರಹಿಸಿ, ಸಂಗ್ರಹವಾದ ಮೊತ್ತದ ಲೆಕ್ಕವು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿತ್ತು. ಎಷ್ಟು ವರ್ಣ ರಂಜಿತವಾಗಿ ದೇಣಿಗೆ ಸಂಗ್ರಹ ಸುದ್ದಿಯನ್ನು ಬಿತ್ತರಿಸಲಾಗಿತ್ತೆಂದರೆ, ನೆರೆ ಸಂತ್ರಸ್ತರ ಪುನರ್ವಸತಿ ಕಾರ್ಯವು ಇನ್ನು ಒಂದೇ ವಾರದಲ್ಲಿ ಮುಗಿದುಬಿಡುತ್ತದೆಯೇನೋ ಎಂಬಂತೆ !

ಆದರೆ ಇಲ್ಲಿ ನಡೆದದ್ದೇ ಬೇರೆ. ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ಸಂಗ್ರಹವಾದ ಹಣ ಒಟ್ಟು 2476.48 ಕೋಟಿ ರೂಪಾಯಿ. ಈ ಪೈಕಿ ಕೇಂದ್ರ ಸರಕಾರವು 947 ಕೋಟಿ ರೂಪಾಯಿಗಳನ್ನು ನೀಡಿತ್ತು. ಹೀಗೆ 2476.48 ಕೋಟಿ ರೂಪಾಯಿಗಳಲ್ಲಿ ಈವರೆಗೆ ಸರಕಾರ ನೆರೆಸಂತ್ರಸ್ತರಿಗೆಂದು



ಖರ್ಚು ಮಾಡಿರುವುದು ಕೇವಲ 455 ಕೋಟಿ ರೂಪಾಯಿ ಮಾತ್ರ ! ನೆರೆಪೀಡಿತ ಪ್ರದೇಶಗಳಲ್ಲಿ ಸರಕಾರಿ ದಾಖಲೆಗಳ ಪ್ರಕಾರ 58,672 ಮನೆಗಳು ಸಂಪೂರ್ಣವಾಗಿ ನಾಶಗೊಂಡಿವೆ. ಒಟ್ಟು 6,93,546 ಹಾನಿಗೊಳಗಾಗಿವೆ ಎಂದು ಸರಕಾರಿ ದಾಖಲೆ ತಿಳಿಸುತ್ತದೆ. ಇಷ್ಟು ಮನೆಗಳನ್ನು ನಿರ್ಮಿಸಿ ಕೊಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಇದೇ ವೇಳೆ ಕಂದಾಯ ಇಲಾಖೆಯು ನಡೆಸಿದ ನೆರೆ ನಷ್ಟ ಅಂದಾಜಿನ ಪ್ರಕಾರ, ಒಟ್ಟು 59,131 ಮನೆಗಳು ಸಂಪೂರ್ಣ ನಾಶಗೊಂಡಿವೆ. ಏನೇ ಆದರೂ ಸರಕಾರವು 31,698 ಮನೆಗಳನ್ನು ನಿರ್ಮಿಸಿಕೊಟ್ಟಿರುವುದಾಗಿ ಲೆಕ್ಕ ತೋರಿಸುತ್ತಿದೆ. ಇನ್ನೂ 1544 ಮನೆಗಳನ್ನು ನಿರ್ಮಿಸಲು ಬಾಕಿ ಇರುವುದಾಗಿ ಹೇಳಲಾಗುತ್ತಿದೆ. ವಾಸ್ತವದಲ್ಲಿ ಸರಕಾರವು ಈಗಾಗಲೇ ನಿರ್ಮಿಸಿಕೊಟ್ಟಿರುವ ಮನೆಗಳ ಸೀಟುಗಳು ಕಳೆದ ಮಳೆಗಾಲದಲ್ಲೇ ಗಾಳಿ ಸೇರಿವೆ. ಅಂತಹ ಪುನರ್ವಸತಿಯನ್ನು ಕೈಗೊಂಡು ಕೈತೊಳೆದುಕೊಂಡಿರುವ ಸರಕಾರಕ್ಕೆ ಸಂತ್ರಸ್ತ ಜನತೆ ಹಿಡಿಶಾಪ ಹಾಕುತ್ತಿದ್ದಾರೆ. ವಿಶೇಷವೆಂದರೆ ಕಂದಾಯ ಸಚಿವ ಕರುಣಾಕರ ರೆಡ್ಡಿಯ ತವರೂರು ಆಗಿರುವ ಬಳ್ಳಾರಿಯಲ್ಲಿ 3405 ಮನೆಗಳ ಕಾಮಗಾರಿ ನಡೆದಿದೆ. ಈ ಪ್ರದೇಶದಲ್ಲಿ 6571 ಮನೆಗಳನ್ನು ನಿರ್ಮಿಸಬೇಕಾಗಿತ್ತು.

> ***ವಾಸ್ತವದಲ್ಲಿ ನೆರೆಸಂತ್ರಸ್ತರ ಬಳಿಗೆ ಪರಿಹಾರ ಮೊತ್ತವು ಇನ್ನೂ ಸಮರ್ಪವಾಗಿ ತಲುಪಿಲ್ಲ. ಸಂತ್ರಸ್ತರಿಗೆ ಮುಖ್ಯವಾಗಿ ಬೇಕಾಗಿರುವುದು ಚಳಿ, ಮಳೆಯಿಂದ ರಕ್ಷಣೆ ಪಡೆಯಲು ಆಸರೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಇಲ್ಲಿನ ಜನತೆ ನಿರಾಶ್ರಿತರಾಗಿ ನರಕ ಸದೃಶ ಜೀವನ ಸಾಗಿಸುತ್ತಿದ್ದಾರೆ. ಪ್ರವಾಹದ ನಂತರ ದಿನಗಳಲ್ಲಿ ಕಾಣಿಸಿಕೊಂಡ ಆರೋಗ್ಯ ಸಂಬಂಧಿ ತೊಂದರೆಗಳಿಗೆ ಅಲ್ಲಿ ಯಾವುದೇ ವೈದ್ಯಕೀಯ ಸೇವೆಯನ್ನು ಒದಗಿಸಲಾಗಿರಲಿಲ್ಲ. ಮಾತ್ರವಲ್ಲದೆ, ಕುಡಿಯುವ ನೀರಿನ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲದೇ ಇರುವುದರಿಂದ ಸಾಂಕ್ರಾಮಿಕ ರೋಗವೂ ಅಲ್ಲಿ ಕಾಣಿಸಿಕೊಂಡಿತ್ತು. ಆದರೆ ಸರಕಾರವು ನೆರೆಸಂತ್ರಸ್ತರಿಗೆಂದು ದೇಣಿಗೆ ಸಂಗ್ರಹಿಸುವಲ್ಲಿ ತೋರಿದ ಉತ್ಸಾಹ, ಕಾಳಜಿಯನ್ನು ಆದನ್ನು ತಲುಪಿಸುವ ಬಗ್ಗೆ ತೋರಿಸಲಿಲ್ಲ.***

ಈ ಬಾರಿ ನೆರೆ ಸಂತ್ರಸ್ತರು ಮೂರನೆ ಮಳೆಗಾಲವನ್ನು ಎದುರಿಸುತ್ತಿದ್ದಾರೆ. ಇಲ್ಲಿ ಮತ್ತೊಮ್ಮೆ ಪ್ರವಾಹ ತಲೆದೋರಿದರೂ ಅಚ್ಚರಿಯಿಲ್ಲ. ತಲೆಯ ಮೇಲೆ ಸೂರಿಲ್ಲದೆ ಟರ್ಪಾಲು ಹೊದ್ದುಕೊಂಡು ಜೋಪಡಿಗಳಲ್ಲಿ ಕಾಲ ಕಳೆಯುತ್ತಿರುವ ನೆರೆಸಂತ್ರಸ್ತರಿಗೆ ಸಮರ್ಪಕ ವೈದ್ಯಕೀಯ ಸೇವೆಯನ್ನು ಕಲ್ಪಿಸಲಾಗಿಲ್ಲ. ಕುಡಿಯುವ ನೀರಿಗೆ ಹಿಂದೆಯೂ ಸಮಸ್ಯೆ ಇತ್ತು. ಈಗ ಅದು ವಿಪರೀತವಾಗಿದೆ. ರಸ್ತೆ, ವಿದ್ಯುತ್, ಚರಂಡಿ ವ್ಯವಸ್ಥೆಯಂತೂ ಅವ್ಯವಸ್ಥೆಯ ಆಗರವಾಗಿಬಿಟ್ಟಿದೆ. ನೆರೆಸಂತ್ರಸ್ತರಿಗೆ ಪರಿಹಾರಧನದ ರೂಪದಲ್ಲಿ ಸರಕಾರವು 50,900ರಿಂದ 5 ಲಕ್ಷದವರೆಗೆ ವಿತರಿಸಿದೆ. ಒಟ್ಟು 1703.41 ಕೋಟಿ ರೂಪಾಯಿ ಹಣವನ್ನು ನೆರೆಪರಿಹಾರಕ್ಕಾಗಿ ವ್ಯಯಿಸಲಾಗಿದೆ ಎಂಬುದು ಸರಕಾರದ ಲೆಕ್ಕ.

ವಾಸ್ತವದಲ್ಲಿ ನೆರೆಸಂತ್ರಸ್ತರ ಬಳಿಗೆ ಪರಿಹಾರ ಮೊತ್ತವು ಇನ್ನೂ ಸಮರ್ಪವಾಗಿ ತಲುಪಿಲ್ಲ. ಸಂತ್ರಸ್ತರಿಗೆ ಮುಖ್ಯವಾಗಿ ಬೇಕಾಗಿರುವುದು ಚಳಿ, ಮಳೆಯಿಂದ ರಕ್ಷಣೆ ಪಡೆಯಲು ಆಸರೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಇಲ್ಲಿನ ಜನತೆ ನಿರಾಶ್ರಿತರಾಗಿ ನರಕ ಸದೃಶ ಜೀವನ ಸಾಗಿಸುತ್ತಿದ್ದಾರೆ. ಪ್ರವಾಹದ ನಂತರ ದಿನಗಳಲ್ಲಿ ಕಾಣಿಸಿಕೊಂಡ ಆರೋಗ್ಯ ಸಂಬಂಧಿ ತೊಂದರೆಗಳಿಗೆ ಅಲ್ಲಿ ಯಾವುದೇ ವೈದ್ಯಕೀಯ ಸೇವೆಯನ್ನು ಒದಗಿಸಲಾಗಿರಲಿಲ್ಲ. ಮಾತ್ರವಲ್ಲದೆ, ಕುಡಿಯುವ ನೀರಿನ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲದೇ ಇರುವುದರಿಂದ ಸಾಂಕ್ರಾಮಿಕ ರೋಗವೂ ಅಲ್ಲಿ ಕಾಣಿಸಿಕೊಂಡಿತ್ತು. ಆದರೆ ಸರಕಾರವು ನೆರೆಸಂತ್ರಸ್ತರಿಗೆಂದು ದೇಣಿಗೆ ಸಂಗ್ರಹಿಸುವಲ್ಲಿ ತೋರಿದ ಉತ್ಸಾಹ, ಕಾಳಜಿಯನ್ನು ಅದನ್ನು ತಲುಪಿಸುವ ಬಗ್ಗೆ ತೋರಿಸಲಿಲ್ಲ. ದೇಣಿಗೆ ಸಂಗ್ರಹವಾದ ಕೆಲವೇ ತಿಂಗಳಲ್ಲಿ




ಕೃಪೆ: ಪ್ರಜಾವಾಣಿ

ಎರಡು ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ ನೆರೆ ಸಂಭವಿಸಿ ಜನರು ಸಂಕಟಪಡುತ್ತಿದ್ದರೆ, ಮುಖ್ಯಮಂತ್ರಿ ಸಹಿತ ಬಿಜೆಪಿ ಶಾಸಕರು ಸುತ್ತೂರಿನಲ್ಲಿ ಯೋಗಾಸನದಲ್ಲಿ ಮಗ್ನರಾಗಿದ್ದನ್ನು ಪ್ರತಿಬಿಂಬಿಸುವ ವ್ಯಂಗ್ಯ ಚಿತ್ರ.

ಬೆಂಗಳೂರು ಮಹಾನಗರ ಪಾಲಿಕೆಗೆ ನಡೆದ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಸರಕಾರವು ತನ್ನ ಪಕ್ಷದ ಅಭ್ಯರ್ಥಿಗಳ ಚುನಾವಣಾ ಪ್ರಚಾರಕ್ಕೆ ಇದೇ ಹಣವನ್ನು ದುರ್ಬಳಕೆ ಮಾಡಿಕೊಂಡಿತ್ತು ಎಂಬ ಆರೋಪವೂ ಜೋರಾಗಿ ಕೇಳಿಬರುತ್ತಿತ್ತು.

ಮತ್ತೊಂದು ಕಡೆ ಕಾಂಗ್ರೆಸ್ ಪಕ್ಷವು ತಾನು ಸಂಗ್ರಹಿಸಿದ್ದ ಸಂತ್ರಸ್ತರ ಪರಿಹಾರ ನಿಧಿಯನ್ನು ಪಕ್ಷದ ಕ್ಷೇಮಾಭಿವೃದ್ಧಿಗೆ ಬಳಸಿಕೊಂಡದ್ದು ಮಾಧ್ಯಮದಲ್ಲಿ ಭಾರೀ ಸುದ್ದಿಯಾಯಿತು. ಮುಖಂಡರ ವಿಮಾನ ಪ್ರಯಾಣದ ವೆಚ್ಚ, ಕೆಪಿಸಿಸಿ ಕಚೇರಿಗೆ ಬಣ್ಣ ಬಳಿದ ವೆಚ್ಚವನ್ನೆಲ್ಲ ಇದೇ ಹಣದಿಂದ ಭರಿಸಲಾಗಿತ್ತು ಎಂಬುದನ್ನು ಸುದ್ದಿಚಾನೆಲ್‌ವೊಂದು ಬಹಿರಂಗಪಡಿಸಿತ್ತು. ಹೀಗಾಗಿ ನೆರೆಸಂತ್ರಸ್ತರು ಇಂದಿಗೂ ಸಂತ್ರಸ್ತರಾಗಿಯೇ ಉಳಿಯುವಂತಾಗಿದೆ.

ನೆರೆಪೀಡಿತರಾಗಿರುವ ಉತ್ತರಕರ್ನಾಟಕದ ಜನತೆ ಎಂದರೆ ಬಹುಪಾಲು ಗ್ರಾಮೀಣ ನಿವಾಸಿಗಳು ಮತ್ತು ತೀರಾ ಬಡವರು. ತಮ್ಮ ಪಾಲಿಗೆ ಸಿಕ್ಕಿದ್ದೇ ಪಂಚಾಮೃತವೆಂದು ತಿಳಿದುಕೊಂಡು ಸ್ಥಳೀಯಾಡಳಿತ ನೀಡುವ ಪುಡಿಗಾಸು ಪರಿಹಾರವನ್ನೇ ಪಡೆದು ಸುಮ್ಮನಾಗುವ ಜನ. ಮಾತ್ರವಲ್ಲ, ಮಾಧ್ಯಮಗಳು ಸಂತ್ರಸ್ತರ ಈಗಿನ ಪರಿಸ್ಥಿತಿಯ ಬಗ್ಗೆ ಬೆಳಕು ಚೆಲ್ಲುತ್ತಿಲ್ಲ. ಒಂದು ವೇಳೆ ನ್ಯೂಸ್ ಚಾನೆಲ್‌ಗಳು ತಮ್ಮ ಕ್ಯಾಮರಾಗಳನ್ನು ಉತ್ತರ ಕರ್ನಾಟಕದ ನೆರೆಪೀಡಿತ ಪ್ರದೇಶಗಳತ್ತ ತಿರುಗಿಸಿದರೆ ಸರಕಾರದ ಮಹಾ ವಂಚನೆಯು ಅನಾವರಣಗೊಳ್ಳುವುದು ಖಚಿತ. ಆದರೆ ಸದ್ಯ ಈ ಕ್ಯಾಮರಾಗಳು ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಹಿಂಬಾಲಿಸುತ್ತಿವೆ. ನ್ಯೂಸ್ ಕ್ಯಾಮರಾಗಳು ಅವರು ಧರ್ಮಸ್ಥಳಕ್ಕೆ ಹೋಗುವರೋ ಇಲ್ಲವೋ ಎಂಬುದನ್ನು ಖಾತರಿಪಡಿಸಿಕೊಳ್ಳುತ್ತಿವೆ.

ಹೊರಗಡೆ ಜೋರಾಗಿ ಮಳೆ ಬೀಸುತ್ತಿರುವಾಗ ಮುಖ್ಯಮಂತ್ರಿಗೆ ಥಟ್ಟನೆ ಉತ್ತರಕರ್ನಾಟಕದ ಜನತೆಯ ಪಾಡು ನೆನಪಿಗೆ ಬರಬೇಕು. ಆದರೆ ಅಂತಹ ಯಾವ ಲಕ್ಷಣವೂ ಸದ್ಯಕ್ಕೆ ಕಂಡು ಬರುತ್ತಿಲ್ಲ. ಮಠ, ದೇವಾಲಯ, ಆಣೆ ಪ್ರಮಾಣದಲ್ಲಿ ಮುಳುಗಿರುವ ಯಡಿಯೂರಪ್ಪನವರಿಗೆ ಈಗ ನೆನಪಾಗಿರುವುದು ಭಗವದ್ಗೀತೆ. ಎಂತಹ ವಿಚಿತ್ರವೆಂದರೆ ಇಡೀ ಶಿಕ್ಷಣ ವ್ಯವಸ್ಥೆಯನ್ನು ಕೇಸರೀಕರಣಗೊಳಿಸುವ ಉದ್ದೇಶಕ್ಕಾಗಿ ಇಂತಹ ಅಭಿಯಾನವನ್ನು ಕೈಗೊಂಡಿದ್ದಾರೆ.

ನೆರೆಸಂತ್ರಸ್ತರು ಶೋಕಗೀತೆಯಲ್ಲಿ ಮುಳುಗಿರುವಾಗ ಕನಿಷ್ಠ ಒಮ್ಮೆಯಾದರೂ ಅಲ್ಲಿಗೆ ಭೇಟಿ ನೀಡದ ಮುಖ್ಯಮಂತ್ರಿ ಯಡಿಯೂರಪ್ಪನವರು ಅತಿ ಹೆಚ್ಚು ವಿಮಾನ ಪ್ರಯಾಣ ನಡೆಸಿದ ಮುಖ್ಯಮಂತ್ರಿ ಎಂಬ ದಾಖಲೆಯನ್ನು ನಿರ್ಮಿಸಿದ್ದಾರೆ. ಅವರು ಈ ರೀತಿ ವಿಮಾನ ಪ್ರಯಾಣ ಮಾಡಿರುವುದು ದೆಹಲಿಗೆ. ದೇಶದ ರಾಜಧಾನಿಗೆ ಆಗಾಗ ಹಾರಾಟ ನಡೆಸುತ್ತಿರುವುದು ನಮ್ಮ ರಾಜ್ಯದ ಅಭಿವೃದ್ಧಿಗೂ ಅಲ್ಲ. ಅವರ ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ. ಇಂಥವರ ಆಡಳಿತದಡಿ ಭಗವದ್ಗೀತೆಗೆ ಮನ್ನಣೆ ಸಿಗುವುದೇ ಹೊರತು ಸಂತ್ರಸ್ತರ ಶೋಕಗೀತೆಗಲ್ಲ.

ಉತ್ತರ ಕರ್ನಾಟಕದ ನೆರೆಪೀಡಿತ ಜಿಲ್ಲೆಗಳಾದ ಬೆಳಗಾವಿ, ಬಿಜಾಪುರ, ಧಾರವಾಡ, ಗದಗ, ಹಾವೇರಿ, ಉತ್ತರಕನ್ನಡ, ಗುಲ್ಬರ್ಗಾ, ಯಾದಗಿರಿ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ, ಬಾಗಲಕೋಟ ಮತ್ತು ದಾವಣಗೆರೆ



ಅಂತೂ ಉತ್ತರ ಕರ್ನಾಟಕದ ನೆರೆಯ ಭೀಕರತೆಯನ್ನು ಟಿವಿ ಮಾಧ್ಯಮದ ಮೂಲಕವಾದರೂ ರಾಜ್ಯದ ಜನತೆ ಕಂಡಿದ್ದಾರೆ. ಸುತ್ತೂರಿನ ಬೈಠಕ್‌ನಲ್ಲಿ ಕುಳಿತುಕೊಂಡು ಮುಖ್ಯಮಂತ್ರಿಯೂ ವೀಕ್ಷಿಸಿರಬಹುದು. ಮಾನವೀಯ ನೆಲೆಯಲ್ಲಿ ನೆರೆಸಂತ್ರಸ್ತರಿಗೆ ತುರ್ತು ಪರಿಹಾರವನ್ನು ಕಲ್ಪಿಸಬೇಕಾಗಿತ್ತು. ಅವರ ಪುನರ್‌ವಸತಿ ವ್ಯವಸ್ಥೆಯನ್ನು ಅದೇ ವರ್ಷ ಮಾಡಿ ಮುಗಿಸಬೇಕಾಗಿತ್ತು. ಇದೀಗ ಎರಡು ವರ್ಷ ಸಂದಿದೆ. ಸಂತ್ರಸ್ತರು ಇನ್ನೂ ನರಕ ಸದೃಶ ಜೀವನ ಸಾಗಿಸುತ್ತಿದ್ದಾರೆ. ಈ ಮಳೆಗಾಲದಲ್ಲಿ ಅವರು ಯಾವ ರೀತಿಯ ಸಂಕಷ್ಟ ಅನುಭವಿಸುತ್ತಿರಬಹುದು ಎಂದು ತಿಳಿದುಕೊಳ್ಳಲು ಭಗವದ್ಗೀತೆಯ ಜ್ಞಾನ ಬೇಕಾಗಿಲ್ಲ. ಅದಕ್ಕೆ ಬೇಕಾಗಿರುವುದು ಮಾನವೀಯ ಗುಣ. ಅಂತಹ ಗುಣವನ್ನು ನಾಡಿನ ಬಿಜೆಪಿ ಸರಕಾರ ಮೈಗೂಡಿಸಿಕೊಳ್ಳಲಿ.

ಮುಂತಾದೆಡೆಗಳಲ್ಲಿ ಅಪಾರ ಹಾನಿ ಸಂಭವಿಸಿದೆ. ಈ ಜಿಲ್ಲೆಗಳಲ್ಲಿ ಶೇ.50ರಷ್ಟು ಪುನರ್‌ವಸತಿ ಕಾರ್ಯ ನಡೆದಿಲ್ಲ. ಸರಕಾರದ ಅಂಕಿಅಂಶಗಳೇ ತಿಳಿಸುವ ಪ್ರಕಾರ, ಈ 14 ಜಿಲ್ಲೆಗಳ 75 ತಾಲೂಕುಗಳಲ್ಲಿ 4,292 ಗ್ರಾಮಗಳು ನೆರೆಪೀಡಿತವಾಗಿವೆ. ಈ ಪೈಕಿ 346 ಗ್ರಾಮಗಳನ್ನು ಸ್ಥಳಾಂತರಿಸಬೇಕು ಅಥವಾ ಪುನರ್‌ನಿರ್ಮಾಣ ಮಾಡಬೇಕು. 400 ಶಾಲೆಗಳು ಮತ್ತು 1,050 ಅಂಗನವಾಡಿಗಳು ಧರಶಾಹಿಯಾಗಿವೆ. ಇನ್ನು ಸುಮಾರು 3,000ದಷ್ಟು ಶಾಲೆಗಳು ಭಾಗಶಃ ಹಾನಿಗೊಳಗಾಗಿವೆ.

ಕೃಷಿ ಪ್ರಾಧಿಕಾರದ ಪ್ರಕಾರ, ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಸಂಪೂರ್ಣ ಹೋಗಿದ್ದು. ಅಂದಾಜು 500 ಕೋಟಿ ರೂಪಾಯಿಯಷ್ಟು ಇದರಿಂದಾಗಿ ನಷ್ಟ ಉಂಟಾಗಿದೆ.

ನೆರೆಸಂತ್ರಸ್ತರು ಆ ಸಂದರ್ಭದಲ್ಲಿ ಸರಕಾರದ ವಿರುದ್ಧ ಎಷ್ಟು ಆಕ್ರೋಶಿತಗೊಂಡಿದ್ದರೆಂದರೆ ಈ ಗ್ರಾಮದೊಳಗೆ ಪ್ರವೇಶಿಸುವ ಸರಕಾರಿ ಅಧಿಕಾರಿಗಳನ್ನು ಅಥವಾ ಸರಕಾರಿ ವಾಹನಗಳನ್ನು ಅಡ್ಡಗಟ್ಟಿ ಆಕ್ರಮಣಕ್ಕೆ ಮುಂದಾಗುತ್ತಿದ್ದರು. ಕಾರಣ, ಪ್ರವಾಹ ಸಂಭವಿಸಿ ಊರಿಡೀ ಜಲಾವೃತಗೊಂಡು ಜನರು ಕಂಗಾಲಾಗಿದ್ದರೂ ಜನಪ್ರತಿನಿಧಿಗಳಾರೂ ಅತ್ತ ಕಡೆ ತಲೆಹಾಕಲೇ ಇರಲಿಲ್ಲ. ಸರಕಾರದ ತುರ್ತು ಪರಿಹಾರ ಕಾರ್ಯಾಚರಣೆ ಆರಂಭವಾಗುವ ಹೊತ್ತಿಗೆ ಸಂತ್ರಸ್ತರು 24-30 ತಾಸುಗಳ ಕಾಲ ಅನ್ನ ನೀರಿಲ್ಲದೆ ಕಂಗಾಲಾಗಿದ್ದರು. ಇದರಿಂದಾಗಿ ಸಂತ್ರಸ್ತರಲ್ಲಿ ರೋಷ ಮಡುಗಟ್ಟಿತ್ತು.

ವಿಚಿತ್ರವೆಂದರೆ, ಕಂದಾಯ ಇಲಾಖೆಯು ನಷ್ಟ ಪರಿಹಾರಕ್ಕಾಗಿ ಸಂತ್ರಸ್ತರ ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಜಾನುವಾರುಗಳ ಲೆಕ್ಕವನ್ನೂ ತೆಗೆಯುತ್ತಿದ್ದರು. ಪ್ರತಿಯೊಂದು ಮನೆಯಲ್ಲಿ ದನ ಕರುಗಳನ್ನು ಸಾಮಾನ್ಯವಾಗಿ ಸಾಕುತ್ತಿದ್ದರು. ಅದಲ್ಲದೆ, ಆಡು ಕುರಿಗಳನ್ನು ಸಾಕುತ್ತಿದ್ದರು. ಇವೆಲ್ಲದರ ದಾಖಲೆಯನ್ನು ಸಂತ್ರಸ್ತರು ತೋರಿಸುವುದಾದರೂ ಎಲ್ಲಿಂದ? ಸರಕಾರಿ ಯಂತ್ರವು ವರದಿಯನ್ನು ಸಂಗ್ರಹಿಸುತ್ತದೆಯೇ ವಿನಹ ಯಾವುದೇ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. ಇಂದಿಗೂ ಕೂಡ ನಷ್ಟ ಪರಿಹಾರದ ಸಮೀಕ್ಷೆಯ ಆಧಾರದಲ್ಲಿ ಪರಿಹಾರ ವಿತರಿಸಲಾಗಿಲ್ಲ. ಗಮನಾರ್ಹ ಸಂಗತಿಯೇನೆಂದರೆ, ಅಲ್ಲಿನ ಜನತೆ ಹೊಂದಿದ್ದ ದಾಖಲೆ ಪತ್ರಗಳೆಲ್ಲವೂ ಪ್ರವಾಹದ ನೀರಿನಲ್ಲಿ ಕೊಚ್ಚಿ ಹೋಗಿವೆ. ಹೀಗಿರುವಾಗ ಪರಿಹಾರ ಪಡೆಯುವಲ್ಲಿಯೂ ಹೆಚ್ಚಿನವರಿಗೆ ತೊಂದರೆ ಎದುರಾಗಿದೆ.

ಅಂತೂ ಉತ್ತರ ಕರ್ನಾಟಕದ ನೆರೆಯ ಭೀಕರತೆಯನ್ನು ಟಿವಿ ಮಾಧ್ಯಮದ ಮೂಲಕವಾದರೂ ರಾಜ್ಯದ ಜನತೆ ಕಂಡಿದ್ದಾರೆ. ಸುತ್ತೂರಿನ ಬೈಠಕ್‌ನಲ್ಲಿ ಕುಳಿತುಕೊಂಡು ಮುಖ್ಯಮಂತ್ರಿಯೂ ವೀಕ್ಷಿಸಿರಬಹುದು. ಮಾನವೀಯ ನೆಲೆಯಲ್ಲಿ ನೆರೆಸಂತ್ರಸ್ತರಿಗೆ ತುರ್ತು ಪರಿಹಾರವನ್ನು ಕಲ್ಪಿಸಬೇಕಾಗಿತ್ತು. ಅವರ ಪುನರ್‌ವಸತಿ ವ್ಯವಸ್ಥೆಯನ್ನು ಅದೇ ವರ್ಷ ಮಾಡಿ ಮುಗಿಸಬೇಕಾಗಿತ್ತು. ಇದೀಗ ಎರಡು ವರ್ಷ ಸಂದಿದೆ. ಸಂತ್ರಸ್ತರು ಇನ್ನೂ ನರಕ ಸದೃಶ ಜೀವನ ಸಾಗಿಸುತ್ತಿದ್ದಾರೆ. ಈ ಮಳೆಗಾಲದಲ್ಲಿ ಅವರು ಯಾವ ರೀತಿಯ ಸಂಕಷ್ಟ ಅನುಭವಿಸುತ್ತಿರಬಹುದು ಎಂದು ತಿಳಿದುಕೊಳ್ಳಲು ಭಗವದ್ಗೀತೆಯ ಜ್ಞಾನ ಬೇಕಾಗಿಲ್ಲ. ಅದಕ್ಕೆ ಬೇಕಾಗಿರುವುದು ಮಾನವೀಯ ಗುಣ. ಅಂತಹ ಗುಣವನ್ನು ನಾಡಿನ ಬಿಜೆಪಿ ಸರಕಾರ ಮೈಗೂಡಿಸಿಕೊಳ್ಳಲಿ.

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

# ಮುಸ್ಲಿಮ್ ಸಂಸದರಿಲ್ಲದ ಕರ್ನಾಟಕ

● ಅಕ್ರಮ್ ಹಸನ್



ಕರ್ನಾಟಕದಲ್ಲಿ ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು. ಈ ಪೈಕಿ ಬರೇ ಮುಸ್ಲಿಮ್ ಸಮುದಾಯದ ಪಾಲು 85 ಲಕ್ಷವಿದೆ. ಆದರೆ 2009ರ ಲೋಕಸಭಾ ಚುನಾವಣೆಯಲ್ಲಿ ಅಲ್ಪಸಂಖ್ಯಾಕ ಮತ್ತು ಮುಸ್ಲಿಮ್ ಸಮುದಾಯದಿಂದ ಯಾವನೇ ವ್ಯಕ್ತಿ ಆಯ್ಕೆಯಾಗಿಲ್ಲ. ಜನಸಮುದಾಯದ ಅಭ್ಯರ್ಥಿಗಳು ಸಂಸತ್ತಿನಲ್ಲಿರಬೇಕೆಂಬುದು ನ್ಯಾಯದ ಬೇಡಿಕೆ. ಆದರೆ ಕರ್ನಾಟಕದ ಪಾಲಿಗೆ ಈ ಬಾರಿ ಮುಸ್ಲಿಮ್ ಸಮುದಾಯದ ಯಾವನೇ ಪ್ರತಿನಿಧಿ ಸಂಸತ್ತಿನಲ್ಲಿ ಇಲ್ಲದಿರುವುದು ದುರಂತ. ನೆರೆಯ ಕೇರಳ ಮತ್ತು ತಮಿಳುನಾಡಿನಲ್ಲಿ ಮುಸ್ಲಿಮ್ ಜನಸಂಖ್ಯೆ ಕರ್ನಾಟಕಕ್ಕಿಂತ ಕಡಿಮೆ. ಆದರೆ ಕೇರಳದಲ್ಲಿ ಮೂವರು ಮತ್ತು ತಮಿಳುನಾಡಿನಲ್ಲಿ ಇಬ್ಬರು ಮುಸ್ಲಿಮ್ ಅಭ್ಯರ್ಥಿಗಳು ಸಂಸತ್ತಿಗೆ ಆಯ್ಕೆಯಾಗಿದ್ದಾರೆ.

ಮೇಲ್ನೋಟಕ್ಕೆ ಈ ದುರದೃಷ್ಟಕರ ಬೆಳವಣಿಗೆಗೆ ಮುಖ್ಯ ಕಾರಣ ಮುಸ್ಲಿಮ್ ಸಮುದಾಯದ ರಾಜಕೀಯ ಪ್ರಜ್ಞೆ ಕಡಿಮೆ ಎನ್ನಬಹುದಾದರೂ ಸೂಕ್ಷ್ಮವಾಗಿ ಗಮನಿಸಿದರೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದದ್ದು ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ ಪಕ್ಷದ ಇತಿಹಾಸವನ್ನು ಗಮನಿಸಿದರೆ ಅದು ಮುಸ್ಲಿಮ್ ಸಮುದಾಯದಿಂದ ಪಡೆದುಕೊಂಡಿರುವ ಲಾಭವೇ ಹೆಚ್ಚು. ಆದರೆ ಅದರಿಂದ  ಮುಸ್ಲಿಮ್ ಸಮುದಾಯಕ್ಕಾಗಿರುವ ಲಾಭ ನಗಣ್ಯ. ಮುಸ್ಲಿಮ್ ಸಮುದಾಯದ ಮತಗಳನ್ನು ಮಾತ್ರ ಪಡೆಯುತ್ತಿರುವ ಕಾಂಗ್ರೆಸ್ ಸಮುದಾಯಕ್ಕೆ ನೀಡಿರುವ ಕೊಡುಗೆ ತೀರಾ ಕಡಿಮೆ. ಕಾಂಗ್ರೆಸ್ ಪಕ್ಷವು ಮುಸ್ಲಿಮರಿಗೆ ನೀಡಿರುವ ಮಂತ್ರಿಸ್ಥಾನ, ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮುಸ್ಲಿಮರಿಗೆ ನೀಡಿರುವ ಅವಕಾಶಗಳು- ಈ ಎಲ್ಲ ಅಂಕಿಅಂಶಗಳನ್ನು ಅವಲೋಕಿಸಿದರೆ ಮುಸ್ಲಿಮ್ ಜನಸಂಖ್ಯೆಯ ಅನುಪಾತದಂತೆ ಮುಸ್ಲಿಮರಿಗೆ ರಾಜಕೀಯ ಪ್ರಾತಿನಿಧ್ಯ ನೀಡಿಯೇ ಇಲ್ಲ.

ರಾಜ್ಯದಲ್ಲಿ  ಒಟ್ಟು 28 ಲೋಕಸಭಾ ಕ್ಷೇತ್ರಗಳಿವೆ. ಈ ಪೈಕಿ 4 ಕ್ಷೇತ್ರಗಳು ಪರಿಶಿಷ್ಟ ಜಾತಿಗಳಿಗೆ ಮೀಸಲು. 2 ಕ್ಷೇತ್ರ ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿದೆ. 22 ಕ್ಷೇತ್ರಗಳು ಸಾಮಾನ್ಯವಾಗಿವೆ. ರಾಜ್ಯದಲ್ಲಿ ಮುಸ್ಲಿಮ್ ಸಮುದಾಯದ ಜನಸಂಖ್ಯೆ ಶೇ.16ರಷ್ಟಿದೆ. ಆ ಪ್ರಕಾರ ಕನಿಷ್ಠ ನಾಲ್ಕು ಮಂದಿ

***ರಾಜ್ಯದಲ್ಲಿ ಮುಸ್ಲಿಮ್ ಸಮುದಾಯದ ಶೇಕಡವಾರು ಹೆಚ್ಚು ಮತಗಳಿರುವ ಮೂರನೆ ಕ್ಷೇತ್ರವಾಗಿದೆ ಬೆಂಗಳೂರು ಕೇಂದ್ರ ಕ್ಷೇತ್ರ. ಈ ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 8 ವಿಧಾನಸಭಾ ಕ್ಷೇತ್ರಗಳೂ ಒಳಪಡುತ್ತವೆ. ಈ ಪೈಕಿ ಮೂರು ವಿಧಾನಸಭಾ ಕ್ಷೇತ್ರದಲ್ಲಿ 2008ರ ಚುನಾವಣೆಯಲ್ಲಿ ಮುಸ್ಲಿಮ್ ಸಮುದಾಯದ ಅಭ್ಯರ್ಥಿಗಳು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಕಾಲದಿಂದಲೂ ಕೇಂದ್ರ ಸಚಿವರಾಗಿದ್ದವರು ಕರ್ನಾಟಕದ ಸಿ.ಕೆ.ಜಾಫರ್ ಶರೀಫ್. ಇವರು ಬೆಂಗಳೂರಿನಿಂದ 1977ರಿಂದ ನಿರಂತರ ಏಳು ಬಾರಿ ಗೆದ್ದು ಬಂದಿದ್ದರು. ಒಮ್ಮೆ ಕನಕಪುರದಿಂದಲೂ ಲೋಕಸಭೆಗೆ ಆಯ್ಕೆಯಾಗಿದ್ದರು. ಆದರೆ 2009ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಗಳೂರು ಕೇಂದ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡಲಿಲ್ಲ. ಶರೀಫ್ ಅವರು ನಿರಂತರ ಒತ್ತಾಯ ಮಾಡಿದ್ದರೂ ಕಾಂಗ್ರೆಸ್ ಹೈಕಮಾಂಡ್ ಚಿಕ್ಕಾಸು ಬೆಲೆ ನೀಡಲಿಲ್ಲ.***



ಸಿ.ಕೆ.ಜಾಫರ್ ಶರೀಫ್

ಮುಸ್ಲಿಮ್ ಸಮುದಾಯದ ಅಭ್ಯರ್ಥಿಗಳು ಲೋಕಸಭೆಗೆ ಆಯ್ಕೆಯಾಗಬೇಕಿದೆ. ಆದರೆ ಈ ಬಾರಿ ಒಬ್ಬನೇ ಒಬ್ಬ ಮುಸ್ಲಿಮ್ ಅಭ್ಯರ್ಥಿ ರಾಜ್ಯದಿಂದ ಆಯ್ಕೆಯಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಕಾಂಗ್ರೆಸ್ ಪಕ್ಷ. 2009ರ ಚುನಾವಣೆಯಲ್ಲಿ ಕೇವಲ ಇಬ್ಬರು ಮುಸ್ಲಿಮ್ ಅಭ್ಯರ್ಥಿಗಳಿಗೆ ಮಾತ್ರ ಸ್ಪರ್ಧಿಸಲು ಅವಕಾಶ ನೀಡಿರುವುದು. ಅಲ್ಲದೆ ಮುಸ್ಲಿಮ್ ಮತದಾರರು ಹೆಚ್ಚಿರುವ ಕ್ಷೇತ್ರಗಳಲ್ಲಿ ಮುಸ್ಲಿಮರಿಗೆ ಅವಕಾಶ ನೀಡಲಿಲ್ಲ.

ರಾಜ್ಯದಲ್ಲಿ ಶೇಕಡವಾರು ಮುಸ್ಲಿಮ್ ಮತದಾರರು ಹೆಚ್ಚು ಇರುವ ಕ್ಷೇತ್ರವಾಗಿದೆ ಮಂಗಳೂರು. ಇಲ್ಲಿ ಶೇ.24ರಷ್ಟು ಮುಸ್ಲಿಮ್ ಮತದಾರರಿದ್ದಾರೆ. ಅಲ್ಲದೆ ಕ್ರೈಸ್ತ ಸಮುದಾಯದ ಶೇ.9ರಷ್ಟು ಮತದಾರರಿದದಾರೆ. ಒಟ್ಟಾಗಿ ಶೇ.33ರಷ್ಟು ಮತದಾರರು ಪ್ರಮುಖ ಅಲ್ಪಸಂಖ್ಯಾತ ಸಮುದಾಯ ಸೇರಿದವರು. ಆದರೆ ಮಂಗಳೂರಿನಲ್ಲಿ ಮುಸ್ಲಿಮ್ ಅಥವಾ ಕ್ರೈಸ್ತ ಸಮುದಾಯದ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಲಿಲ್ಲ. ಪರಿಣಾಮವಾಗಿ ಇಲ್ಲಿ ಬಿಜೆಪಿ ಜಯಗಳಿಸುತ್ತಿದೆ. ಇಲ್ಲಿ ನಿರಂತರ 6 ಬಾರಿ ಬಿಜೆಪಿ ಗೆಲುವು ಸಾಧಿಸಿದೆ.

ರಾಜ್ಯದಲ್ಲಿ ಶೇಕಡವಾರು ಎರಡನೇ ಹೆಚ್ಚು ಮುಸ್ಲಿಮ್ ಮತದಾರರು ಇರುವ ಕ್ಷೇತ್ರವಾಗಿದೆ ಬೀದರ್. ಕೆಲವು ದಶಕಗಳ ಹಿಂದೆ ಇಲ್ಲಿ ಮುಸ್ಲಿಮ್ ಅಭ್ಯರ್ಥಿ ವಿಜೇತರಾಗಿದ್ದರು. ಬೀದರ್‌ನಲ್ಲಿ ಶೇ.22 ಮುಸ್ಲಿಮ್ ಮತದಾರರಿದ್ದಾರೆ. ಆದರೆ ಇಲ್ಲಿ ಕಾಂಗ್ರೆಸ್ ಪಕ್ಷ ಸ್ಪರ್ಧಿಸಲು ಟಿಕೆಟ್ ನೀಡಿರುವುದು ಮಾಜಿ ಮುಖ್ಯಮಂತ್ರಿ ಧರಮ್‌ಸಿಂಗ್‌ರವರಿಗೆ. ಬೀದರ್‌ನ ನೆರೆಯ ಕ್ಷೇತ್ರವಾಗಿದೆ ಗುಲ್ಬರ್ಗಾ. ಇಲ್ಲಿ ಹಿಂದೊಮ್ಮೆ ಜನತಾದಳದಿಂದ ಖಮರುಲ್ ಇಸ್ಲಾಮ್, ಕಾಂಗ್ರೆಸ್‌ನಿಂದ ಎರಡು ಬಾರಿ ಇಕ್ಬಾಲ್ ಅಹ್ಮದ್‌ರವರು ವಿಜೇತರಾಗಿದ್ದರು. ಆದರೆ 2009ರ ಲೋಕಸಭಾ ಚುನಾವಣೆಯಲ್ಲಿ ಇದನ್ನು ಮೀಸಲು ಕ್ಷೇತ್ರವಾಗಿ ಪರಿವರ್ತಿಸಿ ಮುಸ್ಲಿಮರು ಗೆಲ್ಲುವ ಅವಕಾಶದಿಂದ ವಂಚಿತರಾದರು. 2004ರ ಚುನಾವಣೆಯಲ್ಲಿ ಗುಲ್ಬರ್ಗಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಇಕ್ಬಾಲ್ ಅಹ್ಮದ್ ಸರಡಗಿ ಅವರು 2009ರ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾದರು. ಕಾರಣ, ಇದು ಮೀಸಲು ಕ್ಷೇತ್ರವಾಗಿ ಪರಿವರ್ತನೆಗೊಂಡಿತ್ತು. ಆದರೆ ಒಂದು ವೇಳೆ ಕಾಂಗ್ರೆಸ್ ಪಕ್ಷಕ್ಕೆ ಸಾಮಾಜಿಕ ನ್ಯಾಯದ ಮೇಲೆ ಕನಿಷ್ಠ ಬದ್ಧತೆ ಇದ್ದಿದ್ದರೆ ನೆರೆಯ ಬೀದರ್ ಕ್ಷೇತ್ರದಲ್ಲಿ ಮುಸ್ಲಿಮ್ ಅಭ್ಯರ್ಥಿಗೆ ಟಿಕೆಟ್ ನೀಡಬೇಕಿತ್ತು. ಆದರೆ ಪಕ್ಷವು ಧರಮ್ ಸಿಂಗ್‌ಗೆ ಟಿಕೆಟ್ ನೀಡಿತ್ತು.

ರಾಜ್ಯದಲ್ಲಿ ಮುಸ್ಲಿಮ್ ಸಮುದಾಯದ ಶೇಕಡವಾರು ಹೆಚ್ಚು ಮತಗಳಿರುವ ಮೂರನೆ ಕ್ಷೇತ್ರವಾಗಿದೆ ಬೆಂಗಳೂರು ಕೇಂದ್ರ ಕ್ಷೇತ್ರ. ಈ ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 8 ವಿಧಾನಸಭಾ ಕ್ಷೇತ್ರಗಳೂ ಒಳಪಡುತ್ತವೆ. ಈ ಪೈಕಿ ಮೂರು ವಿಧಾನಸಭಾ ಕ್ಷೇತ್ರದಲ್ಲಿ 2008ರ ಚುನಾವಣೆಯಲ್ಲಿ ಮುಸ್ಲಿಮ್ ಸಮುದಾಯದ ಅಭ್ಯರ್ಥಿಗಳು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಕಾಲದಿಂದಲೂ ಕೇಂದ್ರ ಸಚಿವರಾಗಿದ್ದವರು ಕರ್ನಾಟಕದ ಸಿ.ಕೆ.ಜಾಫರ್ ಶರೀಫ್. ಇವರು ಬೆಂಗಳೂರಿನಿಂದ 1977ರಿಂದ ನಿರಂತರ ಏಳು ಬಾರಿ ಗೆದ್ದು ಬಂದಿದ್ದರು. ಒಮ್ಮೆ ಕನಕಪುರದಿಂದಲೂ ಲೋಕಸಭೆಗೆ ಆಯ್ಕೆಯಾಗಿದ್ದರು. ಆದರೆ 2009ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಗಳೂರು ಕೇಂದ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡಲಿಲ್ಲ. ಶರೀಫ್ ಅವರು ನಿರಂತರ ಒತ್ತಾಯ ಮಾಡಿದ್ದರೂ ಕಾಂಗ್ರೆಸ್ ಹೈಕಮಾಂಡ್ ಚಿಕ್ಕಾಸು ಬೆಲೆ ನೀಡಲಿಲ್ಲ. ಬೆಂಗಳೂರು



*1996 ಮತ್ತು 1999ರಲ್ಲಿ ಕಾಂಗ್ರೆಸ್‌ನಿಂದ ಮುಸ್ಲಿಮ್ ಅಭ್ಯರ್ಥಿ ಐ.ಜಿ.ಸನದಿಯವರು ಆಯ್ಕೆಯಾಗಿದ್ದರು. ಆದರೆ 2009ರ ಚುನಾವಣೆಯಲ್ಲಿ ಧಾರವಾಡದಿಂದ ಮುಸ್ಲಿಮ್ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಲಿಲ್ಲ. ಬಿಜೆಪಿಯಿಂದ 2009ರಲ್ಲಿ ಕಾಂಗ್ರೆಸ್‌ಗೆ ವಲಸೆ ಬಂದ ಮಂಜುನಾಥ ಕುನ್ನೂರು ಅವರಿಗೆ ಪಕ್ಷ ಟಿಕೆಟ್ ನೀಡಿತು. ಅಲ್ಲಿಯೂ ಕಾಂಗ್ರೆಸ್ ಸೋತು ಬಿಜೆಪಿಯ ಬ್ರಾಹ್ಮಣ ಅಭ್ಯರ್ಥಿ ಪ್ರಹ್ಲಾದ್ ಜೋಶಿ ಆಯ್ಕೆಯಾದರು.*

ಕೇಂದ್ರದಿಂದ ಸ್ಪರ್ಧಿಸಲು ಪಕ್ಷಕ್ಕೆ ವಲಸೆ ಬಂದಿದ್ದ ಎಚ್.ಟಿ.ಸಾಂಗ್ಲಿಯಾನ ಅವರಿಗೆ ಟಿಕೆಟ್ ನೀಡಲಾಯಿತು. ಪರಿಣಾಮವಾಗಿ ಬಿಜೆಪಿಯ ಪಿ.ಸಿ.ಮೋಹನ್ ನಿರಾಯಸವಾಗಿ ಈ ಕ್ಷೇತ್ರದಿಂದ ಗೆದ್ದು ಬಂದರು. ಕರ್ನಾಟಕದ ಹಿರಿಯ ಕಾಂಗ್ರೆಸ್ ನಾಯಕರಾದ ಜಾಫರ್ ಶರೀಫ್‌ರಂತಹ ನಾಯಕರಿಗೆ ಅವರು ಇಚ್ಚಿಸಿದ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ನೀಡದ ಕಾಂಗ್ರೆಸ್ ಪಕ್ಷವು ಎರಡನೇ ಹಂತದ ನಾಯಕರಿಗೆ ಯಾವ ರೀತಿಯ ಮನ್ನಣೆ ನೀಡೀತು?!

ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವಾಗ ಕೊನೆ ಕ್ಷಣದಲ್ಲಿ ಜಾಫರ್ ಶರೀಫ್‌ಗೆ ಬೆಂಗಳೂರು ಉತ್ತರಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ನೀಡಿತು ಕಾಂಗ್ರೆಸ್ ಪಕ್ಷ. ಆದರೆ ಇದು ಒಕ್ಕಲಿಗ ಸಮುದಾಯದ ಭದ್ರ ಕೋಟೆಯಾಗಿತ್ತು. ಬಿಜೆಪಿಯ ಹಲವು ಶಾಸಕರು ಇದೇ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾರೆ.

ಜಾಫರ್ ಶರೀಫ್ 40 ವರ್ಷಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದವರು. ಸುದೀರ್ಘ ರಾಜಕೀಯ ಅನುಭವ ಹೊಂದಿದವರು. ಅನಿವಾರ್ಯವಾಗಿ ಬೆಂಗಳೂರು ಉತ್ತರಕ್ಷೇತ್ರದಿಂದ ಸ್ಪರ್ಧಿಸಿ ಬಿಜೆಪಿಯ ಚಂದ್ರೇಗೌಡರ ಎದುರು ಸೋಲಬೇಕಾಯಿತು. ಶರೀಫ್ ಸೋಲಿನ ಹಿಂದೆ ರಾಜ್ಯದ ಕೆಲವು ಕಾಂಗ್ರೆಸ್ ನಾಯಕರ ಕೈವಾಡವೂ ಇದೆ ಎಂಬ ಆರೋಪವೂ ಕೇಳಿಬರುತ್ತಿತ್ತು.

ರಾಜ್ಯದ ಲೋಕಸಭಾ ಕ್ಷೇತ್ರಗಳ ಪೈಕಿ ನಾಲ್ಕನೆ ಅತಿಹೆಚ್ಚು ಮುಸ್ಲಿಮ್ ಮತದಾರರು ಇರುವ ಕ್ಷೇತ್ರವಾಗಿದೆ ಧಾರವಾಡ. ಧಾರವಾಡದಲ್ಲಿ ಶೇ.20ರ ಆಸುಪಾಸು ಮುಸ್ಲಿಮ್ ಮತದಾರರಿದ್ದಾರೆ. ಧಾರವಾಡದಿಂದ 1977ರಿಂದ ಒಟ್ಟು ಏಳು ಬಾರಿ ಮುಸ್ಲಿಮ್ ಅಭ್ಯರ್ಥಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಎಚ್.ಎಫ್.ಮಾಹ್ಸಿನ್ ಎರಡು ಬಾರಿ, 1984ರಲ್ಲಿ ಮೈಸೂರಿನ ಅಝೀಝ್ ಸೇಠ್ ಅವರು ಧಾರವಾಡ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದ ಕಾಂಗ್ರೆಸ್ ಅಭ್ಯರ್ಥಿಗಳು. 1989 ಮತ್ತು 1991ರಲ್ಲಿ ಬಿ.ಎಂ.ಮುಜಾಹಿದ್ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. 1996 ಮತ್ತು 1999ರಲ್ಲಿ ಕಾಂಗ್ರೆಸ್‌ನಿಂದ ಮುಸ್ಲಿಮ್ ಅಭ್ಯರ್ಥಿ ಐ.ಜಿ.ಸನದಿಯವರು ಆಯ್ಕೆಯಾಗಿದ್ದರು. ಆದರೆ 2009ರ ಚುನಾವಣೆಯಲ್ಲಿ ಧಾರವಾಡದಿಂದ ಮುಸ್ಲಿಮ್ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಲಿಲ್ಲ. ಬಿಜೆಪಿಯಿಂದ 2009ರಲ್ಲಿ ಕಾಂಗ್ರೆಸ್‌ಗೆ ವಲಸೆ ಬಂದ ಮಂಜುನಾಥ ಕುನ್ನೂರು ಅವರಿಗೆ ಪಕ್ಷ ಟಿಕೆಟ್ ನೀಡಿತು. ಅಲ್ಲಿಯೂ ಕಾಂಗ್ರೆಸ್ ಸೋತು ಬಿಜೆಪಿಯ ಬ್ರಾಹ್ಮಣ ಅಭ್ಯರ್ಥಿ ಪ್ರಹ್ಲಾದ್ ಜೋಶಿ ಆಯ್ಕೆಯಾದರು.

ಧಾರವಾಡ ಲೋಕಸಭಾ ಕ್ಷೇತ್ರ, 2009ರ ಕ್ಷೇತ್ರ ಪುನರ್‌ವಿಂಗಡನೆಗೊಳಗಾಗಿದ್ದರೂ ಮುಸ್ಲಿಮ್ ಮತದಾರರ ಸಂಖ್ಯೆಯಲ್ಲಿ ಏರುಪೇರು ಉಂಟಾಗಿರಲಿಲ್ಲ. ಆದರೂ ಮುಸ್ಲಿಮ್ ಅಭ್ಯರ್ಥಿಗೆ ಕಾಂಗ್ರೆಸ್ ಧಾರವಾಡದಲ್ಲಿ ಅವಕಾಶ ನೀಡಲಿಲ್ಲ. ಬದಲಾಗಿ ಧಾರವಾಡದ ನೆರೆಯ ಲೋಕಸಭಾ ಕ್ಷೇತ್ರವಾಗಿರುವ ಹಾವೇರಿಯಲ್ಲಿ ಮುಸ್ಲಿಮ್ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಿತು. ಕಾಂಗ್ರೆಸ್‌ನ ಸಲೀಮ್ ಅಹ್ಮದ್ ಅವರಿಗೆ ಅಲ್ಲಿ ಅವಕಾಶ ನೀಡಿತು. ಆದರೆ ಅಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿ ಸೋತು ಬಿಜೆಪಿಯ ಶಿವಕುಮಾರ್ ಉದಾಸಿ ಗೆಲುವು ಸಾಧಿಸಿದರು.

ಈ ರೀತಿ ಇಡೀ ರಾಜ್ಯದಲ್ಲಿ ಕಳೆದ 2009ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮುಸ್ಲಿಮ್ ಅಭ್ಯರ್ಥಿಗೆ ಅವಕಾಶ ನೀಡಿದ್ದು ಕೇವಲ ಎರಡು ಕ್ಷೇತ್ರದಲ್ಲಿ ಮಾತ್ರ.

ಮುಸ್ಲಿಮರು ಸ್ಥಳೀಯ ಸಂಸ್ಥೆಗಳಲ್ಲಿ, ಲೋಕಸಭಾ ಸದಸ್ಯತ್ವ, ರಾಜ್ಯಸಭಾ ಸದಸ್ಯತ್ವ ಮತ್ತು ಮಂತ್ರಿಮಂಡಲದಲ್ಲಿ ತಮ್ಮ ನ್ಯಾಯಬದ್ಧ ಸ್ಥಾನ ಪಡೆಯಲು ಯಶಸ್ವಿಯಾಗಿಲ್ಲ. ಮುಸ್ಲಿಮ್ ಸಮುದಾಯವು ರಾಜಕೀಯವಾಗಿ ದೃಢ ಹೆಜ್ಜೆ ಇರಿಸಬೇಕಾಗಿದೆ. ಕೇವಲ ಕಾಂಗ್ರೆಸ್, ಜೆಡಿಎಸ್, ಬಿಜೆಪಿಯತ್ತ ಮಾತ್ರ ಮುಖ ಮಾಡದೆ ತಮ್ಮದೇ ರಾಜಕೀಯ ಸಬಲೀಕರಣದತ್ತ ಹೆಜ್ಜೆ ಇಡಬೇಕಾಗಿದೆ. ಹೆಚ್ಚಿನ ರಾಜಕೀಯ ಪಕ್ಷಗಳಲ್ಲಿರುವ ಮುಸ್ಲಿಮ್ ನಾಯಕರಿಗೆ ಮೊದಲು ಪಕ್ಷ ಸೇವೆ ಮಾಡಿ ಬಳಿಕ ಸಮಾಜ ಮತ್ತು ಸಮುದಾಯದ ನೆನಪಾಗುತ್ತದೆ. ದೇಶದಲ್ಲಿ ಎಲ್ಲ ರಂಗದಲ್ಲಿಯೂ ಹಿಂದುಳಿದಿರುವ ಮುಸ್ಲಿಮರು ರಾಜಕೀಯ ಪ್ರಾತಿನಿಧ್ಯ ಗಳಿಸಿದರೆ ಮಾತ್ರ ಸರ್ವಾಂಗೀಣ ಸಬಲೀಕರಣ ಸಾಧ್ಯ ಎಂಬುದು ವಾಸ್ತವ.

ವಾಸ್ತವದಲ್ಲಿ ಮುಸ್ಲಿಮ್ ಜನಸಂಖ್ಯೆ ಅನುಪಾತದಂತೆ ಕನಿಷ್ಠ ನಾಲ್ಕು ಕ್ಷೇತ್ರದಲ್ಲಿ ಟಿಕೆಟು ನೀಡಬೇಕಾಗಿತ್ತು. ಅದು ಸಹ ಹೆಚ್ಚು ಮುಸ್ಲಿಮ್ ಮತದಾರರು ಇರುವ ಕ್ಷೇತ್ರದಲ್ಲಿ ಅವಕಾಶ ನೀಡದೆ ಇತರ ಸಮುದಾಯಗಳ ಪ್ರಾಬಲ್ಯವಿರುವ ಕ್ಷೇತ್ರದಲ್ಲಿ ಅವಕಾಶ ನೀಡಿತ್ತು. ಮಾತ್ರವಲ್ಲ, ಬೆಂಗಳೂರು ಮತ್ತು ಹಾವೇರಿಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಯ ದುರ್ಬಲವಾಗಿರುವ ಪ್ರದೇಶಗಳಾಗಿವೆ. ರಾಜ್ಯದ ಮುಸ್ಲಿಮ್ ಸಮುದಾಯ ದಶಕಗಳಿಂದಲೂ ಕಾಂಗ್ರೆಸ್‌ನ್ನು ಬೆಂಬಲಿಸಿ ಮತ ನೀಡುತ್ತಾ ಬಂದಿತ್ತು. ರಾಜ್ಯದಲ್ಲಿರುವ ಕಾಂಗ್ರೆಸ್‌ನ ಮುಸ್ಲಿಮ್ ನಾಯಕರು ಕನಿಷ್ಠ ಸರ್ವ ಸಮ್ಮತ ಮುಸ್ಲಿಮ್ ಅಭ್ಯರ್ಥಿಗೆ ಸಮುದಾಯದ ಪ್ರಾಬಲ್ಯ ಇರುವ ಕ್ಷೇತ್ರದಲ್ಲಿ ಅವಕಾಶ ನೀಡುವಂತೆ ಹೈಕಮಾಂಡ್‌ನ ಮನವೊಲಿಸಲು ವಿಫಲರಾಗಿದ್ದಾರೆ.

ರಾಜಕೀಯವಾಗಿಯೂ ಶೈಕ್ಷಣಿಕವಾಗಿಯೂ ಮುಸ್ಲಿಮರಿಗಿಂತ ಪ್ರಗತಿ ಸಾಧಿಸಿರುವ ಸಮುದಾಯವಾಗಿದೆ ಕ್ರೈಸ್ತ ಸಮುದಾಯ. ಕಳೆದ 2009ರ ಲೋಕಸಭಾ ಚುನಾವಣೆಯಲ್ಲಿ ಕಾರವಾರ ಕ್ಷೇತ್ರದಿಂದ ಮಾರ್ಗರೇಟ್ ಆಳ್ವ ಕಾಂಗ್ರೆಸ್‌ನಿಂದ ಟಿಕೆಟ್ ಗಿಟ್ಟಿಸಿಕೊಂಡಿದ್ದರು. ಇವರು ಕ್ರೈಸ್ತ ಸಮುದಾಯದ ಮಹಿಳೆಯಾಗಿದ್ದಾರೆ. ಮಾರ್ಗರೇಟ್ ಆಳ್ವ ಕಾರವಾರದಲ್ಲಿ ಸೋತು ಬಿಜೆಪಿಯ ಬ್ರಾಹ್ಮಣ ಅಭ್ಯರ್ಥಿ ಅನಂತಕುಮಾರ್ ಹೆಗಡೆ ಗೆಲುವು ಸಾಧಿಸಿದರು. ಈಗ ಮಾರ್ಗರೇಟ್ ಆಳ್ವ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ. 2009ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದುಕೊಂಡ ಇನ್ನೋರ್ವ ಕ್ರೈಸ್ತ ಅಭ್ಯರ್ಥಿ ಎಚ್.ಟಿ.ಸಾಂಗ್ಲಿಯಾನ. ಅವರು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋಲನುಭವಿಸಿದರು.

ಆದರೆ 2004ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವನ್ನು ಸೋಲಿಸಿ ಕಾಂಗ್ರೆಸ್ ಮೈತ್ರಿಕೂಟ ಯುಪಿಎ ಸರಕಾರ ಅಧಿಕಾರಕ್ಕೆ ಬಂತು. ಮನಮೋಹನ್ ಸಿಂಗ್ ಪ್ರಧಾನಿಯಾದರು. ಆದರೂ ಅವರ ಸಂಪುಟದಲ್ಲಿ ಕೇವಲ ಆರು ಮಂದಿ ಮಾತ್ರ ಮುಸ್ಲಿಮ್ ಮಂತ್ರಿಗಳಿದ್ದರು.

2009ರಲ್ಲಿ ಮತ್ತೆ ಕಾಂಗ್ರೆಸ್ ಮೈತ್ರಿಕೂಟ ಅಧಿಕಾರಕ್ಕೆ ಬಂತು. ಆಗ ಅವರ ಸಂಪುಟದಲ್ಲಿದ್ದ ಮುಸ್ಲಿಮ್ ಮಂತ್ರಿಗಳು ಐದು ಮಂದಿ ಮಾತ್ರ. ಮನಮೋಹನ್ ಸಿಂಗ್ ಸಂಪುಟದಲ್ಲಿ ಈಗ 77 ಮಂದಿ ಸಚಿವರಿದ್ದಾರೆ. ಈ ಪೈಕಿ ಮುಸ್ಲಿಮರು ಐದು ಮಂದಿ ಮಾತ್ರ. ಈಗಿರುವ ಐದು ಮಂದಿ ಕೇಂದ್ರ ಸಚಿವರಲ್ಲಿ ಇಬ್ಬರು ಮಾತ್ರ ಕಾಂಗ್ರೆಸಿಗರು. ಗುಲಾಮ್ ನಬಿ ಆಜಾದ್ ಮತ್ತು ಸಲ್ಮಾನ್ ಖುರ್ಷಿದ್. ಉಳಿದ ಮೂವರು ಮಂತ್ರಿಗಳಲ್ಲಿ ಫಾರೂಕ್ ಅಬ್ದುಲ್ಲಾ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದವರು. ಇ.ಅಹ್ಮದ್ ಮುಸ್ಲಿಮ್ ಲೀಗ್‌ನವರು. ಸುಲ್ತಾನ್ ಅಹ್ಮದ್ ತೃಣಮೂಲ ಕಾಂಗ್ರೆಸ್‌ನವರು.

ಭಾರತದ ಮುಸ್ಲಿಮ್ ಜನಸಂಖ್ಯೆಯ ಅನುಪಾತದಂತೆ ಕನಿಷ್ಠ 14 ಮಂದಿ ಕೇಂದ್ರ ಮಂತ್ರಿಗಳು ಮನಮೋಹನ್ ಸಿಂಗ್ ಸಂಪುಟದಲ್ಲಿರಬೇಕಾಗಿತ್ತು. ದುರದೃಷ್ಟವಶಾತ್ ಕೇವಲ ಐದು ಮಂದಿ ಮಾತ್ರ ಇದ್ದಾರೆ. ಕ್ರೈಸ್ತ ಬಾಂಧವರು ತಮ್ಮ ಪಾಲಿನ ನಾಲ್ಕು ಮಂತ್ರಿಸ್ಥಾನಗಳನ್ನು ಪಡೆಯುವಲ್ಲಿ ಸಫಲರಾಗಿದ್ದಾರೆ.

ಆದರೆ ಮುಸ್ಲಿಮರು ಸ್ಥಳೀಯ ಸಂಸ್ಥೆಗಳಲ್ಲಿ, ಲೋಕಸಭಾ ಸದಸ್ಯತ್ವ, ರಾಜ್ಯಸಭಾ ಸದಸ್ಯತ್ವ ಮತ್ತು ಮಂತ್ರಿಮಂಡಲದಲ್ಲಿ ತಮ್ಮ ನ್ಯಾಯಬದ್ಧ ಸ್ಥಾನ ಪಡೆಯಲು ಯಶಸ್ವಿಯಾಗಿಲ್ಲ. ಮುಸ್ಲಿಮ್ ಸಮುದಾಯವು ರಾಜಕೀಯವಾಗಿ ದೃಢ ಹೆಜ್ಜೆ ಇರಿಸಬೇಕಾಗಿದೆ. ಕೇವಲ ಕಾಂಗ್ರೆಸ್, ಜೆಡಿಎಸ್, ಬಿಜೆಪಿಯತ್ತ ಮಾತ್ರ ಮುಖ ಮಾಡದೆ ತಮ್ಮದೇ ರಾಜಕೀಯ ಸಬಲೀಕರಣದತ್ತ ಹೆಜ್ಜೆ ಇಡಬೇಕಾಗಿದೆ. ಹೆಚ್ಚಿನ ರಾಜಕೀಯ ಪಕ್ಷಗಳಲ್ಲಿರುವ ಮುಸ್ಲಿಮ್ ನಾಯಕರಿಗೆ ಮೊದಲು ಪಕ್ಷ ಸೇವೆ ಮಾಡಿ ಬಳಿಕ ಸಮಾಜ ಮತ್ತು ಸಮುದಾಯದ ನೆನಪಾಗುತ್ತದೆ. ದೇಶದಲ್ಲಿ ಎಲ್ಲ ರಂಗದಲ್ಲಿಯೂ ಹಿಂದುಳಿದಿರುವ ಮುಸ್ಲಿಮರು ರಾಜಕೀಯ ಪ್ರಾತಿನಿಧ್ಯ ಗಳಿಸಿದರೆ ಮಾತ್ರ ಸರ್ವಾಂಗೀಣ ಸಬಲೀಕರಣ ಸಾಧ್ಯ ಎಂಬುದು ವಾಸ್ತವ.

# ಭ್ರಷ್ಟ ವ್ಯವಸ್ಥೆಗೆ ಶಸ್ತ್ರ ಚಿಕಿತ್ಸೆ ಅತ್ಯಗತ್ಯ

● ಝಿಯಾವುಲ್ ಎಚ್.



ದೇಶದಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಭ್ರಷ್ಟಾಚಾರದ ಕರಿಛಾಯೆ ಎದ್ದು ಕಾಣುತ್ತಿವೆ. ಜನತೆ ಈ ಭ್ರಷ್ಟಾಚಾರದ ಕಪಿಮುಷ್ಠಿಯೊಳಗೆ ಸಿಲುಕಿರುವುದಂತೂ ವಾಸ್ತವ. ಯಾವುದೇ ಕ್ಷೇತ್ರವನ್ನೂ ನೋಡಿದರೆ ಅಲ್ಲಿ ಭ್ರಷ್ಟಚಾರದ ಹೊಲಸು ಗಬ್ಬೆದ್ದು ನಾರುತ್ತಿದೆ. ಜನರು ಭ್ರಷ್ಟರ ಸಾಮ್ರಾಜ್ಯದ ನಡುವೆ ನ್ಯಾಯಿಕವಾಗಿ ಉಸಿರಾಡಲೂ ಪ್ರಯಾಸಪಡುತ್ತಿದ್ದಾರೆ. ಅದಕ್ಕಾಗಿಯೇ ಇರಬಹುದು. ಕೆಲವು ದಿನಗಳ ಹಿಂದೆ ಅಣ್ಣಾ ಹಝಾರೆ ಭ್ರಷ್ಟಾಚಾರದ ವಿರುದ್ಧ ನಡೆಸಿದ ಆಂದೋಲನಕ್ಕೆ ವ್ಯಾಪಕ ಜನ ಬೆಂಬಲ ವ್ಯಕ್ತವಾಗಿದ್ದು.

ಲೋಕಾಯುಕ್ತ ಆಡಳಿತವನ್ನೇ ಇಲ್ಲವಾಗಿಸಿರುವ ಗುಜರಾತ್‌ನ ಮುಖ್ಯಮಂತ್ರಿ ಮೋದಿಯನ್ನು ಮತ್ತು ಭ್ರಷ್ಟಚಾರದ ಆರೋಪ ಹೊತ್ತು ಕರ್ನಾಟಕ ರಾಜ್ಯವನ್ನೇ ನಂ.1 ಸ್ಥಾನಕ್ಕೇರಿಸಿರುವ ಯಡಿಯೂರಪ್ಪರ ವಿರುದ್ಧ ಮಾತನಾಡದ ಅಣ್ಣಾ ಹಝಾರೆಯ ಭ್ರಷ್ಟಾಚಾರ ವಿರೋಧಿ ಹೋರಾಟ ಎಷ್ಟು ಪಾರದರ್ಶಕ ಎನ್ನುವುದು ಬೇರೆ ಮಾತು. ಅದರ ಬೆನ್ನ ಹಿಂದೆ ಕಾಣಿಸಿಕೊಂಡ ಬಿಟ್ಟಿ ಪ್ರಚಾರದ ಉದ್ದೇಶವನ್ನು ಇಟ್ಟುಕೊಂಡಿದ್ದ ಕೋಟ್ಯಾಧಿಪತಿ ಬಾಬಾ ರಾಮ್‌ದೇವ್‌ರ ಭ್ರಷ್ಟಾಚಾರ ವಿರೋಧಿ ಸತ್ಯಾಗ್ರಹವು ಕೂಡ ಸಹಜವಾಗಿ ಬೆರಳಣಿಕೆಯ ದಿನಗಳಿಗೆ ಸೀಮಿತವಾಯಿತು. ಭ್ರಷ್ಟಾಚಾರದಿಂದ ಬೇಸತ್ತಿರುವ ಜನತೆ ಹೇಗಾದರೂ ಮಾಡಿ ಭ್ರಷ್ಟಾಚಾರವನ್ನು ಈ ದೇಶದಿಂದ ತೊಲಗಿಸಲೇಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಅಣ್ಣಾರವರ ಹೋರಾಟವನ್ನು ಬೆಂಬಲಿಸುತ್ತಿದ್ದಾರೆ ಎಂಬುದು ಮಾತ್ರ ಸ್ಪಷ್ಟವಾಗಿದೆ.

ಭ್ರಷ್ಟಾಚಾರದ ವಿರುದ್ಧ ಈ ದೇಶದ ಜನತೆ ಬಹಳಷ್ಟು ಜಾಗೃತರಾಗಿದ್ದಾರೆ. ಹಾಗೆಯೇ ಈಜಿಪ್ಟ್‌ನ ಸರ್ವಾಧಿಕಾರಿ ಹುಸ್ನಿ ಮುಬಾರಕ್‌ನನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದು ಆಗ್ರಹಿಸಿ ಈಜಿಪ್ಟ್ ಜನತೆ ತಹ್ರೀರ್ ಚೌಕ್‌ನಲ್ಲಿ ಪ್ರವಾಹೋಪಾದಿಯಲ್ಲಿ ಒಟ್ಟು ಸೇರಿದಂತೆ ಈ ದೇಶದಲ್ಲಿಯೂ ಕೂಡ ಜನರು ಜಂತರ್ ಮಂತರ್‌ನಲ್ಲಿ ಒಟ್ಟು ಸೇರಿದ್ದರು. ಬಹುಶಃ ಇದೇ ಬೆಳವಣಿಗೆಯನ್ನು ಕಂಡು ಸರಕಾರವು ಕೂಡ ಭ್ರಷ್ಟಚಾರ ವಿರೋಧಿ ಕಾಯ್ದೆಯನ್ನು ಜಾರಿ ಮಾಡಲು ಮುಂದೆ ಬಂದಿರುವುದು.

ಭ್ರಷ್ಟಾಚಾರದ ಮೂಲಕ ಗಳಿಸಿಕೊಂಡಿರುವ ಅಕ್ರಮ ಸಂಪತ್ತನ್ನು ಜಪ್ತಿ ಮಾಡುವ ಸಲುವಾಗಿ ಸರಕಾರವು ಮುಂಗಾರು ಅಧಿವೇಶನದಲ್ಲಿ ಕಾನೂನನ್ನು ಜಾರಿಗೊಳಿಸುವ ಹೊರಟಿದೆ. ಇದಕ್ಕಾಗಿ 'ಬೇನಾಮಿ ಕೊಡು-ಕೊಳ್ಳು ನಿರೋಧಕ



ಕಾನೂನು-1988'ವನ್ನು ಪರಿಶೋಧಿಸುವುದೂ ಅಗತ್ಯವಾಗಿದೆ. ಬಂಡವಾಳಶಾಹಿ ವರ್ಗವನ್ನು ರಕ್ಷಿಸುತ್ತಿರುವ ಸಂವಿಧಾನದ ಅನುಚ್ಛೇದ 310-311ರಲ್ಲಿಯೂ ಬದಲಾವಣೆಗಳನ್ನು ಮಾಡಬೇಕಾಗಬಹುದು. ಇದಕ್ಕೆ ಸಂಬಂಧಿಸಿದಂತೆ ಒಂದು ವಿಶೇಷ ಪ್ರಾಧಿಕಾರವನ್ನು ರಚನೆ ಮಾಡುವುದರಿಂದಾಗಿ ಅಕ್ರಮ ಆಸ್ತಿ ಜಪ್ತಿ ಮಾಡಲು ಹೆಚ್ಚಿನ ಕಾನೂನು ಶಕ್ತಿ ದೊರೆಯುವಂತಾಗುತ್ತದೆ.

ಭ್ರಷ್ಟಾಚಾರವನ್ನು ತೊಲಗಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಾ ಚೀನಾ ಅಭಿವೃದ್ಧಿ ಪಥದತ್ತ ಸಾಗುತ್ತದೆ. ಇದನ್ನು ಕೂಡ ಅವಲೋಕಿಸಬೇಕಾಗಿದೆ. ಭ್ರಷ್ಟಾಚಾರವನ್ನು ತಡೆಗಟ್ಟಲು ಚೀನಾದಲ್ಲಿ ಕಟ್ಟನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದೀಗ ಚೀನಾ ಅಮೆರಿಕಾಕ್ಕೆ ಸರಿಸಾಟಿಯಾಗುವಂತೆ ತಲೆ ಎತ್ತಿ ನಿಂತಿದೆ. ಚೀನಾವು ಇಷ್ಟೊಂದು ಎತ್ತರಕ್ಕೆ ಬೆಳೆಯಲು ಕಾರಣ ಅದು ಕೇವಲ ಔದ್ಯೋಗಿಕ ಅಥವಾ ತಂತ್ರಜ್ಞಾನದ ಅಭಿವೃದ್ಧಿಗೆ ಹೊಂದಿಕೊಂಡಿಲ್ಲ. ಕಟ್ಟುನಿಟ್ಟಿನ ಕಾನೂನು ಮತ್ತು ತ್ವರಿತ ದಂಡಾನಾತ್ಮಕ ನಿರ್ಣಯಗಳು ಕೂಡ ಚೀನಾ ಹೆಚ್ಚು ಶಕ್ತಿಶಾಲಿಯಾಗಲು ಮತ್ತು ಇಷ್ಟೊಂದು ಸಮೃದ್ಧಿ ಹೊಂದಿ ಅಭಿವೃದ್ಧಿಯಾಗಲು ಸಹಾಯಕವಾಗಿದೆ. ಕೆಲವು ಸಮಯಗಳ ಹಿಂದೆ ಅಲ್ಲಿ ಇಬ್ಬರು ಅಧಿಕಾರಿಗಳು ಭ್ರಷ್ಟಾಚಾರ ನಡೆಸಿರುವುದು ಸಾಬೀತಾಯಿತು. ಇದರೊಂದಿಗೆ ಆ ಭ್ರಷ್ಟ ಅಧಿಕಾರಿಗಳಿಗೆ ಮರಣದಂಡನೆ ಶಿಕ್ಷೆಯನ್ನು ನೀಡುವುದರ ಜೊತೆಗೆ ಅವರ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು.

*ಈಗ ಸಂಸತ್ ಸದಸ್ಯರ ಪೈಕಿ 90 ಮಂದಿ ಸದಸ್ಯರ ಮೇಲೆ ಭ್ರಷ್ಟಾಚಾರದ ಪ್ರಕರಣಗಳು ದಾಖಲಾಗಿವೆ. ಈ ದೇಶದ ಸರ್ವಶ್ರೇಷ್ಠ ಆಡಳಿತ ವರ್ಗವಾದ ಐಎಎಸ್ ಅಧಿಕಾರಿಗಳಲ್ಲಿ ಸುಮಾರು 375 ಅಧಿಕಾರಿಗಳ ವಿರುದ್ಧ ವಿವಿಧ ಕೋರ್ಟುಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ವಿಚಾರಣೆಗಳು ನಡೆಯುತ್ತಿವೆ. ಸುಮಾರು 425ಕ್ಕೂ ಅಧಿಕ ಮಂದಿ ಐಪಿಎಸ್ ಅಧಿಕಾರಿಗಳು ಭ್ರಷ್ಟಾಚಾರ ಮತ್ತು ವಿವಿಧ ಗಂಭೀರ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ. ಮಾತ್ರವಲ್ಲ 12ಕ್ಕಿಂತಲೂ ಹೆಚ್ಚು ಮಂದಿ ನ್ಯಾಯಾಧೀಶರು ಭ್ರಷ್ಟಾಚಾರ ಪ್ರಕರಣದ ಆರೋಪಗಳಲ್ಲಿ ಸಿಲುಕಿದ್ದಾರೆ.*

ಇಷ್ಟು ಮಾತ್ರವಲ್ಲ ಒಬ್ಬ ಅಧಿಕಾರಿಯ ಪತ್ನಿಗೆ ಎಂಟು ವರ್ಷದ ಸಜೆಯನ್ನು ವಿಧಿಸಲಾಗಿದೆ. ಕಾನೂನು ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಪಾಲಿಸಿಕೊಂಡು ಬಂದುದರ ಪರಿಣಾಮವಾಗಿ ಚೀನಾ ದೇಶವು 60 ಕೋಟಿ ಮಂದಿಯನ್ನು ಬಡತನದಿಂದ ವಿಮುಕ್ತಗೊಳಿಸುವಲ್ಲಿ ಸಫಲವಾಗಿದೆ ಎಂದರೆ ಭ್ರಷ್ಟಚಾರದ ವಿರುದ್ಧ ಪಾರದರ್ಶಕ ಕಾನೂನಿನ ಅನಿವಾರ್ಯತೆ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಭಾರತದ ಸ್ಥಿತಿಯು ತುಂಬಾ ಚಿಂತಾಜನಕವಾಗಿದೆ. ಭ್ರಷ್ಟಾಚಾರವು ಇಲ್ಲಿ ಎಷ್ಟೊಂದು ಲೋಕವ್ಯಾಪಿಯಾಗಿದೆ ಎಂದರೆ ಸುಮಾರು 270 ಲಕ್ಷ ಕೋಟಿ ರೂ. ಹಣವನ್ನು ಸ್ವಿಸ್ ಬ್ಯಾಂಕ್ ಮತ್ತು ವಿದೇಶದ ಇನ್ನಿತರ ಬ್ಯಾಂಕುಗಳಲ್ಲಿ ಕಪ್ಪುಹಣದ ರೂಪದಲ್ಲಿ ಶೇಖರಿಸಿಟ್ಟಿದ್ದಾರೆ. 2ಜಿ ಸ್ಪೆಕ್ಟ್ರಂ, ಆದರ್ಶ್ ಸೊಸೈಟಿ, ಕಾಮನ್‌ವೆಲ್ತ್ ಕ್ರೀಡೆ ಮತ್ತು ಉತ್ತರ ಪ್ರದೇಶದ 35 ಸಾವಿರ ಕೋಟಿ ಆಹಾರಧಾನ್ಯ ಹಗರಣ ಹೀಗೆ ಇಂತಹ ಹಲವಾರು ಹಗರಣಗಳು ಈ ದೇಶವನ್ನೇ ಬೆಚ್ಚಿ ಬೀಳಿಸಿರುವುದಂತೂ ಸುಳ್ಳಲ್ಲ. ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲ್ಮಾಡಿ, ಕನ್ನಿಮೋಳಿಯಂತಹ ಕೆಲವೇ ಕೆಲವು ಮಂದಿ ಮಾತ್ರ ಜೈಲು ಸೇರಿದ್ದಾರೆ. ಆದರೆ ಕಲ್ಮಾಡಿ, ದಯಾನಿಧಿ ಮಾರನ್‌ಗಳಂತಹ ಇನ್ನೂ ಹಲವು ಮಂದಿ ಜೈಲು ಸೇರಬೇಕಾಗಿತ್ತು. ಇದು ಸಾಧ್ಯವಾಗದಿರುವುದು ಮಾತ್ರ ಆಡಳಿತ ವ್ಯವಸ್ಥೆಯ ದುರವಸ್ಥೆ ಎನ್ನಬಹುದು.

ಸಂವಿಧಾನದ ಪರಿಚ್ಛೇದ 310-311ರಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿ ಎಂತಹ ಉಕ್ಕಿನ ಕವಚವಿದೆ ಎಂದರೆ, ದೇಶದ ಸರಕಾರಿ ಅಧಿಕಾರಿಗಳು ಭ್ರಷ್ಟಾಚಾರದಿಂದ ಸಂಪಾದಿಸುವ ಆಸ್ತಿಯನ್ನು ರಕ್ಷಿಸುತ್ತದೆ. ಈ ವರೆಗೂ ಭ್ರಷ್ಟಾಚಾರ ವಿರೋಧಿ ಕಾನೂನಿನಲ್ಲಿ ಆಸ್ತಿಯನ್ನು ಜಪ್ತಿ ಮಾಡುವ ಯಾವುದೇ ನಿಬಂಧನೆ ಇಲ್ಲ. ಇಂತಹ ಕಾನೂನುಗಳು ಚಾಲ್ತಿಯಲ್ಲಿರುವುದರಿಂದಲೇ ಪ್ರಭಾವೀ ನಾಯಕರು ಮತ್ತು ಆಡಳಿತಾಧಿಕಾರಿಗಳು ತನಿಖಾ ಏಜೆನ್ಸಿಗಳನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟಿರುತ್ತಾರೆ. ಇದರೊಂದಿಗೆ ಸಾಕ್ಷ್ಯಗಳನ್ನು ದುರ್ಬಲಗೊಳಿಸಿ ಬಿಡುತ್ತಾರೆ. ಈ ಕಾನೂನಿನಲ್ಲಿ ಬದಲಾವಣೆ ತಂದು ಭ್ರಷ್ಟಾಚಾರವನ್ನು ನಿರ್ಮೂಲನೆಗೊಳಿಸಬಹುದಾಗಿದೆ.

ಆದರೆ ಇಲ್ಲಿನ ರಾಜಕಾರಣಿಗಳು, ಬಂಡವಾಳಶಾಹಿಗಳು, ಔದ್ಯೋಗಿಕ ವರ್ಗಗಳು ಈ ಕಾನೂನುಗಳನ್ನು ಜಾರಿ ತರಲು ಒಪ್ಪುತ್ತಿಲ್ಲ. ಏಕೆಂದರೆ ಭ್ರಷ್ಟಾಚಾರವನ್ನು ತೊಲಗಿಸುವ ಇತಂಹ ಕಾನೂನುಗಳು ಜಾರಿಯಾದರೆ ಅವು ಇವರ ಕುತ್ತಿಗೆಗೆ ಸುತ್ತಿಕೊಳ್ಳಲಿವೆ ಎಂಬುದು ಸ್ಪಷ್ಟವಾಗಿದೆ.

ಭ್ರಷ್ಟಾಚಾರ ನಿರ್ಮೂಲನೆಗೆ ಕಾನೂನನ್ನು ಜಾರಿಗೊಳಿಸಲಾಗುವುದು ಎಂಬ ಹೇಳಿಕೆಯನ್ನು ನೀಡುತ್ತಾ ಆಡಳಿತ ವರ್ಗವು ಕಾಲಹರಣ ಮಾಡುತ್ತಲೇ ಇದೆ. ಭ್ರಷ್ಟಾಚಾರವನ್ನು ತಡೆಗಟ್ಟುವಂತಹ ಕಾನೂನುಗಳನ್ನು ಜಾರಿಗೊಳಿಸುವ ಬಗ್ಗೆ ಕೆಲವೊಂದು ದಕ್ಷ ಆಡಳಿತಗಾರರಲ್ಲಿ ಇಚ್ಛಾಶಕ್ತಿ ಇದ್ದರೂ ಅವು ಸಂಸತ್ತಿನಲ್ಲಿ ಯಾಕೆ ಜಾರಿಯಾಗುತ್ತಿಲ್ಲ? ಇಂತಹ ಒಂದು ಪ್ರಶ್ನೆ ನಮ್ಮನ್ನು ಕಾಡುತ್ತಿರಬಹುದು. ಈ ಪ್ರಶ್ನೆಗೆ ಉತ್ತರವನ್ನು ಸುಲಭವಾಗಿ ಕಂಡುಕೊಳ್ಳಬಹುದು. ಏಕೆಂದರೆ ಈಗ ಸಂಸತ್ ಸದಸ್ಯರ ಪೈಕಿ 90 ಮಂದಿ ಸದಸ್ಯರ ಮೇಲೆ ಭ್ರಷ್ಟಾಚಾರದ ಪ್ರಕರಣಗಳು ದಾಖಲಾಗಿವೆ. ಈ ದೇಶದ ಸರ್ವಶ್ರೇಷ್ಠ ಆಡಳಿತ ವರ್ಗವಾದ ಐಎಎಸ್ ಅಧಿಕಾರಿಗಳಲ್ಲಿ ಸುಮಾರು 375 ಅಧಿಕಾರಿಗಳ ವಿರುದ್ಧ ವಿವಿಧ ಕೋರ್ಟುಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ವಿಚಾರಣೆಗಳು ನಡೆಯುತ್ತಿವೆ. ಸುಮಾರು 425ಕ್ಕೂ ಅಧಿಕ ಮಂದಿ ಐಪಿಎಸ್ ಅಧಿಕಾರಿಗಳು ಭ್ರಷ್ಟಾಚಾರ ಮತ್ತು ವಿವಿಧ ಗಂಭೀರ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ. ಮಾತ್ರವಲ್ಲ 12ಕ್ಕಿಂತಲೂ ಹೆಚ್ಚು ಮಂದಿ ನ್ಯಾಯಾಧೀಶರು ಭ್ರಷ್ಟಾಚಾರ ಪ್ರಕರಣದ ಆರೋಪಗಳಲ್ಲಿ ಸಿಲುಕಿದ್ದಾರೆ.

ಈ ದೇಶದ ಆಡಳಿತ ವರ್ಗದ ಬಹುತೇಕ ಜನರು ಭ್ರಷ್ಟಾಚಾರದಲ್ಲಿ ಕೂಪದಲ್ಲಿ ಮುಳುಗಿದ್ದಾರೆ. ಭ್ರಷ್ಟಾಚಾರ ನಿರ್ಮೂಲನೆಗಾಗಿ ರಾಜ್ಯಗಳಲ್ಲಿ ಲೋಕಾಯುಕ್ತವೆಂಬುದು ಜಾರಿಯಲ್ಲಿದೆ. ಆದರೆ ಅವುಗಳು ಹಲ್ಲಿಲ್ಲದ ಹಾವುಗಳಂತೆ ಭುಸುಗುಡುತ್ತಿವೆ. ಇದರಿಂದಾಗಿ ಭ್ರಷ್ಟಾಚಾರದಂತಹ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವಹಿಸಿಕೊಡಲಾಗುತ್ತದೆ. ಆದರೆ ಅವು ಭ್ರಷ್ಟಾಚಾರದಲ್ಲಿ ಮುಳುಗಿರುವ ಹಲವು ತಿಮಿಂಗಿಲಗಳನ್ನು ಪತ್ತೆ ಮಾಡುತ್ತವೆಯಾದರೂ ಅವುಗಳ ವಿರುದ್ಧ ಕ್ರಮ ಕೈಗೊಳ್ಳುವ ಯಾವುದೇ ಅಧಿಕಾರ ವಿರುವುದಿಲ್ಲ. ಅದೇ ರೀತಿ ನ್ಯಾಯಾಲಯಗಳು ಕೂಡ ಪ್ರಕರಣಗಳನ್ನು ಹಲವು ವರ್ಷಗಳ ವರೆಗೆ ಮುಂದೂಡುತ್ತಾ ಹೋದಂತೆ ಸಾಕ್ಷಿಗಳು ಕೂಡ ದುರ್ಬಲವಾಗುತ್ತವೆ. ಇದರಿಂದಾಗಿ ಭ್ರಷ್ಟರು ಸುಲಭವಾಗಿ ಪಾರಾಗುತ್ತಿದ್ದಾರೆ.

ಈ ದೇಶದಲ್ಲಿ ಜನ ಸಾಮಾನ್ಯನೋರ್ವ ತಾನು ಮಾಡಿದ ಸಣ್ಣ ಪ್ರಮಾಣದ ಅಪರಾಧಗಳಿಗೂ ಹೇಗೆ ಶಿಕ್ಷೆ ಅನುಭವಿಸುತ್ತಾನೆಯೋ ಅದೇ ರೀತಿಯಾಗಿ ಆಡಳಿತ ವರ್ಗದಲ್ಲಿರುವ ಎಲ್ಲಾ ಭ್ರಷ್ಟರಿಗೆ



ಕಠಿಣ ಶಿಕ್ಷೆಯಾಗಬೇಕು. ಕೇವಲ ಭ್ರಷ್ಟ ಅಧಿಕಾರಿಗಳ ರಾಜೀನಾಮೆಯಿಂದ ಭ್ರಷ್ಟಚಾರ ನಿರ್ಮೂಲನೆಯನ್ನು ಮಾಡಲು ಸಾಧ್ಯವಿಲ್ಲ. ಆದುದರಿಂದಲೇ ಈಗಾಗಲೇ ಇರುವ ಭ್ರಷ್ಟಾಚಾರ ವಿರೋಧಿ ಕಾನೂನುಗಳನ್ನು ಅತೀ ಶೀಘ್ರವಾಗಿ ಬಲಪಡಿಸಬೇಕು. ಹೆಚ್ಚು ವಿಳಂಬವಾದಂತೆ ಸಾಕ್ಷ್ಯಗಳೂ ದುರ್ಬಲಗೊಳ್ಳುವ ಸಾಧ್ಯತೆಗಳಿರುವುದರಿಂದ ನ್ಯಾಯಾಲಯಗಳು ಕೂಡ ಈ ಪ್ರಕರಣಗಳನ್ನು ತ್ವರಿತವಾಗಿ ಕೊನೆಗೊಳಿಸಬೇಕು. ಅಪರಾಧಿಗಳಿಗೆ ದಂಡನಾರ್ಹ ಶಿಕ್ಷ ವಿಧಿಸಬೇಕು. ಎಷ್ಟೇ ಪ್ರಭಾವಿ ವ್ಯಕ್ತಿಯಾಗಿದ್ದರೂ ಕಾನೂನಿನಿಂದ ತಪ್ಪಿಸಿಕೊಳ್ಳುವ ಯಾವುದೇ ಅವಕಾಶವನ್ನು ನೀಡಬಾರದು.

ಈ ನಿಟ್ಟಿನಲ್ಲಿ ನಾವು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತಾ ಅಭಿವೃದ್ಧಿ ಪಥದತ್ತ ಸಾಗುತ್ತಿರುವ ಚೀನಾದ ಕ್ರಮವನ್ನು ಅನುಸರಿಸುವತ್ತ ದೃಷ್ಟಿ ಹಾಯಿಸಬೇಕಾಗಿದೆ. ಅಲ್ಲದೇ ಸಂಪತ್ತಿನ ಸಮಾನ ಹಂಚಿಕೆಯೊಂದಿಗೆ ತನ್ನ ದೇಶದ ಬಡವರ ಸಂಖ್ಯೆಯನ್ನು ಕಡಿಮೆಗೊಳಿಸಿದಂತೆ ನಮ್ಮ ದೇಶದಲ್ಲಿಯೂ ಕೂಡ ಇಂತಹ ಕ್ರಮಗಳನ್ನು ಕೈಗೊಳ್ಳಬೇಕು. ಭ್ರಷ್ಟಾಚಾರ ತೊಲಗಿ ದೇಶದ ಎಲ್ಲಾ ಜನರಿಗೂ ಸಂಪತ್ತಿನ ಸಮಾನ ಹಂಚಿಕೆಯಾದರೆ ಮಾತ್ರ ಭಾರತ ಪ್ರಕಾಶಿಸಲು ಸಾಧ್ಯವಾಗುವುದು.

# ಶಿಕ್ಷಣದ ಕೇಸರೀಕರಣಕ್ಕೆ ಬಿಜೆಪಿ ಸಂಚು

**● ಕೆ.ಎಲ್.ಅಶೋಕ್**

ಕರ್ನಾಟಕ ಸರಕಾರ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಭಗವದ್ಗೀತೆಯ 14, 15ನೇ ಅಧ್ಯಾಯವನ್ನು ಕಂಠಪಾಠ ಮಾಡಲು ಹೊರಟಿರುವುದು ವ್ಯಂಗ್ಯವೇ ಸರಿ.

ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪ ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಬ್ರಾಹ್ಮಣ್ಯದ ಪಾರಮ್ಯವನ್ನು ಎತ್ತಿ ಹಿಡಿಯುವ ಛಾತ್ರ್ವರ್ಣವನ್ನು ಸಮರ್ಥಿಸುವ ಭಗವದ್ಗೀತೆಯ ಆಧ್ಯಾಯಗಳನ್ನು ಎಳೆಯ ಮಕ್ಕಳ ಮೇಲೆ ಹೇರುವುದು ಎಷ್ಟು ಸರಿ.

ಬಿಜೆಪಿ ಸರಕಾರ ಆಡಳಿತಕ್ಕೆ ಬಂದಾನಿಗಿಂದಲೂ ಈ ರೀತಿ ಶಿಕ್ಷಣದ ಕೇಸರೀಕರಣ ಹೊಸತೇನೂ ಅಲ್ಲ. ಕೇಂದ್ರದಲ್ಲಿ ಎನ್‌ಡಿಎ ಸರಕಾರ ಅಸ್ತಿತ್ವದಲ್ಲಿದ್ದಾಗ ಸಂಘಪರಿವಾರದ ಇತಿಹಾಸವನ್ನು ವೈಭವೀಕರಿಸುವ ಪ್ರಯತ್ನಗಳು ನಡೆದದ್ದನ್ನು ನಾವು ಈಗಾಗಲೇ ಕಂಡಿದ್ದೇವೆ. ಈಗ ನಮ್ಮ ರಾಜ್ಯದಲ್ಲಿ ಆರೆಸ್ಸೆಸ್‌ನ ಹಿಂದುತ್ವವಾದಿ ಮನುವಾದಿ ಸಿದ್ಧಾಂತವನ್ನು ಯಾರಿಗೂ ತಿಳಿಯದಂತೆ ವ್ಯವಸ್ಥಿತವಾಗಿ ತೂರಲಾಗುತ್ತದೆ. ಇದಕ್ಕೊಂದು ಪ್ರತ್ಯಕ್ಷ ಉದಾಹರಣೆ ''ಭಗವದ್ಗೀತೆಯ ಪಠಣ ವಿವಾದ''.

ಭಗವದ್ಗೀತೆ ಒಂದು ಶ್ರೇಷ್ಟ ಕೃತಿಯೋ, ಪವಿತ್ರ ಕೃತಿಯೋ ಅಲ್ಲವೋ ಎನ್ನವುದು ಅದಷ್ಟು ಮುಖ್ಯವಾದ ವಿಚಾರವಲ್ಲ. ಬಿಜೆಪಿ ಸರಕಾರ ಇದನ್ನು ಯಾವುದಕ್ಕೆ ಬಳಸಿಕೊಳ್ಳುತ್ತದೆ ಎನ್ನುವುದು ಮುಖ್ಯ ಪ್ರಶ್ನೆಯಾಗುತ್ತದೆ. ಭಗವದ್ಗೀತೆಯ 14, 15ನೇ ಅಧ್ಯಾಯವು ಮನುಷ್ಯನ ಭೌತಿಕ ಬದುಕಿನ ನಿಷ್ಫಲತೆಯನ್ನು ಸಾರುತ್ತದೆ. ಮನುಷ್ಯನಲ್ಲಿ ಕಾಮ ಮತ್ತು ತಾಮಸಗುಣಗಳು ಹೇಗೆ ಹುಟ್ಟುತ್ತದೆ ಮತ್ತು ಅದನ್ನು ಹೇಗೆ ಮೀರುವುದು ಎಂದು ಹೇಳುತ್ತದೆ. ಭಗವಂತನಲ್ಲಿ ನಂಬಿಕೆ ಇಡುವುದೇ ಅಂತಿಮ ಸಾಕ್ಷಾತ್ಕಾರ ಎಂದು ಬೋಧಿಸುತ್ತದೆ. ಆದರೆ ಮಾಂಸಾಹಾರ ತಿಂದರೆ ಮನುಷ್ಯನಲ್ಲಿ ದುಷ್ಟ ಕ್ರೌರ್ಯತ್ವ ಇರುತ್ತದೆ ಅನ್ನುವರೇ ಬಿಜೆಪಿ ಸರಕಾರದ ನಿರ್ಣಾಯಕ ಹುದ್ದೆಯಲ್ಲಿದ್ದಾರೆ. ಹಾಗಾದರೆ




ಎಳೆಯ ಮಕ್ಕಳ ಮೇಲೆ ಇದು ಹೇಗೆ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿಯಬಹುದು.

ಕಳೆದ ಕೆಲವು ತಿಂಗಳಗಳು ಹಿಂದೆ ರಾಜ್ಯ ಶಿಕ್ಷಣ ಇಲಾಖೆ ಪ್ರತಿಯೊಂದು ಶಾಲೆಯಲ್ಲೂ ಕಡ್ಡಾಯವಾಗಿ ರಾಷ್ಟ್ರೋತ್ಥಾನ ಪ್ರಶಸ್ತಿಯ 300 ಪುಸ್ತಕಗಳು ಕೊಡಬೇಕೆಂದು ಆದೇಶ ಹೊರಡಿಸಿದೆ. ಆ ಮುನ್ನೂರು ಪುಸ್ತಕಗಳಲ್ಲಿ ಆರೆಸ್ಸೆಸ್‌ನ ಮುಖಂಡ ಮತ್ತು ಆರೆಸ್ಸೆಸ್‌ನ ಚಿಂತನೆದಾರರಿಗೆ ಪೂರಕವಾದ ಸಾಹಿತ್ಯವೇ ಹೆಚ್ಚಿದೆ. ಉಳಿದಂತೆ ಹಲವಾರು ಪ್ರಗತಿಪರ ಚಿಂತಕರ ಪುಸ್ತಕಗಳಿದ್ದರೂ ಅವನ್ನೆಲ್ಲಾ ಕೇಸರಿ ಚಿಂತನದಾರರಿಗೆ ಎರಕ ಹಚ್ಚಿ ಇತಿಹಾಸಕ್ಕೆ ದ್ರೋಹ ಬಗೆಯಲಾಗಿದೆ.

ಈ ರೀತಿಯಾಗಿ ಬಿಜೆಪಿ ಆಡಳಿತದ ಅವಧಿಯಲ್ಲಿ ಶಿಕ್ಷಣ,

**ವಾಸ್ತವದಲ್ಲಿ ಮೌಲ್ಯಯುತ ಶಿಕ್ಷಣವೆಂದರೆ ಧಾರ್ಮಿಕ ಶಿಕ್ಷಣ ಎಂಬ ಸಮಾನಾರ್ಥದಲ್ಲಿ ಬಳಸುವುದಾದರೆ ಇದು ಶುದ್ಧಾಂಗ ತಪ್ಪು ವ್ಯಾಖ್ಯಾನ. ಮೌಲ್ಯ ಶಿಕ್ಷಣವೆಂದರೆ ಮಕ್ಕಳಲ್ಲಿ ಔದಾರ್ಯ, ಪ್ರೀತಿ, ಕರುಣೆ, ಸಹನೆ, ಮಾನವೀಯತೆ, ವಿಶಾಲ ಮನೋಭಾವ ಇವುಗಳೆಂದರ್ಥ. ಇವುಗಳು ಕೇವಲ ಧಾರ್ಮಿಕ ಗ್ರಂಥಗಳಲ್ಲಿ ಮಾತ್ರ ಇರಬೇಕೆಂದಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಶೋಷಣೆ, ತಾರತಮ್ಯ, ಬ್ರಾಹ್ಮಣ್ಯದ ಶ್ರೇಷ್ಠತೆ, ಚಾತುರ್ವರ್ಣದ ಸಮರ್ಥನೆ ಇವುಗಳೇ ಧಾತುವಾಗಿರುವ ಗ್ರಂಥಗಳೇ ಅಲ್ಲ.**

ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳನ್ನು ಹಂತ ಹಂತವಾಗಿ ಕೋಮುವಾದೀಕರಣಗೊಳಿಸುವ ಷಡ್ಯಂತ್ರಗಳು ನಡೆಯುತ್ತಿದೆ. ಗತಕ್ಕೆ ಹಿಂದಿರುಗುವ ವರ್ತಮಾನವನ್ನು ನಿರಾಕರಿಸುವ ಭವಿಷ್ಯದ ಬಗ್ಗೆ ಯಾವುದೇ ಕನಸು ಇಲ್ಲದ ವಿದ್ಯಾರ್ಥಿ ಸಮುದಾಯವನ್ನು ತಮ್ಮ ಸಿದ್ಧಾತಂಕ್ಕೆ ತಕ್ಕಂತೆ ಪೋಷಿಸಿ ಬೆಳೆಸುವುದೇ ಸಂಘಪರಿವಾರದ ಸಿದ್ಧಾಂತವಾಗಿದೆ. ಭಗವದ್ಗೀತೆಯನ್ನು ಸಮರ್ಥಿಸುವ ಸಂಘಪರಿವಾರದ ಮತ್ತು ಬಿಜೆಪಿಯ ಮಂದಿ ಮೌಲ್ಯ ಶಿಕ್ಷಣವನ್ನು ನೀಡಬೇಕು, ಆ ಕಾರಣದಿಂದ ಇಂದಿನ ಯುವ ಜನಾಂಗಕ್ಕೆ ಹಿಂದೂ ಧರ್ಮದ ಪೌರಾಣಿಕ ಗ್ರಂಥಗಳನ್ನು ಕಲಿಸಬೇಕೆಂದು ಹೇಳುತ್ತಾರೆ. ವಾಸ್ತವದಲ್ಲಿ ಮೌಲ್ಯಯುತ ಶಿಕ್ಷಣವೆಂದರೆ ಧಾರ್ಮಿಕ ಶಿಕ್ಷಣ ಎಂಬ ಸಮಾನಾರ್ಥದಲ್ಲಿ ಬಳಸುವುದಾದರೆ ಇದು ಶುದ್ಧಾಂಗ ತಪ್ಪು ವ್ಯಾಖ್ಯಾನ. ಮೌಲ್ಯ ಶಿಕ್ಷಣವೆಂದರೆ ಮಕ್ಕಳಲ್ಲಿ ಔದಾರ್ಯ, ಪ್ರೀತಿ, ಕರುಣೆ, ಸಹನೆ, ಮಾನವೀಯತೆ, ವಿಶಾಲ ಮನೋಭಾವ ಇವುಗಳೆಂದರ್ಥ. ಇವುಗಳು ಕೇವಲ ಧಾರ್ಮಿಕ ಗ್ರಂಥಗಳಲ್ಲಿ ಮಾತ್ರ ಇರಬೇಕೆಂದಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಶೋಷಣೆ, ತಾರತಮ್ಯ, ಬ್ರಾಹ್ಮಣ್ಯದ ಶ್ರೇಷ್ಠತೆ, ಚಾತುರ್ವರ್ಣದ ಸಮರ್ಥನೆ ಇವುಗಳೇ ಧಾತುವಾಗಿರುವ ಗ್ರಂಥಗಳೇ ಅಲ್ಲ. ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ಭಗವದ್ಗೀತೆ. ಭಗವದ್ಗೀತೆಯ ಕಾಲಮಾನದ ಬಗ್ಗೆ ಅನೇಕ ಜಿಜ್ಞಾಸೆಗಳು ನಡೆದಿದೆ. ಕ್ರಿ.ಪೂ. 3ನೆ ಶತಮಾನ, ಕ್ರಿ.ಶ 1ನೆ ಶತಮಾನ ಇದು ಗುಪ್ತರ ಕಾಲ ಪಥವೋ ಎಂದು ಜಿಜ್ಞಾಸೆಗಳಿವೆ. ಆದರೆ ಬಹುತೇಕ ಚಾತುರ್ವರ್ಣ ಮತ್ತು ಜಾತಿ ವ್ಯವಸ್ಥೆಯ ಉಗಮ ಕ್ರಿ.ಪೂ.1ನೇ ಶತಮಾನದಿಂದ ಕ್ರಿ.ಶ.1ನೆ ಶತಮಾನದ ನಡುವೆ ಉಗಮವಾಯಿತೆಂದು ಬಹುತೇಕ ವಿದ್ವಾಂಸರ ಒಮ್ಮತಾಭಿಪ್ರಾಯ.

ಇಂತಹ ಜಾತಿ ವ್ಯವಸ್ಥೆಯನ್ನು ಸಮರ್ಥಿಸಲೋಸುಗವೇ ಕೃಷ್ಣನ ಬಾಯಲ್ಲಿ ಭಗವದ್ಗೀತೆಯನ್ನು ಉಪದೇಶಿಸಲಾಗಿದೆ. ಇದು ವೈದಿಕ ಧರ್ಮವು ಹಿಂಬಾಗಿಲಿನಿಂದ ಪ್ರವೇಶ ಮಾಡಿದ ಐತಿಹಾಸಿಕ ದ್ರೋಹದ ಕೃಪೆಯೂ ಹೌದು. ಮನುಷ್ಯ ಸಹಜ ಭೌತಿಕದ ಬಗ್ಗೆ ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಅರ್ಜುನನಿಂದ ಕೇಳಲಾದ ಪ್ರಶ್ನೆಗೆ ಶ್ರೀ ಕೃಷ್ಣನು ಲಯವಂಚಕತನದ ಮೂಲಕ ಉತ್ತರಿಸಿ ತನ್ನ ಸಹೋದರರನ್ನೇ ಕೊಲ್ಲಲು ಧರ್ಮವನ್ನು ಬಳಸಿಕೊಳ್ಳುತ್ತಾನೆ. ಇಂತಹ ಒಂದು ಪಠ್ಯವನ್ನು ಓದಿದ ಎಳೆಯ ಮಕ್ಕಳಿಗೆ ಬದುಕಿನ ಬಗ್ಗೆ ನಿಷ್ಫಲತೆಯೂ, ಹತಾಶೆಯೂ ಮೂಡುವುದಿಲ್ಲವೇ?

ಯಡಿಯೂರಪ್ಪ ಸರಕಾರದ ಈ ಸಂವಿಧಾನ ವಿರೋದಿ ಕ್ರಮಗಳು ಮತ್ತು ಮತದ್ವೇಷ ಬ್ರಾಹ್ಮಣ್ಯದ ಪುರಸ್ಕಾರದ ಪ್ರಯತ್ನಗಳಾಗಿವೆ. ಒಂದು ಸೆಕ್ಯುಲರ್, ಪ್ರಜಾತಾಂತ್ರಿಕ ರಾಷ್ಟ್ರವನ್ನಾಗಿ ಈ ದೇಶವನ್ನು ಕಟ್ಟಬೇಕೆಂಬ ನಿರ್ದೇಶನ ನೀಡಿರುವ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಈ ಜನವಿರೋಧಿ ನೀತಿಗಳಿಗೆ ಸರಿಯಾದ ಜನ ಚಳವಳಿಯ ಮೂಲಕ ಉತ್ತರಿಸದಿದ್ದರೆ ಮುಂದಿನ ಭವಿಷ್ಯವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ?


## ಪ್ರಸ್ತುತ 'ಫ್ರೀಡಂ-ರಂಝಾನ್' ವಿಶೇಷಾಂಕ

ಪ್ರತಿ ವರ್ಷದಂತೆ ಆಗಸ್ಟ್ ತಿಂಗಳ 'ಪ್ರಸ್ತುತ' ಫ್ರೀಡಂ-ರಂಝಾನ್ ವಿಶೇಷಾಂಕವು ಆಗಸ್ಟ್ ಮೊದಲ ವಾರದಲ್ಲಿ ಬಿಡುಗಡೆಯಾಗಲಿದೆ. ಆಗಸ್ಟ್ ತಿಂಗಳ ಎರಡು ಸಂಚಿಕೆಯು ವಿಶೇಷಾಂಕ ರೂಪದಲ್ಲಿ ವರ್ಣರಂಜಿತವಾಗಿ ಒಂದೇ ಪ್ರತಿಯಾಗಿ ಪ್ರಕಟವಾಗಲಿದೆ.

ನಿಮ್ಮ ಪ್ರತಿಯನ್ನು ಇಂದೇ ಕಾದಿರಿಸಿ.

ಬಿಡಿ ಪ್ರತಿ ಬೆಲೆ ರೂ.25

## ಫ್ರೀಡಂ ಪರೇಡ್ - 2010 ಸಿಡಿ ಲಭ್ಯ

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ವತಿಯಿಂದ 2010ರಲ್ಲಿ ಉಡುಪಿ ಮತ್ತು ಮೈಸೂರಿನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಸಿ.ಡಿ.ಬಿಡುಗಡೆಗೊಂಡಿದ್ದು, ಪ್ರತಿಗಳಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

ಕೋಸ್ಟಲ್ ಹೌಸ್, ಬಂದರ್, ಮಂಗಳೂರು

ಸಿ.ಡಿ.ಬೆಲೆ ರೂ.20

ವರದಿ: ಅಸ್ಲಮ್ ಖಾನ್, ಸವಾಯಿ ಮಾಧೋಪುರ್ (ರಾಜಸ್ಥಾನ)

# ಷಡ್ಯಂತ್ರಕ್ಕೆ ಬಲಿಯಾದರೇ ಪೂಲ್ ಮುಹಮ್ಮದ್?

## ಪ್ರಕರಣವನ್ನು ಸಿಬಿಐಗೊಪ್ಪಿಸಲು ಜನರ ಆಗ್ರಹ



10,000 ದಷ್ಟು ಮಂದಿ ಸೇರಿದ್ದ ಪ್ರತಿಭಟನೆ

ರಾಜಸ್ಥಾನದ ಪೊಲೀಸ್ ಅಧಿಕಾರಿ ಪೂಲ್ ಮುಹಮ್ಮದ್‌ರ ಹತ್ಯೆಯ ಹಿಂದೆ ರಹಸ್ಯವೊಂದು ಅಡಗಿರುವುದು ಗೋಚರವಾಗುತ್ತದೆ. ಇಲ್ಲಿನ ಜನ ಪೂಲ್ ಮುಹಮ್ಮದ್‌ರ ಹತ್ಯೆಯನ್ನು ಸಿಬಿಐಗೆ ಒಪ್ಪಿಸುವಂತೆ ಹೋರಾಟ ನಡೆಸುತ್ತಿದ್ದಾರೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಈ ಹೋರಾಟದಲ್ಲಿ ಮುಂಚೂಣಿಯಲ್ಲಿದೆ. ಪೂಲ್ ಮುಹಮ್ಮದ್‌ರ ಹತ್ಯಾ ಪ್ರಕರಣವನ್ನು ಸಿಬಿಐ ತನಿಖೆಗೆ ಆಗ್ರಹಿಸಿ ಪಾಪ್ಯುಲರ್ ಫ್ರಂಟ್ ನಡೆಸಿದ ಪ್ರತಿಭಟನೆಯಲ್ಲಿ ಸುಮಾರು 10,000 ಮಂದಿ ಸೇರಿದ್ದರು.

ಪೂಲ್ ಮುಹಮ್ಮದ್‌ರ ಹತ್ಯೆಯ ಹಿಂದೆ ಅವರ ಮೇಲಾಧಿಕಾರಿ ಸಿಇಓ ಮಹೀಂದರ್ ಸಿಂಗ್ ಮತ್ತು ಸಬ್ ಇನ್‌ಸ್ಪೆಕ್ಟರ್ ಸುಮೇರ್ ಸಿಂಗ್ ಭಾಗಿಯಾಗಿದ್ದಾರೆ ಎಂಬುದು ಜನರ ಆರೋಪ.

ಪೂಲ್ ಮುಹಮ್ಮದ್ ದಕ್ಷ ಪೊಲೀಸ್ ಅಧಿಕಾರಿಯಾಗಿದ್ದರು. ಅವರು ರಾಜಸ್ಥಾನದ ಸವಾಯ್ ಮಾಧೋಪುರ್ ಜಿಲ್ಲೆಯ ಸೂರ್ವಾಲ್ ನಗರದಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಜಿಲ್ಲೆಯಲ್ಲಿ ಮೀನಾ ಸಮುದಾಯವು ಅತ್ಯಂತ ಬಲಿಷ್ಠವಾಗಿದ್ದು. ಈ ಸಮುದಾಯದ ಜನರು ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಪೊಲೀಸ್ ಅಧಿಕಾರಿಗಳು ಈ ಸಮುದಾಯವನ್ನು ಭಯಪಡುತ್ತಿದ್ದರು.

ಈ ಸಂದರ್ಭದಲ್ಲಿ ಸೂರ್ವಾಲ್‌ಗೆ ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ನೇಮಕವಾದ ಪೂಲ್ ಮುಹಮ್ಮದ್ ಇಲ್ಲಿ ನಡೆಯುತ್ತಿದ್ದ ಅಪರಾಧಗಳನ್ನು ನಿಯಂತ್ರಿಸಲು ಯಸಸ್ವಿಯಾಗಿದ್ದರು ಮತ್ತು ಮೀನಾ ಸಮುದಾಯವನ್ನು ಹದ್ದುಬಸ್ತಿನಲಿಟ್ಟಿದ್ದರು. ಹೀಗಾಗಿ ಮೀನಾ ಸಮುದಾಯದ ಕೆಂಗಣ್ಣು ಇವರ ಮೇಲಿತ್ತು.

ಪೂಲ್ ಮುಹಮ್ಮದ್ ದಕ್ಷ ಅಧಿಕಾರಿಯಾಗಿದ್ದ ಹಿನ್ನೆಲೆಯಲ್ಲಿ ಸಿಇಓ ಮಹೀಂದರ್ ಸಿಂಗ್ ಮತ್ತು ಸಬ್ ಇನ್‌ಸ್ಪೆಕ್ಟರ್ ಸುಮೇರ್ ಸಿಂಗ್‌ಗೆ ಅವರ ಮೇಲೆ ಅಸಹನೆಯೊಂದಿತ್ತು.



ಪ್ರಕರಣವನ್ನು ಸಿಬಿಐಗೊಪ್ಪಿಸಲು ಮನವಿ ಸಲ್ಲಿಸುತ್ತಿರುವುದು.

ಈ ಸನ್ನಿವೇಶದಲ್ಲಿ ಸೊರ್ವಾಲ್‌ನಲ್ಲಿ ಘಟನೆಯೊಂದು ನಡೆಯುತ್ತದೆ. ಇಲ್ಲಿ ಡಾಕಾ ದೇವಿ ಎಂಬ ಹೆಸರಿನ ಮಹಿಳೆಯನ್ನು ಹತ್ಯೆಗೈದು ಚಿನ್ನಾಭರಣಗಳನ್ನು ಲೂಟಿಗೆಯ್ಯಲಾಗುತ್ತದೆ. ಹತ್ಯೆಯ ಆರೋಪಿಗಳು ಮೀನಾ ಸಮುದಾಯದವರೇ ಆಗಿರುವುದರಿಂದ ಪೂಲ್ ಮುಹಮ್ಮದ್ ಅವರನ್ನು ಬಂಧಿಸುತ್ತಾರೆ. ಆದರೆ ತನಿಖೆ ನಡೆಸುವ ಮೊದಲೇ ಮೀನಾ ಸಮುದಾಯದ ರಾಜಕಾರಣಿಗಳು ಮತ್ತು ಸಿಐಓ ಮಹೀಂದರ್ ಸಿಂಗ್‌ರಿಂದ ಒತ್ತಡ ಬಂದ ಹಿನ್ನೆಲೆಯಲ್ಲಿ ಆರೋಪಿಗಳನ್ನು ಕೇಸು ದಾಖಲಿಸದೆ ಬಂಧ ಮುಕ್ತಗೊಳಿಸಲಾಗುತ್ತದೆ. ಬಿಜೆಪಿಗೆ ನಿಷ್ಠವಾದ ಮೀನಾ ಸಮುದಾಯ ಬಳಿಕ ಈ ಘಟನೆಯನ್ನು ಅಲ್ಪಸಂಖ್ಯಾತ ಸಮುದಾಯದವರು ಮಾಡಿದ್ದಾರೆ ಎನ್ನುವ ಮೂಲಕ ಇದಕ್ಕೆ ಕೋಮು ಬಣ್ಣವನ್ನು ನೀಡಲು ಮುಂದಾಗುತ್ತದೆ.

ಮಾರ್ಚ್ 18, 2011ರಂದು ಮೀನಾ ಸಮುದಾಯವು ಮಹಿಳೆಯ ಹತ್ಯೆಯ ನಿಜವಾದ ಆರೋಪಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿ ಪ್ರತಿಭಟನೆಯೊಂದನ್ನು ಹಮ್ಮಿಕೊಂಡಿತು. ಪ್ರತಿಭಟನೆಯ ವೇಳೆ ನೀರಿನ ಟ್ಯಾಂಕ್‌ವೊಂದಕ್ಕೆ ಹತ್ತಿ ಕುಳಿತ ಮೀನಾ ಸಮುದಾಯದ ಯುವಕನೊಬ್ಬ, ಸಂಜೆ 5 ಗಂಟೆಯೊಳಗೆ ಆರೋಪಿಗಳನ್ನು ಪತ್ತೆ ಹಚ್ಚದೇ ಇದ್ದರೆ ತಾನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೆಳಕ್ಕೆ ಜಿಗಿಯುವುದಾಗಿ ಬೆದರಿಕೆ ಹಾಕುತ್ತಾನೆ. ಈ ಸಂದರ್ಭದಲ್ಲಿ ಪೂಲ್ ಮುಹಮ್ಮದ್ ಮತ್ತು ಇತರ ಅಧಿಕಾರಿಗಳು ಮಾತ್ರ ಸ್ಥಳದಲ್ಲಿದ್ದರು. ಪ್ರತಿಭಟನೆ ನಡೆಯುತ್ತಿದ್ದಾಗ ಸಿಐಓ ಮಹೀಂದರ್ ಸಿಂಗ್ 4 ಕಿ.ಮೀ. ದೂರದಲ್ಲಿ ನಿಂತಿದ್ದನು. ವ್ಯಕ್ತಿಯನ್ನು ಕೆಳಗಿಳಿಸುವ ಪ್ರಯತ್ನಕ್ಕೆ ಮುಹಮ್ಮದ್ ಬಿಟ್ಟರೆ ಯಾವುದೇ ಅಧಿಕಾರಿಗಳೂ ಬಂದಿರಲಿಲ್ಲ. ಸಂಜೆ 5 ಗಂಟೆಯ ವೇಳೆಗೆ ಯುವಕನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಟ್ಯಾಂಕಿಯಿಂದ ಕೆಳಗೆ ಹಾರುತ್ತಾನೆ.

ಈ ಸಂದರ್ಭದಲ್ಲಿ ಪೂಲ್ ಮುಹಮ್ಮದ್ ಯುವಕನನ್ನು ರಕ್ಷಿಸುವುದಕ್ಕಾಗಿ ಧುಮುಕುತ್ತಾರೆ. ಈ ಸಂದರ್ಭದಲ್ಲಿ ಅವರ ಮೇಲೆ ಮುಗಿಬಿದ್ದ ಮೀನಾ ಸಮುದಾಯದ ಯುವಕರು ಅವರಿಗೆ ಚೆನ್ನಾಗಿ ಥಳಿಸಿ ಕೊಂದ ನಂತರ ಜೀಪಿನೊಳಗೆ ಹಾಕಿ ಸುಟ್ಟು ಹಾಕುತ್ತಾರೆ. ಮಹೇಂದ್ರ ಸಿಂಗ್ ಈ ಸಂದರ್ಭದಲ್ಲಿ ಘಟನಾ ಸ್ಥಳಕ್ಕೆ ಆಗಮಿಸುತ್ತಾರಾದರೂ ಇತರ ಪೊಲೀಸರೊಂದಿಗೆ ಸೇರಿ ಮುಹಮ್ಮದ್‌ರನ್ನು ಉಳಿಸುವ ಪ್ರಯತ್ನ ಮಾಡಲಿಲ್ಲ. ಟಿಯರ್ ಗ್ಯಾಸ್ ಶೆಲ್‌ಗಳನ್ನು ಸಿಡಿಸುವ ಮೂಲಕ ಅವರಿಗೆ ಗುಂಪನ್ನು ಚದುರಿಸಬಹುದಿತ್ತು. ಆದರೆ ಅವರು ಸ್ಥಳದಿಂದ ಪಲಾಯನಗೈದರು.

ಅದೇ ವೇಳೆ, ಸೊರ್ವಾಲ್‌ನಲ್ಲಿ ನಡೆದಿರುವುದೇನು ಎಂದು ಕೇಳುವುದಕ್ಕಾಗಿ ಕರ್ವೋಧ ಎಂಬ ಮುಸ್ಲಿಮ್ ಮೊಹಲ್ಲಾದಲ್ಲಿ ತನ್ನ ಜೀಪನ್ನು ತಡೆದ ಮುಸ್ಲಿಮ್ ಯುವಕರ ಮೇಲೆ ಮಹೇಂದ್ರ ಗುಂಡು ಹಾರಿಸಿ ಮೂವರು ಯುವಕರನ್ನು ಗಾಯಗೊಳಿಸಿದ್ದರು.

ಜಿಲ್ಲೆಯ ಮುಸ್ಲಿಮ್ ಸಂಘಟನೆಗಳು ಮತ್ತು ಪ್ರಗತಿಪರ ಸಂಘಟನೆಗಳು ಪೂಲ್ ಮುಹಮ್ಮದ್‌ರ ಬಗ್ಗೆ ಹತ್ಯೆಯ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದವು. ಮಹೀಂದರ್ ಸಿಂಗ್, ಸುಮೇರ್ ಸಿಂಗ್ ಮತ್ತು ಇತರ ಅಧಿಕಾರಿಗಳು ಮೀನಾ ಸಮುದಾಯದೊಂದಿಗೆ ಕೈಜೋಡಿಸಿ ಪೂಲ್ ಮುಹಮ್ಮದ್‌ರನ್ನು ಹತ್ಯೆಗೈಯ್ಯುವ ಸಂಚು ನಡೆಸಿದ್ದರು ಎಂದು ಸಂಘಟನೆಗಳು ಮತ್ತು ಸ್ಥಳೀಯರು ಆರೋಪಿಸಿದ್ದಾರೆ.

ಘಟನೆಯ ಬಗ್ಗೆ ತನಿಖೆ ನಡೆಸುವಂತೆ ಡಿವಿಶನಲ್ ಕಮಿಶನರ್‌ರಿಗೆ ಹೇಳಲಾಗಿತ್ತು. ಅವರು ತನ್ನ ವರದಿಯಲ್ಲಿ ಘಟನೆಗೆ ಜಿಲ್ಲಾಧಿಕಾರಿ, ಎಸ್‌ಡಿಒ ಮತ್ತು ಎಡಿಎಂರನ್ನು ಹೊಣೆಯಾಗಿಸಿದ್ದಾರೆ. ಸಿಐಓ ಮಹೀಂದ್ರ ಸಿಂಗ್ ಘಟನಾ ಸ್ಥಳದಿಂದ ಪರಾರಿಯಾಗದಿದ್ದರೆ ಪೂಲ್ ಮುಹಮ್ಮದ್ ಹತ್ಯೆಗಯ್ಯಲ್ಪಡುತ್ತಿರಲಿಲ್ಲ ಎಂದು ಅವರು ವರದಿಯಲ್ಲಿ ತಿಳಿಸಿದ್ದಾರೆ.

ಪೂಲ್ ಮುಹಮ್ಮದ್‌ರನ್ನು ಜೀವಂತವಾಗಿಯ ಸುಟ್ಟು ಕೊಲ್ಲಲಾಯಿತೆಂದು ಪೊಲೀಸರು ಹೇಳುತ್ತಿದ್ದರೂ ಅವರನ್ನು ಮೊದಲು ಲಾಠಿಯಿಂದ ಬಡಿದು ಕೊಂದು ನಂತರ ಜೀಪ್‌ನಲ್ಲಿ ಹಾಕಿ ಸುಡಲಾಗಿದೆ ಎನ್ನುವುದಕ್ಕೆ ಆಧಾರವಾಗಿ ವೀಡಿಯೊ ಕ್ಲಿಪ್ಪುಗಳು ತಮ್ಮೊಂದಿಗಿವೆ. ಮುಹಮ್ಮದ್‌ರ ಮೇಲೆ ಲಾಠಿಯೇಟಿನ ಗಾಯವಿರುವುದು ಆ ಕ್ಲಿಪ್‌ನಲ್ಲಿವೆ. ಅದನ್ನು ಸಿಬಿಐಗೆ ಮಾತ್ರ ನೀಡಲಾಗುವುದು ಎಂದು ಅಲ್ಲಿನ ಸ್ಥಳೀಯ ಎಸ್‌ಡಿಪಿಐ ನಾಯಕರು ಹೇಳಿದ್ದಾರೆ.

ಸ್ಥಳೀಯರ ಪ್ರಕಾರ ಮೀನಾ ಸಮುದಾಯದ 37 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದರೂ, ಇದುವರೆಗೆ 7 ಮಂದಿಯನ್ನು ಮಾತ್ರ ಬಂಧಿಸಲಾಗಿದೆ. ಪ್ರಧಾನ ಆರೋಪಿಗಳಾದ ದಿನೇಶ್ ಮೀನಾ ಮತ್ತು ರಣಜೀತ್ ಮೀನಾ ಎಂಬ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಘಟನೆಯನ್ನು ಸಿಬಿಐ ತನಿಖೆಗೆ ಒಪ್ಪಿಸಿದರೆ ಪೂಲ್ ಮುಹಮ್ಮದ್‌ರ ಸಾವಿನ ಹಿಂದಿನ ರಹಸ್ಯವು ಹೊರಬೀಳಬಹುದಾಗಿದೆ. ಇದರ ಹಿಂದಿನ ಸಂಚುಕೋರರಿಗೆ ಶಿಕ್ಷೆಯಾಗಬಹುದು.

■ ಅರಬಿ ಮೂಲ: ಸುವರುನ್ ಮಿನ್ ಹಯಾತಿಸ್ಸಹಾಬಾ
ಮಳಯಾಳಂ: ಡಾ.ಎ.ಐ.ವಿಲಾಯತುಲ್ಲಾ
ಕನ್ನಡಕ್ಕೆ: ಮುರ್ಷಿದ್

# ಅಬ್ದುಲ್ಲಾಹಿಬ್‌ನ್ ಹುದಾಫ(ರ)

*''ಅಬ್ದುಲ್ಲಾಹಿಬ್‌ನ್ ಹುದಾಫರ ಶಿರವನ್ನು ಚುಂಬಿಸಲು ಪ್ರತಿಯೋರ್ವ ಮುಸ್ಲಿಮನೂ ಬಾಧ್ಯಸ್ಥನಾಗಿರುವನು. ಆ ಬಾಧ್ಯತೆಯನ್ನು ನೆರವೇರಿಸುವ ಮೊದಲ ವ್ಯಕ್ತಿ ನಾನಾಗಿರಲಿ''-ಉಮರುಬ್‌ನುಲ್ ಖತ್ತಾಬ್(ರ)*

ಸಹಾಬಿಗಳ ಮಧ್ಯೆ ಅಬ್ದುಲ್ಲಾಹಿಬ್‌ನ್ ಹುದಾಫ ಎಂಬ ಹೆಸರಿನಲ್ಲಿ ವಿಖ್ಯಾತನಾದ ವ್ಯಕ್ತಿಯೇ ಈ ಕಥೆಯ ನಾಯಕ. ಈ ರೀತಿ ಅರಬಿಗಳ ಮಧ್ಯೆ ವಿಶೇಷವಾಗಿ ಪರಾಮರ್ಶಿಸದೇ, ಗಮನಿಸದೇ ಹೋದವರು ಸಾವಿರಾರು ಮಂದಿಯಿರಬಹುದು. ಆದರೆ ಅವರೆಲ್ಲರ ಪೈಕಿ ಅಬ್ದುಲ್ಲಾಹಿಬ್‌ನ್ ಹುದಾಫರನ್ನು ಬೇರ್ಪಡಿಸಿ ನಿಲ್ಲಿಸಿದ್ದು ಇಸ್ಲಾಮಿನಲ್ಲಿ ಅವರು ವಹಿಸಿದ ಗಣನೀಯ ಪಾತ್ರವಾಗಿತ್ತು. ಪ್ರಪಂಚದ ಎರಡು ವಿಖ್ಯಾತರನ್ನು ನೋಡಲು ಅವರಿಗೆ ಇಸ್ಲಾಂ ಅವಕಾಶವನ್ನು ಮಾಡಿಕೊಟ್ಟಿತು. ಪರ್ಷಿಯನ್ ಚಕ್ರವರ್ತಿ ಕಿಸ್ರಾ(ಖುಸ್ರೋ) ರೋಂ ಚಕ್ರವರ್ತಿ ಖೈಸರ್(ಸೀಝುರ್) ಇವರೇ ಆ ಎರಡು ಶಕ್ತಿಗಳು.

ಪ್ರಸ್ತುತ ಚಕ್ರವರ್ತಿದ್ವಯರಿಗೆ ಸಂಬಂಧಪಟ್ಟಂತೆ ಕಾಲಕ್ಕೆ ಮರೆಯಲಾಗದ, ಇತಿಹಾಸಕ್ಕೆ ಮರೆಮಾಚಲಾಗದ ಕೆಲವು ಅನುಭವಗಳ ವಕ್ತಾರರಾಗಿದ್ದಾರೆ ಅಬ್ದುಲ್ಲಾಹಿಬ್‌ನ್ ಹುದಾಫ(ರ)

ಹಿಜ್ರ 6ನೇ ವರ್ಷದಲ್ಲಿ ಕಿಸ್ರಾಗೆ ಸಂಬಂಧಿಸಿದ ಪ್ರಸ್ತುತ ಐತಿಹಾಸಿಕ ಘಟನೆ ನಡೆದಿತ್ತು. ಸುತ್ತಮುತ್ತಲಿನ ದೇಶಗಳಲ್ಲಿ ಆಡಳಿತ ನಡೆಸುತ್ತಿದ್ದ ಅರಬೇತರ ರಾಜರನ್ನು ಇಸ್ಲಾಮ್‌ಗೆ ಆಹ್ವಾನಿಸುವ ಪತ್ರಗಳೊಂದಿಗೆ ತನ್ನ ಅನುಚರರಲ್ಲಿ ಕೆಲವರನ್ನು ಪ್ರವಾದಿ(ಸ)ಯವರು ದೂತರಂತೆ ಕಳಿಸಿಕೊಡಲು ತೀರ್ಮಾನಿಸಿದ ಸಂದರ್ಭ. ಈ ರೀತಿಯ ದೌತ್ಯವನ್ನು ನಿರ್ವಹಿಸುವ ವಿಚಾರವನ್ನು ಪ್ರವಾದಿ(ಸ) ಸರಿಯಾದ ರೀತಿಯಲ್ಲಿ ಆಲೋಚಿಸಿದ್ದರು. ತಮ್ಮೊಂದಿಗೆ ಯಾವುದೇ ರೀತಿಯ ಕರಾರು, ಸಂಬಂಧಗಳಿಲ್ಲದ ದೇಶಗಳಿಗೆ ಈ ದೂತರು ಹೋಗಬೇಕಿತ್ತು. ಅಲ್ಲಿನ ಭಾಷೆ, ಸಂಸ್ಕೃತಿ ಹೇಗೆಂದು ಅವರಿಗೆ ತಿಳಿದಿರಲಿಲ್ಲ. ಅಲ್ಲಿನ ರಾಜರುಗಳ ಅಧಿಕಾರ ವ್ಯಾಪ್ತಿ, ಸ್ಥಾನಮಾನಗಳು ಏನೆಂದೂ ಅವರಿಗೆ ಅಂದಾಜು ಮಾಡಲು ಸಾಧ್ಯವಾಗಿರಲಿಲ್ಲ.

ಮಾತ್ರವಲ್ಲ, ಅವರು ಹೋದದ್ದು ಆ ರಾಜರೊಂದಿಗೆ ಸ್ವಂತ ಧರ್ಮವನ್ನು ಕೈ ಬಿಡಲು ಮತ್ತು ನಿನ್ನೆಯ ವರೆಗೆ ತಮ್ಮ ಕೈವಶವಿದ್ದ ಅರಬ್ ಸಮಾಜದಲ್ಲಿ ಬಂದ ಹೊಸ ಪ್ರವಾದಿಯ ಧರ್ಮದಲ್ಲಿ ಪ್ರವೇಶಿಸಬೇಕೆಂದು ಆಗ್ರಹಿಸಲು.

ಅದು ಬಹಳ ಅಪಾಯಕಾರಿ ಪ್ರಯಾಣವಾಗಿತ್ತು. ಪ್ರಸ್ತುತ ಪ್ರಯಾಣದಲ್ಲಿರುವವರು ವಾಪಸಾಗುತ್ತಾರೆಂಬ ಭರವಸೆಯೇನೂ ಇಲ್ಲ. ದೌತ್ಯವನ್ನು ನಿರ್ವಹಿಸಿ ಯಾರಾದರೂ ತಿರುಗಿ ಬಂದರೆ ಅವರಿಗೆ ಎರಡನೇ ಜನ್ಮ ಸಿಕ್ಕಿದಂತೆಯೇ ಸರಿ.

ಅದಕ್ಕಾಗಿ ಪ್ರವಾದಿ (ಸ) ಅನುಚರರನ್ನು ಕರೆದು ವಿಶೇಷ ಸಭೆ ನಡೆಸಿ ಅವರನ್ನುದ್ದೇಶಿಸಿ ಮಾತನಾಡಿದರು. ಅಲ್ಲಾಹನಿಗೆ ಸ್ತುತಿ ಕೀರ್ತನೆಗಳನ್ನು ನಡೆಸಿದ ನಂತರ ಪ್ರವಾದಿ(ಸ) ಹೇಳಿದರು: ''ನಿಮ್ಮಲ್ಲಿ ಕೆಲವರನ್ನು ನಾನು ಅರಬೇತರ ರಾಜರ ಬಳಿಗೆ ದೂತರಂತೆ ಕಳುಹಿಸುವೆನು. ಮರ್ಯಮರ ಪುತ್ರ ಈಸಾರೊಂದಿಗೆ ಇಸ್ರಾಈಲ್ ಸಂತತಿಗಳು ಭಿನ್ನಮತ ತೋರಿಸಿದಂತೆ ಈ ವಿಚಾರದಲ್ಲಿ ನನ್ನೊಂದಿಗೆ ನೀವು ಭಿನ್ನಮತ ತೋರಬಾರದು.''

ಅನುಚರರು ಒಕ್ಕೊರಲಿನಿಂದ ಹೀಗೆಂದರು: ''ಓ ಅಲ್ಲಾಹನ ದೂತರೇ, ತಾವುಗಳು ಆದೇಶಿಸುವ ಯಾವುದೇ ದೌತ್ಯವನ್ನು ನಿರ್ವಹಿಸಲು ನಾವು ತಯಾರಾಗಿದ್ದೇವೆ. ಆದುದರಿಂದ ತಾವು ಬಯಸಿದ ದೌತ್ಯಕ್ಕಾಗಿ ನಮ್ಮನ್ನು ನಿಯೋಗಿಸಿರಿ.''

ಈ ರೀತಿ ಅರಬೇತರ ರಾಜರಿಗೆ ತನ್ನ ಪತ್ರಗಳನ್ನು ಕಳುಹಿಸಲು ಆ ಗುಂಪಿನಿಂದ ಆರು ಜನರನ್ನು ಪ್ರವಾದಿ(ಸ) ಆರಿಸಿ

ಕಳುಹಿಸಿದರು. ಅಬ್ದುಲ್ಲಾಹಿಬ್‌ನ್ ಹುದಾಫ ಅವರಲ್ಲೋರ್ವರು. ಪರ್ಷಿಯಾ ಸಾಮ್ರಾಜ್ಯದ ಕಿಸ್ರಾಗೆ ಪತ್ರವನ್ನು ರವಾನಿಸಲು ಪ್ರವಾದಿ (ಸ) ಹುದಾಫ(ರ)ರನ್ನು ಆರಿಸಿದರು.

ಅಬ್ದುಲ್ಲಾಹಿಬ್‌ನ್ ಹುದಾಫ ಪ್ರಯಾಣಕ್ಕಾಗಿ ಒಂಟೆಯನ್ನು ತಯಾರಿ ಮಾಡಿದರು. ಪತ್ನಿ ಮಕ್ಕಳೊಂದಿಗೆ ವಿದಾಯ ಹೇಳಿ ಉದ್ದೇಶಿತ ಜಾಗಕ್ಕೆ ಪ್ರಯಾಣ ಹೊರಟರು. ಗುಡ್ಡ, ಬೆಟ್ಟ, ಕಣಿವೆಗಳನ್ನು ದಾಟಿ ಅವರು ಪ್ರಯಾಣ ಮುಂದುವರಿಸಿದರು. ಅವರು ಒಂಟಿಯಾಗಿ ಪ್ರಯಾಣ ಮಾಡುವ ಸಂದರ್ಭ ಅಲ್ಲಾಹನಲ್ಲದೇ ಬೇರೆ ಯಾರೂ ಅವರೊಂದಿಗೆ ಜೊತೆಗಿರಲಿಲ್ಲ. ಅದೆಷ್ಟೋ ದಿನಗಳ ಪ್ರಯಾಣದ ನಂತರ ಪರ್ಷಿಯನ್ನರ ಪ್ರದೇಶಕ್ಕೆ ಅವರು ತಲುಪಿದರು. ನಗರ ಪ್ರವೇಶಕ್ಕೆ ಪರ್ಷಿಯಾದ ಚಕ್ರವರ್ತಿಯ ಅಧಿಕಾರಿಗಳೊಂದಿಗೆ ಅನುಮತಿಯನ್ನು ಕೇಳಿದರು. ಚಕ್ರವರ್ತಿಗೆ ದೌತ್ಯವನ್ನು ತಲುಪಿಸುವ ರಾಜತಾಂತ್ರಿಕನಾಗಿ ನಾನು ಬಂದಿರುವೆನೆಂದು ಅಧಿಕಾರಿಗಳಿಗೆ ಹೇಳಿದರು.

ಸುದ್ದಿಯನ್ನು ತಿಳಿದ ಕಿಸ್ರಾ ಚಕ್ರವರ್ತಿಯು ತನ್ನ ಅರಮನೆಯನ್ನು ಅಲಂಕರಿಸಲು ಅಜ್ಞಾಪಿಸಿದನು. ಪರ್ಷಿಯಾದ ಪ್ರತಿಷ್ಠಿತ ವ್ಯಕ್ತಿಗಳನ್ನು ತನ್ನ ಸಭೆಗೆ ಆಹ್ವಾನಿಸಿದನು. ಇವೆಲ್ಲದರ ನಂತರವೇ ಅಬ್ದುಲ್ಲಾಹಿಬ್‌ನ್ ಹುದಾಫರನ್ನು ಅರಮನೆಗೆ ಬರಮಾಡಿಕೊಳ್ಳಲಾಯಿತು.

ಸರ್ವ ರೀತಿಯ ಸಜ್ಜೀಕರಣದಿಂದ ಗಂಭೀರಗೊಂಡ ಸಭೆಗೆ ಹಳೆಯ ಕಾಲದ ವೇಷಭೂಷಣದೊಂದಿಗೆ ಗ್ರಾಮೀಣ ಅರಬಿಗಳ ನಿಷ್ಕಳಂಕ ಮತ್ತು ಸರಳ ರೀತಿಯನ್ನು ಮೈಗೂಡಿಸಿಕೊಂಡು ಅಬ್ದುಲ್ಲಾಹಿಬ್‌ನ್ ಹುದಾಫ(ರ) ಪ್ರವೇಶಿಸುತ್ತಾರೆ.

ವಸ್ತ್ರ ಸಂಹಿತೆ ಮತ್ತು ನಡೆನುಡಿಗಳು ಯಾವ ರೀತಿಯಲ್ಲಿದ್ದರು ಕೂಡ ಮುಸ್ಲಿಮ್ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುವ ಮುಖಭಾವದೊಂದಿಗೆ ದೃಢತೆಯಿಂದ ಹುದಾಫ(ರ) ಅಲ್ಲಿಗೆ ಆಗಮಿಸಿದರು. ಸತ್ಯಧರ್ಮವನ್ನು ಸ್ವೀಕರಿಸಿದ ಫಲವಾಗಿ ಆತ್ಮಾಭಿಮಾನದಿಂದ ತುಂಬಿ ತುಳುಕುತ್ತಿತ್ತು ಅವರ ಮನಸ್ಸು.

ಹುದಾಫ(ರ)ರನ್ನು ಕಂಡೊಡನೆ ಅವರ ಕೈಯಲ್ಲಿರುವ ಪ್ರವಾದಿ(ಸ)ರವರ ಪತ್ರವನ್ನು ಪಡೆದುಕೊಳ್ಳಲು ಕಿಸ್ರಾ ಚಕ್ರವರ್ತಿ ತನ್ನ ಸೇವಕರಿಗೆ ಸಂಜ್ಞೆ ಮಾಡಿದನು. ''ಅದು ಸರಿಯಾಗದು. ಈ ಪತ್ರ ತಮ್ಮ ಕೈಯಲ್ಲಿ ನೇರವಾಗಿ ತಲುಪಿಸಲು ಪ್ರವಾದಿ(ಸ)ರವರು ನನ್ನೊಂದಿಗೆ ಅಜ್ಞಾಪಿಸಿರುವರು. ಆದುದರಿಂದ ಅಲ್ಲಾಹನ ಪ್ರವಾದಿ(ಸ)ಯ ಆಜ್ಞೆಗೆ ವಿರುದ್ಧವಾಗಿ ನಾನು ಇನ್ನೊಬ್ಬನ ಕೈಯಲ್ಲಿ ಅದನ್ನು ನೀಡಲಾರೆನು.'' ಹುದಾಫ(ರ) ಖಡಾಖಂಡಿತವಾಗಿ ಹೇಳಿದರು.

ಇದನ್ನು ಕೇಳಿದ ಕಿಸ್ರಾ ತನ್ನ ಸೇವಕರೊಂದಿಗೆ ಹೇಳಿದನು: ''ಆತನನ್ನು ಬಿಟ್ಟು ಬಿಡಿ. ಆತನು ನನ್ನ ಬಳಿಗೆ ಬರಲಿ''

*ಅಬ್ದುಲ್ಲಾಹಿಬ್‌ನ್ ಹುದಾಫ ದರ್ಬಾರಿನಿಂದ ಹೊರ ಬಂದರು. ತನಗೇನು ಕಾದಿದೆ ಎಂದು ಅವರಿಗೆ ತಿಳಿದಿರಲಿಲ್ಲ. ಈ ಮಂದಿ ಇನ್ನು ನನ್ನನ್ನು ಕೊಲ್ಲುತ್ತಾರೆಯೇ ಅಥವಾ ಸುಮ್ಮನೆ ಬಿಡುತ್ತಾರೆಯೇ? ಒಂದೂ ತಿಳಿಯುತ್ತಿಲ್ಲ.*

*ಆದರೂ ಅವರು ಮನದಲ್ಲಿ ಹೀಗಂದುಕೊಂಡರು. ''ಅಲ್ಲಾಹನ ಮೇಲಾಣೆ, ಇನ್ನು ಏನು ನಡೆದರೂ ಯಾರಿಗೇನು? ಅಲ್ಲಾಹನ ದೂತರ ಓಲೆಯನ್ನು ನಿಶ್ಚಿತ ವ್ಯಕ್ತಿಗೆ ತಲುಪಿಸಿದೊಡನೆ ನನ್ನ ಕರ್ತವ್ಯ ಮುಗಿಯಿತು.'' ಒಂದಿನಿತೂ ವಿಳಂಬಿಸದೇ ಅವರು ತನ್ನ ಒಂಟೆಯ ಬೆನ್ನೇರಿ ಅಲ್ಲಿಂದ ತೆರಳಿದರು.*

ಹುದಾಫ(ರ) ಪ್ರವಾದಿ(ಸ)ಯ ಪತ್ರವನ್ನು ನೇರವಾಗಿ ಕಿಸ್ರಾನ ಕೈಯಲ್ಲಿ ಕೊಟ್ಟು ಬಿಟ್ಟರು. ಇರಾಕಿನ ಹೀರಾ ಪ್ರದೇಶದ ನಿವಾಸಿಯಾದ ಓರ್ವ ಅರಬೀ ಸೇವಕನನ್ನು ಕರೆದು ಪತ್ರವನ್ನು ಒಡೆದು ತನ್ನ ಮುಂದೆ ಜೋರಾಗಿ ಓದುವಂತೆ ಕಿಸ್ರಾ ಆಜ್ಞಾಪಿಸಿದನು. ಆತ ಪತ್ರವನ್ನು ಓದತೊಡಗಿದನು.

''ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ, ಅಲ್ಲಾಹನ ದೂತನಾದ ಮುಹಮ್ಮದ್ ಪರ್ಷಿಯಾದ ಮಹಾ ಚಕ್ರವರ್ತಿ ಕಿಸ್ರಾಗೆ ರವಾನಿಸುತ್ತಿರುವ ಓಲೆ. ಸನ್ಮಾರ್ಗವನ್ನು ಅನುಸರಿಸಲು ಸನ್ನದ್ಧರಾದವರೆಲ್ಲರಿಗೂ ಶಾಂತಿನೆಮ್ಮದಿಯುಂಟಾಗಲಿ...

ಪ್ರವಾದಿ(ಸ)ರವರ ಸಂದೇಶದಲ್ಲಿ ಈ ರೀತಿಯಲ್ಲಿ ತನ್ನ ಹೆಸರನ್ನು ಪರಾಮರ್ಶಿಸಿ ಓದಿದ್ದನ್ನು ಕೇಳಿದಾಕ್ಷಣ ಕಿಸ್ರಾ ಕೆಂಡಾಮಂಡಲನಾದನು. ಆತನ ಮುಖವು ಕೋಪದಿಂದ ಕುದಿಯತೊಡಗಿತು. ಕಂಠನಾಡಿಗಳು ಬಿಗಿಯಾಯಿತು. ಪತ್ರದಲ್ಲಿ ಮೊದಲು ಪ್ರವಾದಿ(ಸ)ರವರು ಹೆಸರು ಪರಾಮರ್ಶಿಸಿದ್ದೇ ಆತನ ಸಿಟ್ಟಿಗೆ ಕಾರಣ. ಆತ ಸೇವಕನ ಕೈಯಿಂದ ಓಲೆಯನ್ನು ತೆಗೆದುಕೊಂಡನು. ಅದರಲ್ಲಿರುವ ಸಂದೇಶ ಏನೆಂಬುದನ್ನು ಓದದೆ ಅದನ್ನು ಹರಿದುಬಿಟ್ಟನು ಮತ್ತು ಈ ರೀತಿ ಬೊಬ್ಬಿರಿಯ ತೊಡಗಿದನು.

ಆತ ನನ್ನ ಗುಲಾಮನಾಗಿದ್ದೂ ಕೂಡ ಈ ರೀತಿ ಬರೆಯುವುದೇ?

ನಂತರ ಅಬ್ದುಲ್ಲಾಹಿಬ್‌ನ್ ಹುದಾಫ(ರ)ರನ್ನು ಆ ಸಭೆಯಿಂದ ಹೊರ ತಳ್ಳಲು ಕಿಸ್ರಾ ಆಜ್ಞಾಪಿಸಿದನು. ದ್ವಾರಪಾಲಕ ಅವರನ್ನು ಹೊರ ಹಾಕಿದನು.

ಅಬ್ದುಲ್ಲಾಹಿಬ್‌ನ್ ಹುದಾಫ ದರ್ಬಾರಿನಿಂದ ಹೊರ ಬಂದರು. ತನಗೇನು ಕಾದಿದೆ ಎಂದು ಅವರಿಗೆ ತಿಳಿದಿರಲಿಲ್ಲ. ಈ

ಮಂದಿ ಇನ್ನು ನನ್ನನ್ನು ಕೊಲ್ಲುತ್ತಾರೆಯೇ ಅಥವಾ ಸುಮ್ಮನೆ ಬಿಡುತ್ತಾರೆಯೇ? ಒಂದೂ ತಿಳಿಯುತ್ತಿಲ್ಲ.

ಅದರೂ ಅವರು ಮನದಲ್ಲಿ ಹೀಗಂದುಕೊಂಡರು. ''ಅಲ್ಲಾಹನ ಮೇಲಾಣೆ, ಇನ್ನು ಏನು ನಡೆದರೂ ಯಾರಿಗೇನು? ಅಲ್ಲಾಹನ ದೂತರ ಓಲೆಯನ್ನು ನಿಶ್ಚಿತ ವ್ಯಕ್ತಿಗೆ ತಲುಪಿಸಿದೊಡನೆ ನನ್ನ ಕರ್ತವ್ಯ ಮುಗಿಯಿತು.'' ಒಂದಿನಿತೂ ವಿಳಂಬಿಸದೇ ಅವರು ತನ್ನ ಒಂಟೆಯ ಬೆನ್ನೇರಿ ಅಲ್ಲಿಂದ ತೆರಳಿದರು.

ಒಂದಿನಿತು ವೇಳೆಯ ನಂತರ ಕೋಪವು ಶಮನಗೊಂಡಾಗ ಅಬ್ದುಲ್ಲಾರನ್ನು ತನ್ನ ಮುಂದೆ ಹಾಜರುಪಡಿಸುವಂತೆ ಕಿಸ್ರಾ ಆಜ್ಞಾಪಿಸಿದನು. ಆದರೆ ಅರಮನೆ ಸಿಬ್ಬಂದಿಗಳು ಎಷ್ಟೇ ಹುಡುಕಾಡಿದರೂ ಅಬ್ದುಲ್ಲಾಹಿಬ್ನ್ ಹುದಾಫ(ರ)ರನ್ನು ಕಂಡು ಹುಡುಕಲು ಅವರಿಗೆ ಸಾಧ್ಯವಾಗಿರಲಿಲ್ಲ. ಅರೇಬಿಯನ್ ಉಪದ್ವೀಪದ ದಾರಿಯಲ್ಲಿ ಹುಡುಕಾಡಿ ಅನ್ವೇಷಿಸಿದಾಗ ಅವರು ಆ ದಾರಿಯಲ್ಲಿ ತುಂಬಾ ದೂರ ಕ್ರಮಿಸಿದ್ದಾರೆಂದು ಅವರಿಗೆ ತಿಳಿಯಿತು.

ಪರ್ಷಿಯಾದ ಅರಮನೆಯಿಂದ ಅದ್ಭುತ ರೀತಿಯಲ್ಲಿ ಪಾರಾಗಿ ಬಂದ ಅಬ್ದುಲ್ಲಾರವರು ಪ್ರವಾದಿ(ಸ)ರವರ ಮುಂದೆ ಬಂದು ತಲುಪಿದರು. ಕಿಸ್ರಾನ ರೀತಿ ನೀತಿಗಳು, ಪ್ರತಿಕ್ರಿಯೆ ಮತ್ತು ಓಲೆಯನ್ನು ಹರಿದು ಬಿಸಾಡಿದ್ದನ್ನೆಲ್ಲಾ ಅವರು ಪ್ರವಾದಿಯೊಂದಿಗೆ(ಸ) ಹೇಳಿದರು. ಅಬ್ದುಲ್ಲಾರವರ ವಿವರಣೆಯನ್ನು ಕೇಳಿದ ಪ್ರವಾದಿ(ಸ) ಇದಿಷ್ಟೇ ಹೇಳಿದರು:

''ಆತನ ರಾಜಾಧಿಕಾರವನ್ನು ಅಲ್ಲಾಹನು ಹರಿದು ಬಿಸಾಡಲಿ.''

★★★

ಆದರೆ ಕಿಸ್ರಾ ಯಮನ್ ಪ್ರದೇಶದಲ್ಲಿರುವ ತನ್ನ ಪ್ರತಿನಿಧಿಯಾಗಿ ಆಡಳಿತ ನಡೆಸುತ್ತಿದ್ದ ಬದಾನಿಗೆ ಈ ರೀತಿ ಪತ್ರ ಬರೆದನು:

''ಹಿಜಾಝ್‌ನಲ್ಲಿ ಪ್ರತ್ಯಕ್ಷಗೊಂಡ ಆ ಮನುಷ್ಯನ ಬಳಿ ತಾವು ಗಟ್ಟಿಮುಟ್ಟಾದ ಈರ್ವರನ್ನು ಕಳುಹಿಸಬೇಕು ಮತ್ತು ಆತನನ್ನು ಬಂಧಿಸಿ ನನ್ನ ಮುಂದೆ ಹಾಜರುಪಡಿಸಲು ಅವರಿಗೆ ಸಂದೇಶ ನೀಡಿರಿ.''

ಬದಾನ್ ತನ್ನಲ್ಲಿರುವ ಈರ್ವರನ್ನು ಈ ಕೆಲಸಕ್ಕಾಗಿ ನಿಯೋಗಿಸಿದರು. ಅವರೊಂದಿಗೆ ಪ್ರವಾದಿ(ಸ)ರವರಿಗೆ ಒಂದು ಪತ್ರವನ್ನು ಕಳುಹಿಸಿಕೊಟ್ಟರು. ಈ ಪತ್ರ ಕೈ ಸೇರಿದ ಕೂಡಲೇ ಸ್ವಲ್ಪವೂ ವಿಳಂಬಿಸದೇ ಕಿಸ್ರಾ ಚಕ್ರವರ್ತಿಯನ್ನು ನೋಡಲು ಅವರೊಂದಿಗೆ ಹೊರಡಬೇಕೆಂಬುದು ಪತ್ರದಲ್ಲಿರುವ ಒಕ್ಕಣೆಯಾಗಿತ್ತು.

ಪ್ರವಾದಿ (ಸ)ಯ ಕುರಿತು ಸಾಕಷ್ಟು ಅನ್ವೇಷಣೆ ನಡೆಸಿ ತಿಳಿದುಕೊಂಡು ಅವರ ಕುರಿತಾದ ಮಾಹಿತಿಯನ್ನು ಪರಮಾವಧಿ ಸಂಗ್ರಹಿಸಿ ತನಗೆ ಒದಗಿಸಬೇಕೆಂದು ಅವರೊಂದಿಗೆ ಆಜ್ಞಾಪಿಸಿದನು.

ಜಟ್ಟಿಗಳಾದ ಅವರೀರ್ವರೂ ಪ್ರವಾದಿ(ಸ)ಯನ್ನು ಗುರಿಯಾಗಿಟ್ಟುಕೊಂಡು ಪ್ರಯಾಣ ಬೆಳೆಸಿದರು. ತಾಯಿಫ್ ತಲುಪಿದೊಡನೆ ಅವರು ಕೆಲವು ಖುರೈಷಿ ವರ್ತಕರನ್ನು ಕಂಡರು. ಅವರೊಂದಿಗೆ ಪ್ರವಾದಿ(ಸ)ಯ ಕುರಿತು ಕೇಳಿದಾಗ ಅವರು ಹೇಳಿದರು: ''ಅವರು ಇರುವುದು ಯಸ್ರಿಬ್‌ನಲ್ಲಿ.''

ಆ ವರ್ತಕ ಸಂಘವು ಕ್ಷಿಪ್ರಗತಿಯಲ್ಲಿ ಮಕ್ಕಾದೆಡೆಗೆ ತೆರಳಿತು. ಅವರು ಅತೀವ ಸಂತೋಷದಲ್ಲಿದ್ದರು. ಇದೀಗ ಈ ಸಂತೋಷದ ಸುದ್ದಿಯನ್ನು ಮಕ್ಕಾದ ಖುರೈಷಿಗಳಿಗೆ ತಲುಪಿಸುವ ತರಾತುರಿಯಲ್ಲಿದ್ದಾರವರು.

''ಖುರೈಷಿಗಳ ಬಳಿಗೆ ತಲುಪಿದ ಅವರೆಂದರು: ''ಓ ಖುರೈಷಿ ಗೋತ್ರವೇ ನೀವು ಅತಿಯಾಗಿ ಸಂತಸಗೊಳ್ಳಿರಿ. ಏಕೆಂದರೆ ಕಿಸ್ರಾ ಚಕ್ರವರ್ತಿ ಮುಹಮ್ಮದರನ್ನು ಎದುರಿಸಲು ಏರ್ಪಾಡು ಮಾಡಿರುವರು. ಆತನಿಂದ ಇನ್ನು ಮುಂದೆ ಯಾವುದೇ ಸಮಸ್ಯೆ ನಿಮಗುಂಟಾಗದು.''

ಬದಾನನ ಆ ಎರಡೂ ಜಟ್ಟಿಗಳು ಇದೀಗ ಮದೀನಾವನ್ನು ಗುರಿಯಾಗಿಸಿಕೊಂಡು ಪ್ರಯಾಣ ಬೆಳೆಸಿದರು. ಮದೀನಾ ತಲುಪಿದ ಅವರೀರ್ವರೂ ಪ್ರವಾದಿ(ಸ)ಯನ್ನು ನೇರವಾಗಿ ಕಂಡು ಬದಾನ್ ನೀಡಿದ ಓಲೆಯನ್ನು ಕೊಟ್ಟು ಈ ರೀತಿ ಹೇಳಿದರು:

''ರಾಜಾಧಿರಾಜನಾದ ಕಿಸ್ರಾನ ನಿರ್ದೇಶನದಂತೆ ಬದಾನ್ ನಮ್ಮನ್ನು ತಮ್ಮೆಡೆಗೆ ಕಳುಹಿಸಿರುವನು. ತಮ್ಮನ್ನು ನಮ್ಮೊಂದಿಗೆ ಕೊಂಡೊಯ್ಯಲು ನಾವು ಬಂದಿರುವೆವು. ಆದುದರಿಂದ ತಾವುಗಳ ಅನುಸರಣೆಯಿಂದ ನಮ್ಮೊಂದಿಗೆ ಬರಲು ಸನ್ನದ್ಧರಾದರೆ ತಮಗೆ ಹಿತವಾಗುವ ರೀತಿಯಲ್ಲಿ ನಾವು ಕಿಸ್ರಾ ಚಕ್ರವರ್ತಿಯೊಂದಿಗೆ ಮಾತನಾಡುವೆವು. ಅವರ ಉಪಟಳದಿಂದ ತಮ್ಮನ್ನು ರಕ್ಷಿಸಲು ಪ್ರಯತ್ನಿಸುವೆವು ಅಥವಾ ತಾವು ಇದನ್ನು ತಳ್ಳಿ ಹಾಕಿದರೆ ಕಿಸ್ರಾನ ಶಕ್ತಿ ಸಾಮರ್ಥ್ಯ ಕ್ರೋಧದ ಬಗ್ಗೆ ತಮಗೆ ಚೆನ್ನಾಗಿ ತಿಳಿದಿದೆ ತಾನೆ? ಆತನು ತಮ್ಮನ್ನೂ ತಮ್ಮ ಜನರನ್ನೂ ಸಂಪೂರ್ಣವಾಗಿ ನಾಶಪಡಿಸಲೂಬಹುದು.

ಇದನ್ನು ಕೇಳಿದ ಪ್ರವಾದಿ(ಸ) ಮುಗುಳ್ನಗುತ್ತಾ ಹೀಗೆಂದರು: ''ನೀವು ಈರ್ವರೂ ಒಂದು ದಿನದ ಮಟ್ಟಿಗೆ ನಿಮ್ಮ ಒಂಟೆಯ ಬಳಿಗೆ ಮರಳಿರಿ. ನಾಳೆ ಪುನಃ ನನ್ನ ಬಳಿಗೆ ವಾಪಸ್ಸು ಬನ್ನಿ.''

ಮರುದಿನ ಅವರೀರ್ವರೂ ಪ್ರವಾದಿ(ಸ)ರವರ ಬಳಿಗೆ ಮರಳಿದರು. ''ಕಿಸ್ರಾ ಚಕ್ರವರ್ತಿಯನ್ನು ಸಂದರ್ಶಿಸಲು ನಮ್ಮೊಂದಿಗೆ ಹೊರಡಲು ತಾವು ತಯಾರಾದಿರಾ?''

ಆ ವೇಳೆ ಪ್ರವಾದಿ(ಸ) ಹೇಳಿದರು: ''ಇಂದಿನಿಂದ ನೀವು

***ಉಮರ್(ರ)ರವರ ಆಡಳಿತಾವಧಿಯ ಹಿಜ್ರಾ19ನೇ ವರ್ಷದಲ್ಲಿ ರೋಮ್ ಸಾಮ್ರಾಜ್ಯದೊಂದಿಗೆ ಯುದ್ಧ ಹೂಡಲು ಖಲೀಫಾ ಉಮರ್(ರ)ರವರು ಸೈನ್ಯವೊಂದನ್ನು ಕಳುಹಿಸಿದರು. ಅಬ್ದುಲ್ಲಾಹಿಬ್‌ನು ಹುದಾಫ ಅದರಲ್ಲಿದ್ದರು. ಮುಸ್ಲಿಮರ ಆತ್ಮ ಸಮರ್ಪಣೆ, ನಿಷ್ಕಳಂಕ ವಿಶ್ವಾಸ ದೃಢತೆ, ಅಲ್ಲಾಹ್-ರಸೂಲರ ಮಾರ್ಗದಲ್ಲಿ ಜೀವವನ್ನು ಲೆಕ್ಕಿಸದೆ ಹೋರಾಡಲು ತಯಾರಾದ ತುಂಬಾ ಕತೆಗಳು ಈತನ್ಮಧ್ಯೆ ಸೀಝರನ ಕಿವಿಗೆ ತಲುಪಿದ್ದವು.***

ಈರ್ವರೂ ಎಂದಿಗೂ ಕಿಸ್ರಾ ಚಕ್ರವರ್ತಿಯನ್ನು ನೋಡಲಾರಿರಿ. ಕಾರಣ ಅಲ್ಲಾಹನು ಆತನ ಜೀವವನ್ನು ಹಿಡಿದಿರುವನು. ಆತನ ಮಗ ಶೀರವೈಹಿ ಈ ತಿಂಗಳ ಒಂದು ರಾತ್ರಿಯಲ್ಲಿ ಕಿಸ್ರಾನನ್ನು ಎದುರಿಸಿ ಕೊಂದು ಅವನ ಅಧಿಕಾರವನ್ನು ಕೈವಶಪಡಿಸಿಕೊಂಡಿರುವನು.''

ಪ್ರವಾದಿ(ಸ)ರವರ ಮಾತನ್ನು ಕೇಳಿದ ಆ ಎರಡು ಜಟ್ಟಿಗಳು ಪ್ರವಾದಿ (ಸ)ಯ ಮುಖವನ್ನು ದುರುಗುಟ್ಟಿ ನೋಡುತ್ತಿದ್ದರು. ಅವರ ಮುಖದಲ್ಲಿ ಅಪನಂಬಿಕೆ ಮತ್ತು ಆಶ್ಚರ್ಯ ಗೋಚರಿಸುತ್ತಿತ್ತು.

ಅವರು ಹೇಳಿದರು: ''ತಾವುಗಳು ಹೇಳಿದ್ದೆಲ್ಲವೂ ನಿಜವೆಂದಾದರೆ ಅದನ್ನು ಬರೆದು ಬದಾನಿಗೆ ಕೊಡಲು ತಯಾರಿದ್ದೀರಾ?''

ಪ್ರವಾದಿ(ಸ) ಹೇಳಿದರು: ''ಹೌದು. ಮಾತ್ರವಲ್ಲ ಬದಾನಿಯೊಂದಿಗೆ ನೀವು ಈ ಒಂದು ವಿಚಾರವನ್ನೂ ತಿಳಿಸುವಿರಂತೆ. ಖಂಡಿತವಾಗಿಯೂ ನನ್ನ ಈ ಧರ್ಮವು ಕಿಸ್ರಾ ಚಕ್ರವರ್ತಿಯ ಸಾಮ್ರಾಜ್ಯದ ಅಧಿಕಾರ ವ್ಯಾಪ್ತಿಯಿರುವ ಕಡೆಯಲ್ಲೆಲ್ಲಾ ತಲುಪುವುದು. ತಾವು ಈ ಧರ್ಮವನ್ನು ಒಪ್ಪಿ ಮುಸ್ಲಿಮ್ ಆದರೆ ತಮ್ಮ ಕೈ ಕೆಳಗಿರುವ ಪ್ರದೇಶದ ಅಧಿಕಾರವನ್ನು ತಮಗೆ ಬಿಟ್ಟುಕೊಡುವೆನು. ತಮ್ಮ ಜನತೆಗೆ ತಮ್ಮನ್ನು ಅಧಿಕಾರಿಯನ್ನಾಗಿ ಮಾಡಲಾಗುವುದು.

★★★

ಇಬ್ಬರೂ ಪ್ರವಾದಿ(ಸ)ರವರ ಬಳಿಯಿಂದ ವಾಪಸ್ಸು ಮರಳಿದರು. ಬದಾನನ ಬಳಿಗೆ ತಲುಪಿದ ಅವರು ಸಮಾಚಾರವನ್ನೆಲ್ಲಾ ತಿಳಿಸಿದರು. ಬದಾನ್ ಹೇಳಿದನು: ''ಮುಹಮ್ಮದ್ ಹೇಳಿದ ವಿಚಾರಗಳು ನಿಜವೆಂದಾದರೆ ಅವರು ಪ್ರವಾದಿಯೇ ಇರಬೇಕು ಖಂಡಿತಾ. ಇನ್ನು ಅವರು ಹೇಳಿದ ವಿಚಾರಗಳ್ಯಾವುದೂ ಸತ್ಯವಲ್ಲದಿದ್ದರೆ ಅವರ ವಿಚಾರದಲ್ಲಿ ಯಾವ ನಿಲುವನ್ನು ತಳೆಯಬೇಕೆಂದು ನಾವು ಆಲೋಚಿಸಬೇಕು.''

ಆದರೆ ಹೆಚ್ಚೇನೂ ಕಾಯದೇನೇ ಬದಾನನ ಬಳಿಗೆ ಶೀರವೈಹಿಯ ಪತ್ರವು ತಲುಪಿತು. ಪತ್ರದಲ್ಲಿರುವ ವಿಷಯ ಹೀಗಿತ್ತು:

''ಕಿಸ್ರಾ ಚಕ್ರವರ್ತಿಯನ್ನು ನಾನು ಕೊಲೆ ಮಾಡಿದ ಉದ್ದೇಶವಿಷ್ಟೇ-ಅದು ನಮ್ಮ ಜನತೆಯ ಪ್ರತೀಕಾರವಾಗಿತ್ತು. ಸಮಾಜದ ಕುಲೀನರಾದ ಹಲವು ಗಣ್ಯರನ್ನು ಆತ ಕೊಂದು ಬಿಟ್ಟನು. ಅವರ ಮಹಿಳೆಯರನ್ನು ಅವಹೇಳನಗೈದು ಮಾನಹಾನಿಯನ್ನು ಮಾಡಿ ಅವರ ಸೊತ್ತುಗಳನ್ನು ಕೊಳ್ಳೆ ಹೊಡೆದನು. ಅವೆಲ್ಲದಕ್ಕಿರುವ ಶಿಕ್ಷೆಯಾಗಿತ್ತು ಅದು. ಆದುದರಿಂದ ನನ್ನೀ ಪತ್ರ ಕೈ ಸೇರಿದ ಕೂಡಲೇ ತಮ್ಮ ಪ್ರದೇಶದಲ್ಲಿರುವವರೊಂದಿಗೆ ನನಗಾಗಿ ತಾವು ಅನುಸರಣಾ ಪ್ರತಿಜ್ಞೆಯನ್ನು ಮಾಡಿಸಬೇಕು.''

ಶೀರವೈಹಿಯ ಪತ್ರವನ್ನು ಓದಿ ಮುಗಿಸುವುದರೊಂದಿಗೆ ಬದಾನ್ ತಾನು ಇಸ್ಲಾಮ್ ಸ್ವೀಕರಿಸಿದೆನೆಂದು ಘೋಷಿಸಿದನು. ಬದಾನನೊಂದಿಗೆ ಅಂದು ಯಮನ್‌ನಲ್ಲಿರುವ, ಪರ್ಷಿಯಾದಿಂದ ಬಂದ ಜನರೆಲ್ಲರೂ ಇಸ್ಲಾಮ್ ಸ್ವೀಕರಿಸಿದರು.

★★★

ಇವಿಷ್ಟು ಅಬ್ದುಲ್ಲಾಹಿಬ್‌ನು ಹುದಾಫ ಪರ್ಷಿಯನ್ ಚಕ್ರವರ್ತಿ ಕಿಸ್ರಾನನ್ನು ಭೇಟಿಯಾಗಲು ಹೋದ ಕತೆ. ಆದರೆ ರೋಮನ್ ಚಕ್ರವರ್ತಿ ಕೈಸರ್‌ನ್ನು ಭೇಟಿಯಾದ ಘಟನೆಯ ಕುರಿತಾಗಿ ವಿಸ್ಮಯಕರವಾದ ಇನ್ನೊಂದು ಕತೆ ಅವರಿಗೆ ಹೇಳಲಿಕ್ಕಿದೆ.

ಉಮರ್(ರ)ರವರ ಆಡಳಿತಾವಧಿಯ ಹಿಜ್ರಾ19ನೇ ವರ್ಷದಲ್ಲಿ ರೋಮ್ ಸಾಮ್ರಾಜ್ಯದೊಂದಿಗೆ ಯುದ್ಧ ಹೂಡಲು ಖಲೀಫಾ ಉಮರ್(ರ)ರವರು ಸೈನ್ಯವೊಂದನ್ನು ಕಳುಹಿಸಿದರು. ಅಬ್ದುಲ್ಲಾಹಿಬ್‌ನು ಹುದಾಫ ಅದರಲ್ಲಿದ್ದರು. ಮುಸ್ಲಿಮರ ಆತ್ಮ ಸಮರ್ಪಣೆ, ನಿಷ್ಕಳಂಕ ವಿಶ್ವಾಸ ದೃಢತೆ, ಅಲ್ಲಾಹ್-ರಸೂಲರ ಮಾರ್ಗದಲ್ಲಿ ಜೀವವನ್ನು ಲೆಕ್ಕಿಸದೆ ಹೋರಾಡಲು ತಯಾರಾದ ತುಂಬಾ ಕತೆಗಳು ಈತನ್ಮಧ್ಯೆ ಸೀಝರನ ಕಿವಿಗೆ ತಲುಪಿದ್ದವು.

ಆತನು ತನ್ನ ಸೈನಿಕರು ಮತ್ತು ಅಧಿಕಾರಿಗಳೊಂದಿಗೆ ಮುಸ್ಲಿಮರಲ್ಲಿ ಯಾರಾದರೂ ಖೈದಿಗಳಾಗಿ ಸೆರೆ ಸಿಕ್ಕಿದರೆ ಅವರನ್ನು ಕೊಲ್ಲಬಾರದೆಂದೂ, ಜೀವಂತವಾಗಿ ತನ್ನ ಮುಂದೆ ಹಾಜರುಪಡಿಸಬೇಕೆಂದೂ ಆಜ್ಞಾಪಿಸಿದನು. ಅದೇ ವೇಳೆ ಅಬ್ದುಲ್ಲಾಹಿಬ್‌ನ್ ಹುದಾಫ ಅಸ್ಸಹ್ಮೀ ರೋಮ್ ಸಾಮ್ರಾಜ್ಯದ ಕೈಗಳಲ್ಲಿ ಸಿಲುಕಿದರು. ಆ ವೇಳೆ ಅವರನ್ನು ಬಂಧಿಸಿದ ಸೈನಿಕರು ಅವರನ್ನು ತಮ್ಮ ರಾಜನ ಬಳಿಗೆ ಕರೆದುಕೊಂಡು ಹೋದರು.

ಅವರು ಚಕ್ರವರ್ತಿಯನ್ನು ನೆನಪಿಸಿದರು:

''ಈತ ಮುಹಮ್ಮದರ ಧರ್ಮವನ್ನು ಪ್ರಾರಂಭದ ಹಂತದಲ್ಲೇ ಅನುಸರಿಸಿದ ಅನುಚರನಾಗಿರುವನು. ಇದೀಗ ನಮ್ಮ ಕೈಯಲ್ಲಿ ಬಂಧಿಸಲ್ಪಟ್ಟ ಖೈದಿಯಾಗಿರುವನು. ಚಕ್ರವರ್ತಿಯ ಆಜ್ಞೆಯಂತೆ

*ಕೈಕೋಳದಿಂದ ಬಂಧಿಸಲ್ಪಟ್ಟ ಆ ವೇಳೆಯಲ್ಲಿಯೂ ಕೂಡ ಅಬ್ದುಲ್ಲಾ ನಸುನಗುತ್ತಾ ಹೇಳಿದರು: ''ಅಲ್ಲಾಹನಾಣೆ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಮತ್ತು ಅರಬಿಗಳ ಕೈವಶವಿರುವ ಸರ್ವವನ್ನೂ ನೀವು ನನಗೆ ನೀಡಿದರೂ ಕೂಡ ಮುಹಮ್ಮದ್(ಸ)ರ ಧರ್ಮದಿಂದ ಕಣ್ರೆಪ್ಪೆ ಮುಚ್ಚುವಷ್ಟು ವೇಳೆಯೂ ಕೂಡ ದೂರ ಸರಿಯಲು ನನಗೆ ಸಾಧ್ಯವಿಲ್ಲ.''*

ನಾವು ಅವರನ್ನು ತಮ್ಮ ಮುಂದೆ ಹಾಜರುಪಡಿಸಿದ್ದೇವೆ.

★★★

ರೋಮ್ ಚಕ್ರವರ್ತಿ ತುಂಬಾ ಹೊತ್ತಿನಿಂದ ಅಬ್ದುಲ್ಲಾಹಿಬ್ನ್ ಹುದಾಫರನ್ನೇ ದಿಟ್ಟಿಸಿ ನೋಡುತ್ತಿದ್ದನು. ನಂತರ ಅವರೊಂದಿಗೆ ಹೇಳಿದನು:

''ನಾವು ನಿನ್ನ ಮುಂದೆ ಒಂದು ವಿಚಾರವನ್ನು ಹೇಳುವೆನು.''

''ಏನದು?''

''ಕ್ರೈಸ್ತ ಧರ್ಮ ಸ್ವೀಕರಿಸಿದರೆ ನಿನ್ನನ್ನು ಸುಮ್ಮನೆ ಬಿಡಬಹುದು. ತಮಗೆ ತುಂಬಾ ಪ್ರತಿಫಲಗಳನ್ನೂ ನೀಡಲಾಗುವುದು.''

ಅದನ್ನು ತಳ್ಳಿ ಹಾಕಿದ ಹುದಾಫ(ರ)ರವರು ದೃಢವಾಗಿ ಈ ರೀತಿ ಉತ್ತರಿಸಿದರು.

ಅಸಾಧ್ಯ! ತಾವು ಬಯಸುವಂತೆ ಮಾಡುವುದಕ್ಕಿಂತ ಮರಣವು ನನಗೆ ಸಾವಿರ ಬಾರಿ ಉತ್ತಮವಾಗಿದೆ.''

ಅದನ್ನು ಕೇಳಿದ ಸೀಝರನು ಹೀಗೆಂದನು: ''ತಾವು ಓರ್ವ ಕುಲೀನ ವ್ಯಕ್ತಿ ಎಂದು ನನಗೆ ತೋರುತ್ತಿದೆ. ಆದುದರಿಂದ ನನ್ನ ನಿರ್ದೇಶನವನ್ನು ತಾವು ಸ್ವೀಕರಿಸಿದರೆ ತಮ್ಮನ್ನು ನನ್ನ ವ್ಯವಹಾರಗಳಲ್ಲಿ ಪಾಲುದಾರನನ್ನಾಗಿ ಮಾಡುವೆನು ಮತ್ತು ನನ್ನ ಅಧಿಕಾರವನ್ನು ತಮಗೆ ವಿಭಜಿಸಿ ನೀಡುವೆನು.''

ಕೈಕೋಳದಿಂದ ಬಂಧಿಸಲ್ಪಟ್ಟ ಆ ವೇಳೆಯಲ್ಲಿಯೂ ಕೂಡ ಅಬ್ದುಲ್ಲಾ ನಸುನಗುತ್ತಾ ಹೇಳಿದರು:

''ಅಲ್ಲಾಹನಾಣೆ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಮತ್ತು ಅರಬಿಗಳ ಕೈವಶವಿರುವ ಸರ್ವವನ್ನೂ ನೀವು ನನಗೆ ನೀಡಿದರೂ ಕೂಡ ಮುಹಮ್ಮದ್(ಸ)ರ ಧರ್ಮದಿಂದ ಕಣ್ರೆಪ್ಪೆ ಮುಚ್ಚುವಷ್ಟು ವೇಳೆಯೂ ಕೂಡ ದೂರ ಸರಿಯಲು ನನಗೆ ಸಾಧ್ಯವಿಲ್ಲ.''

''ಹಾಗಿದ್ದರೆ ನಿಮ್ಮನ್ನು ನಾವು ಕೊಂದು ಬಿಡುವೆವು.''

''ನೀವಿಚ್ಛಿಸಿದಂತೆ ನಿಮಗೆ ಏನು ಬೇಕಾದರೂ ಮಾಡಬಹುದು.''

ಚಕ್ರವರ್ತಿಯ ಆಜ್ಞೆಯಂತೆ ಅಬ್ದುಲ್ಲಾರನ್ನು ನೇಣುಗಂಬದ ಬಳಿ ತರಲಾಯಿತು. ನಂತರ ನೇಣಿಗೇರಿಸಲು ಭಟರೊಂದಿಗೆ ಆಜ್ಞಾಪಿಸಿದನು. ''ಅವರ ಎರಡೂ ಕೈಗಳ ಸಮೀಪಕ್ಕೆ ಬಾಣವನ್ನು ಎಸೆಯಿರಿ.''

''ಕ್ರೈಸ್ತ ಧರ್ಮವನ್ನು ಸ್ವೀಕರಿಸಲು ಅಬ್ದುಲ್ಲಾರೊಂದಿಗೆ ಆಗ್ರಹಿಸಿ ಈ ರೀತಿ ಸೀಝರನು ಹೇಳಿದನಾದರೂ ಅಬ್ದುಲ್ಲಾರವರು ಅದನ್ನು ಕೇಳಿಸಿಕೊಂಡಂತೆ ತೋರಲಿಲ್ಲ.

''ನಂತರ ಸೀಝರ್ ನಿರ್ದೇಶಿಸಿದನು:

''ಅವರ ಎರಡೂ ಕಾಲುಗಳ ಸಮೀಪಕ್ಕೆ ಬಾಣವನ್ನೆಸೆಯಿರಿ.''

ತಮ್ಮ ಧರ್ಮವನ್ನು ತೊರೆದು ಬರಬೇಕೆಂದು ಸೀಝರ್ ಅವರೊಂದಿಗೆ ಒತ್ತಾಯಿಸುತ್ತಲೇ ಇದ್ದನು. ಆದರೆ ಅಬ್ದುಲ್ಲಾರವರಲ್ಲಿ ಯಾವುದೇ ಬದಲಾವಣೆ ಉಂಟಾಗಲಿಲ್ಲ.

ಯಾವುದೇ ರೀತಿಯಲ್ಲೂ ಬಗ್ಗುವುದಿಲ್ಲವೆಂದು ಕಂಡಾಗ ಬಾಣ ಎಸೆಯುವುದನ್ನು ನಿಲ್ಲಿಸುವಂತೆ ಹೇಳಿ ನೇಣುಗಂಬದಿಂದ ಅವರನ್ನು ಕೆಳಗಿಳಿಸಲು ಆಜ್ಞಾಪಿಸಿದನು. ನಂತರ ದೊಡ್ಡದಾದ ತಾಮ್ರದ ಹಂಡೆಯೊಂದನ್ನು ತರಲು ಹೇಳಿ ಅದರ ತುಂಬಾ ಎಣ್ಣೆಯನ್ನು ತುಂಬಿಸಿ ನಂತರ ಅದನ್ನು ಕುದಿಸುವಂತೆ ಆಜ್ಞಾಪಿಸಿದನು. ನಂತರ ಬಂಧಿತ ಈರ್ವರು ಮುಸ್ಲಿಮರನ್ನು ಕರೆತರಲಾಯಿತು ಮತ್ತು ಅವರಲ್ಲಿ ಓರ್ವನನ್ನು ಸೀಝರನ ಆಜ್ಞೆಯಂತೆ ಕುದಿಯುತ್ತಿರುವ ಎಣ್ಣೆಗೆ ಹಾಕಲಾಯಿತು. ಕುದಿಯುತ್ತಿರುವ ಎಣ್ಣೆಯಲ್ಲಿ ಅವರ ದೇಹವು ಕರಗಿ ಹೋಯಿತು. ಅಲ್ಲಿ ಅಸ್ಥಿಪಂಜರ ಮಾತ್ರವೇ ಬಾಕಿವುಳಿಯಿತು. ನಂತರ ಅಬ್ದುಲ್ಲಾಹಿಬ್ನ್ ಹುದಾಫರ ಕಡೆಗೆ ತಿರುಗಿದ ಚಕ್ರವರ್ತಿ ಅವರನ್ನು ಕ್ರೈಸ್ತ ಧರ್ಮ ಸ್ವೀಕರಿಸುವಂತೆ ಹೇಳಿದನು. ಇದೀಗ ಈ ಹಿಂದೆಗಿಂತಲೂ ದೃಢವಾದ ಸ್ವರದಲ್ಲಿ ಅದನ್ನವರು ತಳ್ಳಿಹಾಕಿದರು.

ಅದರಿಂದ ನಿರಾಶನಾದ ಸೀಝರ್ ಚಕ್ರವರ್ತಿ ಅಬ್ದುಲ್ಲಾರವರ ಈರ್ವರು ಜೊತೆಗಾರರನ್ನು ಕುದಿಯುವ ಎಣ್ಣೆಗೆ ಹಾಕಿದ ಅದೇ ತಾಮ್ರದ ಪಾತ್ರೆಯ ಬಳಿ ಅಬ್ದುಲ್ಲಾರನ್ನು ಕೊಂಡೊಯ್ಯುತ್ತಿದ್ದಾಗ ಅವರ ಕಣ್ಣುಗಳು ತೇವಗೊಳ್ಳುವುದನ್ನು ಅವರು ಕಂಡರು. ಇದನ್ನು ನೋಡಿದ ಭಟರು ಹೇಳಿದರು. ''ಅವರು ಅಳುತ್ತಿದ್ದಾರೆ.''

ಇದನ್ನು ಕೇಳಿದ ಸೀಝರ್‌ನು ಅಬ್ದುಲ್ಲಾ ಬೆದರಿದ್ದಾರೆ ಅಂದುಕೊಂಡು ''ಆತನನ್ನು ನನ್ನ ಬಳಿಗೆ ತನ್ನಿರಿ'' ಎಂದನು.

ಸೇವಕರು ಅಬ್ದುಲ್ಲಾರನ್ನು ಪುನಃ ಸೀಝರನ ಬಳಿಗೆ ಕರೆ ತಂದಾಗ ಆತ ಪುನಃ ಕ್ರೈಸ್ತ ಧರ್ಮವನ್ನು ಸ್ವೀಕರಿಸಲು ಹೇಳಿದನು. ಆದರೆ ಅಬ್ದುಲ್ಲಾರವರು ಅದನ್ನು ಖಡಾಖಂಡಿತವಾಗಿ ನಿರಾಕರಿಸಿದರು. ಸೀಝರನು ಕೇಳಿದನು. ನಾಶವಾಗಲಿ! ಮತ್ತೇಕೆ ನೀನು ಅತ್ತಿದ್ದು?''

ನಾನು ಸ್ವಯಂ ಮನದಲ್ಲೇ ಹೀಗೆಂದುಕೊಂಡು ಅತ್ತುಬಿಟ್ಟೆನು-ನೀನು ಈ ವೇಳೆ ತಾಮ್ರದ ಪಾತ್ರೆಯಲ್ಲಿ ಬೀಳಲು

ಹೋಗುತ್ತಿದ್ದೀ. ಅದರೊಂದಿಗೆ ನಿನ್ನ ಆತ್ಮವು ನಿನ್ನಿಂದ ಬೇರ್ಪಟ್ಟು ಹೋಗುವುದು. ನನ್ನ ದೇಹದ ರೋಮ ರೋಮಗಳಿಗೆಲ್ಲವೂ ಆತ್ಮವಿದ್ದು, ಅವೆಲ್ಲವೂ ಅಲ್ಲಾಹನ ಮಾರ್ಗದಲ್ಲಿ ಬೇರ್ಪಟ್ಟು ಹೋಗುವಂತೆ ಈ ಪಾತ್ರದಲ್ಲಿ ಮೇಲಿಂದ ಮೇಲೆ ಬೀಳುವಂತಿದ್ದರೆ ಎಂದು ನಾವು ಬಯಸುತ್ತಿದ್ದೇನೆ.''

ಧಿಕ್ಕಾರಿ ಆಡಳಿತಗಾರನಾದ ಆತ ಅದನ್ನು ಕೇಳಿ ಕೊನೆಗೆ ಈ ರೀತಿ ಪ್ರತಿಕ್ರಿಯಿಸಿದನು. ''ನನ್ನ ಬಳಿ ಬಂದು ನನ್ನ ಶಿರವನ್ನು ಚುಂಬಿಸು. ನಿನ್ನನ್ನು ಸುಮ್ಮನೆ ಬಿಟ್ಟು ಬಿಡುವೆನು. ಅದಕ್ಕೆ ನೀನು ತಯಾರಿದ್ದೀಯಾ?''

ಅಬ್ದುಲ್ಲಾ ಹೇಳಿದರು. ''ನಾನು ಆ ರೀತಿ ಮಾಡಿದರೆ ಖೈದಿಗಳಾದ ಮುಸ್ಲಿಮರನ್ನೆಲ್ಲಾ ಬಿಡುಗಡೆ ಮಾಡುವೆಯಾ?''

ಹೌದು, ಖೈದಿಗಳಾದ ಎಲ್ಲಾ ಮಸ್ಲಿಮರನ್ನು ಸುಮ್ಮನೆ ಬಿಟ್ಟು ಬಿಡುವೆನು.''

ಅಬ್ದುಲ್ಲಾ ಮನದಲ್ಲಿ ಹೀಗೆಂದುಕೊಂಡರು: ''ಈತ ಅಲ್ಲಾಹನ ಶತ್ರುಗಳಲ್ಲೋರ್ವ. ಈತನ ಶಿರವನ್ನು ಚುಂಬಿಸಿದರೆ ಈತ ನನ್ನನ್ನೂ ಖೈದಿಗಳಾದ ಎಲ್ಲಾ ಮುಸ್ಲಿಮರನ್ನೂ ಸುಮ್ಮನೆಬಿಟ್ಟು ಬಿಡುತ್ತಾನೆ. ಹಾಗೆ ಮಾಡಿದರೆ ನನಗೇನೂ ನಷ್ಟವಿಲ್ಲ.''

ಅಬ್ದುಲ್ಲಾ ಸೀಝರನ ಬಳಿಗೆ ಬಂದು ಅವನ ಶಿರವನ್ನು ಚುಂಬಿಸಿದರು. ಅದರೊಂದಿಗೆ ಅಲ್ಲಿರುವ ಎಲ್ಲಾ ಮುಸ್ಲಿಂ ಖೈದಿಗಳನ್ನು ಬಿಡುಗಡೆಗೊಳಿಸಿ ಅಬ್ದುಲ್ಲಾರೊಂದಿಗೆ ಕಳುಹಿಸಿಕೊಡಲು ಸೀಝರನು ಆಜ್ಞಾಪಿಸಿದನು. ಇದೀಗ ಎಲ್ಲರೂ ಬಿಡುಗಡೆಗೊಂಡರು.

ಅಲ್ಲಿಂದ ನೇರವಾಗಿ ಅಬ್ದುಲ್ಲಾರವರು ಖಲೀಫಾ ಉಮರ್(ರ)ರವರ ಬಳಿಗೆ ಹೋದರು. ಖಲೀಫಾರೊಂದಿಗೆ ಸಮಾಚಾರವನ್ನೆಲ್ಲಾ ವಿವರಿಸಿದರು. ಖಲೀಫಾ ತುಂಬಾ ಸಂತಸಗೊಂಡರು. ಬಿಡುಗಡೆಯಾದ ಖೈದಿಗಳನ್ನು ಕಂಡು ಅವರು ಹೀಗೆಂದರು:

''ಅಬ್ದುಲ್ಲಾಬಹಿಬ್‌ನ್ ಹುದಾಫರ ಶಿರಸ್ಸು ಚುಂಬಿಸಲು ಪ್ರತಿಯೋರ್ವ ಮಸ್ಲಿಮನು ಬಾಧ್ಯಸ್ಥನಾಗಿರುವನು. ಆ ಬಾಧ್ಯತೆಯನ್ನು ಮೊತ್ತಮೊದಲು ನಾನು ನಿರ್ವಹಿಸುವೆನು.'' ಎಂದು ಹೇಳಿ ಕುಳಿತ ಜಾಗದಿಂದೆದ್ದು ಖಲೀಫಾ ಅಬ್ದುಲ್ಲಾರವರ ಶಿರವನ್ನು ಚುಂಬಿಸಿದರು.


SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

OUR SERVICES:
•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

OUR FREE SERVICES:
SAUDI AIR-TICKET RE-CONFIRMATION
RE-ENTRY VISA DATE CHECKING

CONTACT

HEAD OFFICE:
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

MANGALORE OFFICE
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
Tel: 0091 824 2442020. (4lines)
Telefax: 00918244277690
Mobile: 0091 9448253825
Email:suhanamglr@yahoo.co.in

FOR OUR WAKALA


## ಸಲ್ವಾ ಜುಡುಂ ಸಂವಿಧಾನ ಬಾಹಿರ

# ಅಮಾಯಕರಿಗೆ ‘ಪರಮೋಚ್ಚ’ ತೀರ್ಪು

■ ಶಬೀರ್ ಕೆ.



ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಖಂಡಿತವಾಗಿಯೂ ಮಹತ್ವಪೂರ್ಣವಾದದ್ದು. ಛತ್ತೀಸ್‌ಗಢ ಸರಕಾರ ಹಾಗೂ ಕೇಂದ್ರ ಸರಕಾರ ಕಾಣದಿರುವುದನ್ನು ಸಲ್ವಾಜುಡುಂ ವಿಷಯದಲ್ಲಿ ಸುಪ್ರೀಂ ಕೋರ್ಟ್ ಕಂಡಿದೆ. ಸಲ್ವಾ ಜುಡುಂ ಸಂವಿಧಾನ ಬಾಹಿರ ಮತ್ತು ಅದನ್ನು ರದ್ದುಗೊಳಿಸಬೇಕು ಎಂದು ಕೋರ್ಟು ತೀರ್ಪಿತ್ತಿದೆ. ಈ ತೀರ್ಪು ಜಾರಿಯಾದರೆ ಅದು ಛತ್ತೀಸ್‌ಗಢದಲ್ಲಿ ನಕ್ಸಲೀಯರು ಮತ್ತು ಪೊಲೀಸರ ನಡುವಿನ ತಿಕ್ಕಾಟದಲ್ಲಿ ಬಲಿಪಶುಗಳಾಗುತ್ತಿರುವ ಅಲ್ಲಿನ ಅಮಾಯಕ ಜನರಿಗೆ ನೆಮ್ಮದಿಯನ್ನುಂಟು ಮಾಡಲಿದೆ.

ಸಲ್ವಾ ಜುಡುಂ ಅಂದರೆ ‘ಗೊಂಡಿ’ ಭಾಷೆಯಲ್ಲಿ ‘ಶಾಂತಿ ನಡೆ’. ಈ ಚಳವಳಿ ಛತ್ತೀಸ್‌ಗಢದಲ್ಲಿ ನಕ್ಸಲೈಟ್‌ಗೆ ವಿರುದ್ಧವಾಗಿ 2005ರಲ್ಲಿ ಆರಂಭವಾಗಿತ್ತು. ಕೆಲವು ವರ್ಷಗಳ ನಂತರ ಛತ್ತೀಸ್‌ಗಢ ಸರಕಾರ ಸಲ್ವಾ ಜುಡುಂ ಚಳವಳಿಯನ್ನು ದತ್ತು ಪಡೆದುಕೊಂಡಿತು. ನಕ್ಸಲೈಟರ ವಿರುದ್ಧ ಹೋರಾಡುವುದಕ್ಕಾಗಿ ರಾಜ್ಯವು ಸಲ್ವಾ ಜುಡುಂನಲ್ಲಿರುವ ಆದಿವಾಸಿ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿಗಳನ್ನು ನೀಡಲು ಆರಂಭಿಸಿತು. ಇದು ಛತ್ತೀಸ್‌ಗಢದಲ್ಲಿ ನಕ್ಸಲ್ ಹಿಂಸೆಯು ಅಧಿಕವಾಗಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ 2008ರಲ್ಲಿ ದೇಶದಲ್ಲಿ ನಡೆದ ನಕ್ಸಲೈಟ್ ಹಿಂಸೆಯಲ್ಲಿ 65% ಛತ್ತೀಸ್‌ಗಡದಲ್ಲಿ ನಡೆದಿರುವುದು.

ನಕ್ಸಲೈಟ್‌ಅನ್ನು ವಿರೋಧಿಸಲಾಗುತ್ತಿರುವುದು ಅದು ಪ್ರಜಾಪ್ರಭುತ್ವಕ್ಕೆ ಮಾರಕ ಎಂಬ ಕಾರಣಕ್ಕೆ. ಆದರೆ ಕಾನೂನನ್ನು ರಕ್ಷಿಸಲೆಂದು ಪ್ರಜೆಗಳ ಕೈಗೆ ಶಸ್ತ್ರಾಸ್ತ್ರವನ್ನು ನೀಡುವುದು ಅದಕ್ಕಿಂತಲೂ ಅಪಾಯಕಾರಿಯೇ ಸರಿ. ಇದನ್ನು ಛತ್ತೀಸ್‌ಗಢದ ಜನರು ಅನುಭವಿಸಿದ್ದಾರೆ ಕೂಡ. ಇದೊಂದು ರೀತಿಯಲ್ಲಿ ವಿರೋಧಿಯನ್ನು ಸೋಲಿಸುವುದಕ್ಕಾಗಿ ತನ್ನ ಶತ್ರುವಿನ ಶತ್ರುವಿಗೆ ಶಸ್ತ್ರಾಸ್ತ್ರವನ್ನು ಕೊಡುವ ಅಮೆರಿಕದ ಅಪಾಯಕಾರಿ ಬೇಹುಗಾರಿಕಾ ಸಂಸ್ಥೆ ಸಿಐಎಯ ತಂತ್ರವನ್ನು ಹೋಲುತ್ತದೆ. ಇದರಿಂದಾಗಿ ಜಗತ್ತಿನಲ್ಲಿ ಕೊನೆಗಾಣದ ಹಲವು ಗಲಭೆಗಳು ಸೃಷ್ಟಿಯಾಗಿರುವುದನ್ನೂ, ಶತ್ರುವಿನ ಶತ್ರುವೇ ಮತ್ತೆ ತಮ್ಮ ಶತ್ರುವಾಗಿ ಅಮೆರಿಕಕ್ಕೆ ಪರಿಣಮಿಸಿದ ಹಲವು ದೃಷ್ಟಾಂತಗಳೂ ಇವೆ.

ಸಲ್ವಾ ಜುಡುಂ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಎಂಬುದಾಗಿ ಪೊಲೀಸರು ಮತ್ತು ಪ್ರಭುತ್ವ ಹೇಳುತ್ತಿದ್ದರೂ ಅದು

*ಎಟಗುಟ್ಟ ಗ್ರಾಮದ ಜನರು ವಿವರಿಸುವ ತಮ್ಮ ಅನುಭವಗಾಥೆಗಳು ಸಲ್ವಾ ಜುಡುಂನ ಪರಿಣಾಮವನ್ನು ಬಿಂಬಿಸುತ್ತದೆ. 2006ರಲ್ಲಿ ಒಂದು ದಿನ ದಾಂತೆವಾಡದ 50 ಮನೆಗಳಿರುವ ಎಟಗುಟ್ಟಾ ಗ್ರಾಮಕ್ಕೆ ಸರಕಾರಿ ಭದ್ರತಾ ಪಡೆಗಳು ಮತ್ತು ಸಲ್ವಾಜುಡುಂ ಸದಸ್ಯರು ದಾಳಿಯಿಟ್ಟರು. ಘಟನೆಯ ನೇರ ಸಾಕ್ಷಿಯೊಬ್ಬ ಹ್ಯೂಮನ್‌ರೈಟ್ಸ್ ವಾಚ್‌ಗೆ ತಿಳಿಸುವಂತೆ ದಾಳಿಗೋರರು ಯಾವುದೇ ಮುನ್ನೆಚ್ಚರಿಕೆಯಿಲ್ಲದೆ ಗ್ರಾಮವನ್ನು ಪ್ರವೇಶಿಸಿದ್ದರು. ಅವರು ಗ್ರಾಮಸ್ಥರನ್ನು ಬಡಿಯುವುದಕ್ಕೆ ಆರಂಭಿಸಿದರು ಮತ್ತು ಅವರ ಆಸ್ತಿಪಾಸ್ತಿಗಳನ್ನು ಕೊಳ್ಳೆ ಹೊಡೆದರು. ಸಲ್ವಾ ಜುಡುಂ ಸದಸ್ಯರು ಮತ್ತು ಸರಕಾರಿ ಭದ್ರತಾ ಸಿಬ್ಬಂದಿಗಳು ಗ್ರಾಮದ ಎಲ್ಲಾ 50 ಮನೆಗಳನ್ನು ಸುಟ್ಟು ಹಾಕಿದರು.*

ಪ್ರಜಾಪ್ರಭುತ್ವವನ್ನು ರಕ್ಷಿಸಲಿರುವ ಪೊಲೀಸರ ರಕ್ಷಣೆಗಾಗಿರುವುದೇ ಹೊರತು, ಪ್ರಜೆಗಳ ರಕ್ಷಣೆಗಾಗಿ ಇರುವುದಲ್ಲ ಎಂಬುದು ವಾಸ್ತವವಾಗಿದೆ. ಸಲ್ವಾ ಜುಡುಂನಿಂದಾಗಿ ಛತ್ತೀಸ್‌ಗಢದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಾದ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಹ್ಯೂಮನ್ ರೈಟ್ಸ್ ವಾಚ್‌ನ ವರದಿಯೊಂದು ಚೆನ್ನಾಗಿ ವಿವರಿಸುತ್ತದೆ. ಆ ವರದಿಯ ಶಿರೋನಾಮೆ *Being Neutral is Our Biggest Crime* (ತಟಸ್ಥವಾಗಿರುವುದು ನಮ್ಮ ಮಹಾ ಅಪರಾಧ).

ನಕ್ಸಲೈಟರು ಮತ್ತು ಸಲ್ವಾಜುಡುಂ ಹಾಗೂ ಪೊಲೀಸರ ತಿಕ್ಕಾಟದಲ್ಲಿ ಗ್ರಾಮಸ್ಥರು ಯಾವ ರೀತಿಯಲ್ಲಿ ಸಂಕಷ್ಟದಲ್ಲಿದ್ದಾರೆ ಎಂಬುದನ್ನು ವರದಿ ವಿವರವಾಗಿ ತಿಳಿಸುತ್ತದೆ. ವರದಿಯು ಹೇಳುವಂತೆ 2005 ರಿಂದು 2007ರ ನಡುವೆ ಎರಡು ವರ್ಷಗಳಲ್ಲಿ ಸಲ್ವಾ ಜುಡುಂ ಕಾರ್ಯಕರ್ತರೊಂದಿಗೆ ಸೇರಿ ಪೊಲೀಸರು ನಕ್ಸಲೈಟ್ ಪರರು ಎನ್ನುವವರನ್ನು ಗುರುತಿಸುವುದಕ್ಕಾಗಿ ಹಲವು ಗ್ರಾಮಗಳಿಗೆ ದಾಳಿ ನಡೆಸಿದ್ದು, ನೂರಾರು ಕುಟುಂಬಗಳನ್ನು ಸಲ್ವಾ ಜುಡುಂ ಸೇರುವಂತೆ ಬಲವಂತಪಡಿಸಿದ್ದರು. ಇದನ್ನು ನಿರಾಕರಿಸುವ ಗ್ರಾಮಸ್ಥರನ್ನು ಬಡಿಯಲಾಗುತ್ತಿತ್ತು, ಹತ್ಯೆಗಯ್ಯಲಾಗುತ್ತಿತ್ತು ಮತ್ತು ಅಕ್ರಮ ಬಂಧನಗಳಲ್ಲಿಡಲಾಗಿತ್ತು. ಸಾವಿರಾರು ಕುಟುಂಬಗಳನ್ನು ಪೊಲೀಸ್ ಠಾಣೆ ಹಾಗೂ ಅರೆ ಸೇನಾಪಡೆಯ ಕ್ಯಾಂಪ್‌ಗಳ ಸಮೀಪದಲ್ಲಿರುವ ಸಲ್ವಾ ಜುಡುಂ ತಾತ್ಕಾಲಿಕ ಶಿಬಿರಗಳಿಗೆ ಸ್ಥಳಾಂತರಿಸಲಾಗುತ್ತಿತ್ತು. ಸರಕಾರಿ ಭದ್ರತಾ ಸಿಬ್ಬಂದಿಗಳು ನಕ್ಸಲೈಟ್ ಎಂದು ಶಂಕಿಸಲಾದವರನ್ನು 'ಎನ್‌ಕೌಂಟರ್' ಹೆಸರಿನಲ್ಲಿ ಕೊಂದು ಹಾಕುತ್ತಿದ್ದರು.

ಮಕ್ಕಳನ್ನೂ ಕೂಡ ವಿಶೇಷ ಪೊಲೀಸ್ ಅಧಿಕಾರಿಗಳಾಗಿ (ಎಸ್‌ಪಿಒ) ನೇಮಿಸಲಾಗುತ್ತಿತ್ತು. ಪೊಲೀಸ್-ಸಲ್ವಾ ಜುಡುಂ ಜಂಟಿ ಕಾರ್ಯಾಚರಣೆಯ ವೇಳೆ ಈ ಮಕ್ಕಳು ನಕ್ಸಲೈಟರ ದಾಳಿಗೆ ತುತ್ತಾಗುತ್ತಿದ್ದರು. ಛತ್ತೀಸ್‌ಗಢದ ಸರಕಾರೇತರ ಸಂಘಟನೆಗಳು ಪೊಲೀಸರು ಮಕ್ಕಳನ್ನು ಇಂತಹ ಕಾರ್ಯಾಚರಣೆಗಳಿಗೆ ಬಳಸುವುದನ್ನು ವಿರೋಧಿಸಿದ್ದವು. ಆದರೆ ಈ ಮಕ್ಕಳ ಜನನವನ್ನು ನಿಗದಿಪಡಿಸುವ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ ಇಂತಹ ಪ್ರಮಾದಗಳು ಸಂಭವಿಸಿದೆ ಎನ್ನುವ ಮೂಲಕ ಪೊಲೀಸರು ಕೈತೊಳೆದುಕೊಂಡಿದ್ದರು.

ಛತ್ತೀಸ್‌ಗಢದಲ್ಲಿ ನಡೆಯುತ್ತಿರುವ ಮಾನವ ಹಕ್ಕು ಉಲ್ಲಂಘನೆಗಳಿಂದಾಗಿ ಡಿಸೆಂಬರ್ 2007ರ ತನಕ ಸುಮಾರು 49,000 ಮಂದಿ ಗ್ರಾಮಸ್ಥರನ್ನು ಬಿಜಾಪುರ್ ಮತ್ತು ಧಾಂತೆವಾಡ್‌ನ ಸುಮಾರು 25 ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. ಸುಮಾರು 65,000 ಮಂದಿ ಗ್ರಾಮಸ್ಥರು ಸಮೀಪದ ಮಹರಾಷ್ಟ್ರ, ಒರಿಸ್ಸಾ ಮತ್ತು ಆಂಧ್ರ ಪ್ರದೇಶಗಳಿಗೆ ಪಲಾಯನಗೈದಿದ್ದಾರೆ. ಇವರಿಗೆ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರಗಳು ಚೇತರಿಕೆ ವ್ಯವಸ್ಥೆಯನ್ನು ಕಲ್ಪಿಸಿಲ್ಲ.

ಎಟಗುಟ್ಟ ಗ್ರಾಮದ ಜನರು ವಿವರಿಸುವ ತಮ್ಮ ಅನುಭವಗಾಥೆಗಳು ಸಲ್ವಾ ಜುಡುಂನ ಪರಿಣಾಮವನ್ನು ಬಿಂಬಿಸುತ್ತದೆ. 2006ರಲ್ಲಿ ಒಂದು ದಿನ ದಾಂತೆವಾಡದ 50 ಮನೆಗಳಿರುವ ಎಟಗುಟ್ಟಾ ಗ್ರಾಮಕ್ಕೆ ಸರಕಾರಿ ಭದ್ರತಾ ಪಡೆಗಳು ಮತ್ತು ಸಲ್ವಾಜುಡುಂ ಸದಸ್ಯರು ದಾಳಿಯಿಟ್ಟರು. ಘಟನೆಯ ನೇರ ಸಾಕ್ಷಿಯೊಬ್ಬ ಹ್ಯೂಮನ್‌ರೈಟ್ಸ್ ವಾಚ್‌ಗೆ ತಿಳಿಸುವಂತೆ ದಾಳಿಕೋರರು ಯಾವುದೇ ಮುನ್ನೆಚ್ಚರಿಕೆಯಿಲ್ಲದೆ ಗ್ರಾಮವನ್ನು



ಸಲ್ವಾ ಜುಡಂ ಶಿಬಿರದಲ್ಲಿ ಸೇರಿರುವ ಜನರು



ಸಲ್ವಾಜುಡುಂ
ಶಿಬಿರದಲ್ಲಿ ಬಾಲಕರು

ಪ್ರವೇಶಿಸಿದ್ದರು. ಅವರು ಗ್ರಾಮಸ್ಥರನ್ನು ಬಡಿಯುವುದಕ್ಕೆ ಆರಂಭಿಸಿದರು ಮತ್ತು ಅವರ ಆಸ್ತಿಪಾಸ್ತಿಗಳನ್ನು ಕೊಳ್ಳೆ ಹೊಡೆದರು. ಸಲ್ವಾ ಜುಡುಂ ಸದಸ್ಯರು ಮತ್ತು ಸರಕಾರಿ ಭದ್ರತಾ ಸಿಬ್ಬಂದಿಗಳು ಗ್ರಾಮದ ಎಲ್ಲಾ 50 ಮನೆಗಳನ್ನು ಸುಟ್ಟು ಹಾಕಿದರು.

ಘಟನೆಯ ಪ್ರತ್ಯಕ್ಷದರ್ಶಿಯೊಬ್ಬ ಹೇಳುವಂತೆ ಅವರು ಗ್ರಾಮದ 15 ಮಂದಿಯನ್ನು ಕೊಂದು ಹಾಕಿದ್ದರು. ಅವರಲ್ಲಿ ಐವರು ಮಹಿಳೆಯರು ಮತ್ತು 10 ಮಂದಿ ಪುರುಷರು. ಒಬ್ಬ ಮಹಿಳೆಯನ್ನೊಳಗೊಂಡಂತೆ ಐವರ ಕತ್ತನ್ನು ಸೀಳಲಾಗಿತ್ತು. ಪ್ರತ್ಯಕ್ಷದರ್ಶಿ ಹೇಳುವಂತೆ ಈ ಐವರನ್ನು ಚೆನ್ನಾಗಿ ತಿಳಿದಿದ್ದೆ. ವಾಸ್ತವದಲ್ಲಿ ಅವರನ್ನು ಕೊಲ್ಲುವುದಕ್ಕೆ ಯಾವುದೇ ಕಾರಣಗಳಿರಲಿಲ್ಲ. ಅಲ್ಲದೆ ದಾಳಿಕೋರರು ಸುಮಾರು 13ರ ಹರೆಯದ ಉಂಗಿ ಎಂಬ ಹೆಸರಿನ ಬಾಲಕಿಯನ್ನು ಅತ್ಯಾಚಾರಗೈದು ಕೊಂದು ಹಾಕಿದರು. ಮತ್ತೊಬ್ಬಳು ಹುಡುಗಿಯ ಮೇಲೆ ಸರಣಿ ಅತ್ಯಾಚಾರ ನಡೆಸಿದರು. ನಂತರ ಆಕೆಯನ್ನು ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿಯೂ ಅತ್ಯಾಚಾರಗೈದು ನಂತರ ಬಿಡುಗಡೆಗೊಳಿಸಲಾಯಿತು.

ದಾಳಿಕೋರರು ಗ್ರಾಮವನ್ನು ತೊರೆಯುವಾಗ ನಾಲ್ವರು ಪುರುಷರನ್ನು ಮತ್ತು 10 ಮಂದಿ ಮಹಿಳೆಯರನ್ನು ಬಲವಂತದಿಂದ ಕರೆದುಕೊಂಡು ಹೋಗಿದ್ದರು. ಮಹಿಳೆಯರು ಕೆಲವು ಸಮಯಗಳ ನಂತರ ಗ್ರಾಮಕ್ಕೆ ಮರಳಿದ್ದಾರೆ. ಆದರೆ ಪುರುಷರ ಕಥೆ ಏನು ಎಂಬುದರ ಬಗ್ಗೆ ಇದುವರೆಗೆ ಯಾರಿಗೂ ಅರಿವಿಲ್ಲ. ಇವೆಲ್ಲಾ ಸಲ್ವಾ ಜುಡುಂ ಮತ್ತು ಪೊಲೀಸರು ಜಂಟಿಯಾಗಿ ಅಮಾಯಕ ಗ್ರಾಮಸ್ಥರ ಮೇಲೆ ನಡೆಸಿದ ದೌರ್ಜನ್ಯಗಳಿಗೆ ಕೆಲವು ಉದಾಹರಣೆಗಳು ಮಾತ್ರ.

ಇನ್ನು ಪೊಲೀಸರು ಮತ್ತು ಸಲ್ವಾ ಜುಡುಂ ಸದಸ್ಯರ ಕಾಟವನ್ನು ತಾಳಲಾರದೆ ಗ್ರಾಮಸ್ಥರು ಸಲ್ವಾಜುಡುಂ ಪರವಾಗಿ ನಿಲ್ಲುವಂತಿರಲಿಲ್ಲ. ಆಗ ನಕ್ಸಲೈಟರ ಕಡೆಯಿಂದ ಹಿಂಸೆಯನ್ನು ಎದುರಿಸಬೇಕಾಗುತ್ತಿತ್ತು. ಸಲ್ವಾ ಜುಡುಂ ಮತ್ತು ಪೊಲೀಸರನ್ನು ಬೆಂಬಲಿಸಿದ್ದಾರೆ, ಪೊಲೀಸ್ ಮಾಹಿತಿದಾರರಾಗಿದ್ದಾರೆ ಎಂದು ನಕ್ಸಲೈಟರು ಹಲವು ಗ್ರಾಮಸ್ಥರನ್ನು ಕೊಂದಿದ್ದರು. ಥಳಿಸುವ, ಬೆದರಿಸುವ ಮೂಲಕ ಗ್ರಾಮಸ್ಥರು ತಮ್ಮ ಪರವಾಗಿರುವಂತೆ ಬಲವಂತಪಡಿಸುತ್ತಿದ್ದರು. ಜನ್ ಅದಾಲತ್‌ಗಳನ್ನು ನಡೆಸುತ್ತಿದ್ದ ನಕ್ಸಲೈಟರು ಶಂಕಿತ ಪೊಲೀಸ್ ಮಾಹಿತಿದಾರರು ಮತ್ತು ದೇಶಭ್ರಷ್ಟರೆಂದು ಹೇಳಲಾಗುವವರನ್ನು ಇಲ್ಲಿ ಶಿಕ್ಷೆ ಜಾರಿ ಮಾಡುತ್ತಿದ್ದರು. ಸ್ಥಿತಿವಂತ ಭೂ ಹಿಡುವಳಿದಾರರನ್ನು ಮತ್ತು ಗ್ರಾಮದ ನಾಯಕರನ್ನು ಇಂತಹ ಅದಾಲತ್‌ಗಳ ಮುಂದೆ ತರಲಾಗುತ್ತಿತ್ತು. ಅವರ ಆಸ್ತಿಯ ಒಂದು ಭಾಗವನ್ನು ಬಡವರಿಗೆ ನೀಡುವಂತೆ ಹೇಳಲಾಗುತ್ತಿತ್ತು.

ಗ್ರಾಮದ ಜನರಿಂದ ಆಹಾರ ಮತ್ತು ಹಣವನ್ನು ನೀಡುವಂತೆ ನಕ್ಸಲೈಟರು ಆಗಾಗ ಒತ್ತಾಯಿಸುತ್ತಿದ್ದರು. ಸಲ್ವಾ ಜುಡುಂನಲ್ಲಿದ್ದಾರೆಂದು ಶಂಕಿಸಲಾಗುವ ಅಥವಾ ಪೊಲೀಸರನ್ನು ಬೆಂಬಲಿಸುವವರನ್ನು ನಿರ್ದಾಕ್ಷಿಣ್ಯವಾಗಿ ಬರ್ಬರವಾಗಿ ಹತ್ಯೆಗಯ್ಯಲಾಗುತ್ತಿತ್ತು. ನಕ್ಸಲೈಟರು ಮಕ್ಕಳನ್ನು ಸೇನಾ ಕಾರ್ಯಾಚರಣೆಗಳಿಗೆ ಮತ್ತು ಮಾಹಿತಿದಾರರಾಗಿ ಬಳಸುತ್ತಿದ್ದರು. ಪೊಲೀಸರಿಂದ ಸಲ್ವಾ ಜುಡುಂ ಕ್ಯಾಂಪ್‌ಗಳಿಗೆ ಬಲವಂತದಿಂದ ಸೇರಿಸಲ್ಪಟ್ಟವರು ನಕ್ಸಲೈಟರ ಕ್ರೋಧಕ್ಕೆ ಗುರಿಯಾಗುತ್ತಿದ್ದರು. ಅವರು ಕ್ಯಾಂಪನ್ನು ತೊರೆದು ಗ್ರಾಮಕ್ಕೆ ಮರಳಿದರೆ ನಕ್ಸಲೈಟರಿಂದ ಹತ್ಯೆಗಯ್ಯಲ್ಪಡುತ್ತಿದ್ದರು. ನಕ್ಸಲೈಟರು ಮತ್ತು ಸಲ್ವಾ ಜುಡುಂ ನಡುವೆ ತಟಸ್ಥವಾಗಿರಲು ಬಯಸುವ ಗ್ರಾಮಸ್ಥರು ಎರಡೂ ಕಡೆಗಳ ಕೆಂಗಣ್ಣಿಗೆ ಗುರಿಯಾಗುತ್ತಿದ್ದರು.

ಛತ್ತೀಸ್‌ಗಢದಲ್ಲಿ ಮಾತ್ರವಲ್ಲ, ಪೊಲೀಸರು ತಮ್ಮ ಪ್ರಯೋಜನಕ್ಕಾಗಿ ಜನರನ್ನು ಮಾಹಿತಿದಾರರನ್ನಾಗುವಂತೆ ಬಲವಂತಪಡಿಸಿದ ಹಾಗೂ ಅದನ್ನು ನಿರಾಕರಿಸಿದವರನ್ನು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ ಹಲವು ನಿದರ್ಶನಗಳು ಇವೆ. ಇದು ಪೊಲೀಸರ ಮೇಲೆ ಪ್ರಜೆಗಳಿಗೆ ನಂಬಿಕೆಯನ್ನು ಕಳೆದುಕೊಳ್ಳಲು ಕೆಲವು ಕಾರಣಗಳಲ್ಲೊಂದು. ಪೊಲೀಸರು ಎಂದ್ದಾಕ್ಷಣ ಪ್ರಜೆಗಳಿಗೆ ರಕ್ಷಣಾ ಭಾವನೆಯುಂಟಾಗಬೇಕೆ ಹೊರತು ಭೀತಿಯಲ್ಲ.

ಈಗ ಸಲ್ವಾ ಜುಡುಂಅನ್ನು ಸಂವಿಧಾನಬಾಹಿರವೆಂದು ಘೋಷಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಪ್ರಜಾಪ್ರಭುತ್ವವನ್ನು ಎತ್ತಿಹಿಡಿದಿದೆ. ಛತ್ತೀಸ್‌ಗಢ ಸರಕಾರವು ಕೂಡಲೇ ರಾಜ್ಯದಲ್ಲಿ ಸಲ್ವಾ ಜುಡುಂಅನ್ನು ರದ್ದುಗೊಳಿಸಬೇಕಾಗಿದೆ.

# ದೇವಾಲಯ, ಸ್ವಾಮೀಜಿಗಳ ಶ್ರೀಮಂತಿಕೆಯೂ ದೇಶದ ಬಡತನವೂ

● ದೇವರಾಜ್, ಮಡಿಕೇರಿ



''ಭಾರತದ ದೇವಾಲಯಗಳು ಸ್ವಿಸ್ ಬ್ಯಾಂಕ್‌ಗಳಂತೆ ಕಾರ್ಯಾಚರಿಸುತ್ತಿವೆಯೇ?'' ಇಂತಹ ಒಂದು ಸಂದೇಹ ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರು ತಲೆ ಕೆರೆದುಕೊಳ್ಳುವಂತೆ ಮಾಡಿದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಹಲವು ದೇವಾಲಯಗಳು, ಮಠಗಳು ಸಂಪತ್ತಿನ ಹೆಸರಿನಲ್ಲಿ ಹೆಚ್ಚು ಹೆಚ್ಚು ಚರ್ಚೆಗೆ ಗ್ರಾಸವಾಗುತ್ತಿವೆ. ಅದು ತಿರುವನಂತಪುರಂನ ಅನಂತಪದ್ಮನಾಭ ದೇವಾಲಯವಾಗಿರಬಹುದು ಅಥವಾ ತಿರುಪತಿ ದೇವಾಲಯವಾಗಿರಬಹುದು ಹೀಗೆ ಒಂದರ ಹಿಂದೆ ಒಂದು ದೇವಾಲಯಗಳು ಶ್ರೀಮಂತಿಕೆಗಾಗಿ ಪೈಪೋಟಿಯಲ್ಲಿರುವಂತೆ ಕಂಡು ಬರುತ್ತಿದೆ.

ಒಂದೊಮ್ಮೆ ತಿರುಪತಿ ದೇವಸ್ಥಾನವನ್ನು ದೇಶದಲ್ಲಿ ಮಾತ್ರವಲ್ಲ ಪ್ರಪಂಚದಲ್ಲೇ ಶ್ರೀಮಂತ ದೇವಸ್ಥಾನ ಎಂದು ಕರೆಯಲಾಗುತ್ತಿತ್ತು. ಆದರೆ ಕೇರಳದ ಅನಂತ ಪದ್ಮನಾಭ ದೇವಾಲಯದಲ್ಲಿ ಪತ್ತೆಯಾದ ನಿಧಿಯ ಮೌಲ್ಯ ದಿನೇ ದಿನೇ ಏರುತ್ತಲೇ ಹೋಗುತ್ತಿರುವುದರಿಂದ ಶ್ರೀಮಂತಿಕೆಯಲ್ಲಿ ಈ ದೇವಸ್ಥಾನವು ನಂ.1 ಸ್ಥಾನ ಪಡೆಯುವ ಮುನ್ಸೂಚನೆಗಳು ದೊರೆತಿವೆ. ಅಂದರೆ ಇಲ್ಲಿ ದೊರೆತಿರುವ ನಿಧಿಯ ಮೊತ್ತವನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಈಗಾಗಲೇ ದೊರೆತಿರುವ ಮಾಹಿತಿಗಳ ಪ್ರಕಾರ 1 ಲಕ್ಷ ಕೋಟಿ ಮೌಲ್ಯದ ವಜ್ರ ವೈಢೂರ್ಯಗಳು, ಚಿನ್ನಾಭರಣಗಳಿಂದ ಕೂಡಿದ ನಿಧಿ ಪತ್ತೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ರಾಜಕೀಯದೊಂದಿಗೆ ಮಠ, ದೇವಸ್ಥಾನ, ಸ್ವಾಮೀಜಿಗಳು ಬಹು ಚರ್ಚಿತ ವಿಷಯಗಳಾಗಿವೆ. ಕೆಲವು ದಿನಗಳ ಪುಟ್ಟಪರ್ತಿಯ ಸಾಯಿಬಾಬಾ ಚರ್ಚೆಯಲ್ಲಿದ್ದರೆ, ಅನಂತರದ ಕೆಲವು ದಿನಗಳಲ್ಲಿ ಬಾಬಾ ರಾಮ್‌ದೇವ್ ಚರ್ಚೆಯಲ್ಲಿದ್ದರು. ಆ ಬಳಿಕ ಧರ್ಮಸ್ಥಳದ ಮಂಜುನಾಥ ದೇವಸ್ಥಾನ ಚರ್ಚೆಯಲ್ಲಿದ್ದರೆ ಇದೀಗ ತಿರುವನಂತಪುರದ ಅನಂತಪದ್ಮನಾಭ ದೇವಸ್ಥಾನ ಬಹು ಚರ್ಚೆಯಲ್ಲಿವೆ.

ಇವುಗಳೆಲ್ಲವುಗಳು ಧಾರ್ಮಿಕ ವಿಷಯಗಳಲ್ಲಿ ಬಹು ದೊಡ್ಡ ಸಾಧನೆ ಮಾಡಿ ಬಹು ಚರ್ಚೆಯಲ್ಲಿರುವುದಲ್ಲ. ಬದಲಾಗಿ ಸಂಪತ್ತಿನ ಮೂಲಕ. ಅಗಾಧವಾದ ಸಂಪತ್ತನ್ನು ಕ್ರೋಢೀಕರಿಸಿಕೊಂಡು ಹೊರ ಜಗತ್ತಿಗೆ ಯಾವುದೇ ಸುಳಿವು ನೀಡದೆ ಬೆಳೆಯುತ್ತಾ ಹೋಗುತ್ತಿವೆ. ಪುಟ್ಟಪರ್ತಿಯ ಸಾಯಿ ಬಾಬಾ 1000 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದರು.

44ನೇ ಪುಟಕ್ಕೆ

# ಮಂತ್ರಿಯ ದುರಾಸೆ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಆತನಿಗೆ ಸಮುದ್ರದ ಮೀನು ತಿನ್ನುವುದು ತುಂಬಾ ಇಷ್ಟವಾಗಿತ್ತು. ಒಮ್ಮೆ ಸಮುದ್ರದಲ್ಲಿ ಭಾರೀ ಚಂಡ ಮಾರುತ ಎದ್ದಿತು. ಇದರಿಂದಾಗಿ ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆಗೆ ಹೋಗಲು ಹಿಂದರಿದರು. ಹೀಗೆ ರಾಜನಿಗೆ ತಿನ್ನಲು ಮೀನುಗಳು ದೊರಕಲಿಲ್ಲ.

ಇದರಿಂದ ನಿರಾಶನಾದ ರಾಜ ಸಮುದ್ರದಲ್ಲಿ ಹೋಗಿ ಮೀನು ಹಿಡಿಕೊಂಡು ಬಂದವರಿಗೆ ಬಹುಮಾನಗಳನ್ನು ನೀಡುವುದಾಗಿ ಘೋಷಿಸಿದ. ಇದು ಮೀನುಗಾರನೊಬ್ಬನ ಕಿವಿಗೆ ಬಿತ್ತು. ಆತ ತನ್ನ ಪ್ರಾಣವನ್ನು ಪಣಕ್ಕಿಟ್ಟು ಸಮುದ್ರ ಹೋಗಿ ಕೆಲವೊಂದು ಮೀನುಗಳನ್ನು ಹಿಡಿದುಕೊಂಡು ಬಂದ.

ಆತ ರಾಜನ ಆಸ್ಥಾನವನ್ನು ಪ್ರವೇಶಿಸುತ್ತಿದ್ದಂತೆ ಕಾವಲುಗಾರ ಆತನನ್ನು ತಡೆದ. ಬಳಿಕ ಅಲ್ಲಿಗೆ ಆಗಮಿಸಿದ ಮಂತ್ರಿ ತಾನು ಖಂಡಿತಾ ನಿನ್ನನ್ನು ರಾಜನ ಬಳಿಗೆ ಹೋಗಲು ಅನುಮತಿ ನೀಡುವೆನು. ಆದರೆ ನಿನಗೆ ರಾಜ ನೀಡುವ ಬಹುಮಾನದಲ್ಲಿ ಅರ್ಧಪಾಲನ್ನು ನನಗೆ ಕೊಡಬೇಕು ಎಂದು ಹೇಳಿದ. ಮಂತ್ರಿಯ ಮಾತು ಮೀನುಗಾರನಿಗೆ ಹಿಡಿಸಲಿಲ್ಲ. ಆದರೂ ಮೀನುಗಾರ ಮಂತ್ರಿಯ ಮಾತನ್ನು ಒಪ್ಪಿಕೊಂಡ.

ಮೀನುಗಾರ ಮೀನನ್ನು ರಾಜನ ಬಳಿಗೆ ಕೊಂಡು ಹೋದ. ರಾಜ ಇದರಿಂದ ತುಂಬಾ ಸಂತುಷ್ಟನಾದ. ನಿನಗಿಷ್ಟವಾದ ಬಹುಮಾನವನ್ನು ಕೇಳಿ ಪಡೆದುಕೊ ಎಂದು ರಾಜ ಆ ಮೀನುಗಾರನಲ್ಲಿ ಕೇಳಿದ. ಅದಕ್ಕೆ ಆತ ನನಗೆ 100 ಚಾಟಿ ಏಟು ಬೇಕು ಎಂದು ಕೇಳಿದ. ಮೀನುಗಾರನ ಈ ವಿಚಿತ್ರ ಮಾತನ್ನು ಕೇಳಿ ಆಸ್ಥಾನದಲ್ಲಿ ಕುಳಿತಿದ್ದವರೆಲ್ಲರೂ ದಂಗಾದರು.



ಹೀಗೆ ಮೀನುಗಾರನ ಕೋರಿಕೆಯಂತೆ ಆತನಿಗೆ ರಾಜಭಟರು ಚಾಟಿ ಏಟು ನೀಡಲಾರಂಭಿಸಿದರು. ರಾಜನ ಸೂಚನೆಯ ಮೇರೆ ಆತನಿಗೆ ಮೃದುವಾಗಿ ಹೊಡೆಯಲಾಯಿತು. 50 ಚಾಟಿ ಏಟು ತಿಂದ ಬಳಿಕ ನಿಲ್ಲಿಸಿ ಇನ್ನು ಉಳಿದ 50 ಚಾಟಿ ಏಟನ್ನು ನನ್ನ ಪಾಲುದಾರನಿಗೆ ಕೊಡಿ ಎಂದು ಮೀನುಗಾರ ಹೇಳಿದ. ಅದಕ್ಕೆ ರಾಜ ಯಾರು ನಿನ್ನ ಪಾಲುದಾರ ಎಂದು ಕೇಳಿದಾಗ ನಿಮ್ಮ ಮಂತ್ರಿ ಮಹೋದಯರು ಎಂದು ಮೀನುಗಾರ ಉತ್ತರಿಸಿದ.

ಇದರಿಂದ ಕೋಪಗೊಂಡ ರಾಜ ಮಂತ್ರಿಗೆ ತುಂಬಾ ಜೋರಾಗಿ ಚಾಟಿ ಏಟು ನೀಡಿದ್ದಲ್ಲದೆ, ಆತನನ್ನು ಜೈಲಿಗೆ ತಳ್ಳಿದ. ಆ ಬಳಿಕ ಮೀನುಗಾರನಿಗೆ ಅನೇಕ ಬಹುಮಾನಗಳನ್ನು ಕೊಟ್ಟು ಕಳುಹಿಸಿದ.

**ಫರ್ಹಾನ್, ಮಡಿಕೇರಿ**

## ಕ್ವಿಝ್ ಟೈಮ್-11 ಇತಿಹಾಸ, ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡಾಲೋಕ

1. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ಯಾವ ಪತ್ರಿಕೆ ಆರಂಭಿಸಿದರು?
2. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಆರಂಭವಾದ ವರ್ಷ ಯಾವುದು?
3. ಭಾರತೀಯ ಜ್ಞಾನಪೀಠ ಪ್ರಶಸ್ತಿ ಸ್ಥಾಪಿಸಿದವರು ಯಾರು?
4. ಯಾವ ಭಾರತೀಯ ನಾಟಕಕಾರಾರ ತುಘಲಕ್ ನಾಟಕವನ್ನು ಬರೆದಿದ್ದಾರೆ?
5. ಜಗತ್ಪ್ರಸಿದ್ಧ ವಾಸ್ತು ತಾಜ್‌ಮಹಲ್ ಭಾರತದ ಯಾವ ನಗರದಲ್ಲಿದೆ?
6. ಚೀನಾದ ಮಹಾಗೋಡೆ ಎಷ್ಟು ಉದ್ದವಿದೆ?
7. ಬೆಳಕಿನ ತೀವ್ರತೆಯನ್ನು ಅಳೆಯಲು ಯಾವ ಉಪಕರಣವನ್ನು ಉಪಯೋಗಿಸುತ್ತಾರೆ?
8. ಇಂದಿಗೂ ಬಳಸಲಾಗುತ್ತಿರುವ ಪ್ರಾಚೀನ ಗಣಿತ ಸಾಧನ ಯಾವುದು?
9. ಯಾವ ಪಾಕಿಸ್ತಾನಿ ಕ್ರಿಕೆಟಿಗನ ಆತ್ಮಕಥೆ 'ಜೆದ್' ಎಂದು ಇದೆ?
10. ಭಾರತದ ಅತ್ಯಂತ ದೊಡ್ಡ ಒಳಾಂಗಣ ಕ್ರೀಡಾಂಗಣ ಯಾವುದು?

ಉತ್ತರಗಳು: ಪುಟ ಸಂಖ್ಯೆ- 53ರಲ್ಲಿ

### ಕಾಲ ಹರಣ

ದಿನಾ ಬಯಲಾಗುತಿದೆ
ಜನಪ್ರತಿನಿಧಿಗಳ ನೂರೆಂಟು
'ಹಗರಣ'
ಧ್ವನಿ ಎತ್ತ ಬೇಕಾಗಿದೆ
ಪ್ರತಿಯೊಬ್ಬ ನಾಗರಿಕ
ಆದರೂ
ಇದು ತನಗೆ ಸಂಬಂಧಿಸಿದುದಲ್ಲ
ಅನ್ನುತ್ತಲೇ ಮಾಡುತ್ತಿದ್ದೇವೆ
'ಕಾಲ ಹರಣ'

# ರಾಜನ ಉಪಾಯ

ಒಬ್ಬ ಬಡವ ದೂರದ ಊರಿಗೆ ಯಾತ್ರೆಗೆ ಹೋಗುವುದಕ್ಕಿಂತ ಮೊದಲು ತನ್ನ ಬಳಿಯಿದ್ದ ಒಂದು ಸಾವಿರ ರೂ.ಯನ್ನು ಒಬ್ಬ ಧನಿಕನಲ್ಲಿ ತೆಗೆದಿಡಬೇಕೆಂದು ಹೇಳಿ ಕೊಟ್ಟು ಹೋದ. ಆದರೆ ಆ ಬಡವ ಧನಿಕನ ಬಳಿ ಹಣ ನೀಡಿದ್ದಕ್ಕೆ ಯಾವುದೇ ರಶೀದಿಯನ್ನು ಪಡೆಯಲಿಲ್ಲ ಅಥವಾ ಯಾರನ್ನೂ ಸಾಕ್ಷಿದಾರರನ್ನಾಗಿ ಮಾಡಲಿಲ್ಲ. 3 ಮೂರು ತಿಂಗಳು ಕಳೆದ ನಂತರ ಆ ಬಡವ ಹಿಂದಿರುಗಿ ಬಂದ ಮತ್ತು ಧನಿಕನಲ್ಲಿ ತಾನು ನೀಡಿದ್ದ ಹಣವನ್ನು ಹಿಂದಿರುಗಿಸಬೇಕೆಂದು ಕೇಳಿಕೊಂಡ.

ಆದರೆ ಆ ಧನಿಕ ನೀನು ಯಾವುದೇ ಹಣವನ್ನು ತನ್ನ ಬಳಿ ನೀಡಿಲ್ಲ ಎಂದು ಬಡವನಲ್ಲಿ ಹೇಳಿದ. ಹೀಗೆ ಪ್ರತಿದಿನ ಆ ಬಡವ ಧನಿಕನ ಮನೆಗೆ ಹೋಗಿ ಹಣ ಕೇಳುತ್ತಾ ಸಂಜೆಯವರೆಗೆ ಅಲ್ಲಿಯೇ ಕುಳಿತಿರುತ್ತಿದ್ದ.



ಯಾವುದೇ ಕಾರಣಕ್ಕೂ ಧನಿಕ ಮಾತ್ರ ಬಡವನಿಂದ ಹಣ ಪಡೆದುಕೊಂಡಿದ್ದನ್ನು ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ.

ಇದರಿಂದ ರೋಸಿ ಹೋದ ಬಡವ ಸಮಸ್ಯೆಯನ್ನು ರಾಜನ ಬಳಿಗೆ ಕೊಂಡು ಹೋದ. ತಾನು ಯಾವುದೇ ಭದ್ರತೆ ಪಡೆಯದೇ ಹಾಗೂ ಯಾವುದೇ ರಶೀದಿಯನ್ನು ಪಡೆಯದೇ ಸಾಹುಕಾರನಲ್ಲಿ ಯಾತ್ರೆಗೆ ಹೋಗುವುದಕ್ಕಿಂತ ಮೊದಲು ಒಂದು ಸಾವಿರ ರೂ.ಯನ್ನು ನೀಡಿದ್ದೆ. ಆದರೆ ಇದೀಗ ಅದನ್ನು ಹಿಂದಿರುಗಿಸು ಎಂದು ಕೇಳಿಕೊಂಡಾಗ ಅದನ್ನು ಆತ ನಿರಾಕರಿಸುತ್ತಿದ್ದಾನೆ. ಆತ ನನ್ನ ಹಣವನ್ನು ಹಿಂದಿರುಗಿಸುವಂತೆ ಮಾಡಿ ಎಂದು ರಾಜನಲ್ಲಿ ಬಡವ ವಿನಂತಿಸಿಕೊಂಡ. ಇದೀಗ ಯಾವುದೇ ಕಾಯ್ದೆ, ಕಾನೂನುಗಳು ಆ ಧನಿಕನಿಗೆ ಅನ್ವಯಿಸಲಾರದು ಎಂದು ರಾಜ ಬಡವನಲ್ಲಿ ಹೇಳಿದ.

ಆದರೂ ಒಂದು ತಂತ್ರ ಇದೆ. ತಾನು ಸವಾರಿಗೆ ಹೋಗುವ ಸಂದರ್ಭದಲ್ಲಿ ಮಧ್ಯಾಹ್ನದ ಹೊತ್ತಿಗೆ ಆ ಧನಿಕನ ಅಂಗಡಿಯ ಬಳಿಗೆ ಬರುವೆ. ನೀನು ಅಲ್ಲಿ ಹಾಜರಿರಬೇಕು. ತಾನು ನಿನಗೆ ಬಾಗಿ ಗೌರವಿಸುವೆ. ನೀನು ಇದಕ್ಕೆ ಉತ್ತರಿಸಬೇಕು. ಹಾಗೆಯೇ ತಾನು ನಿನ್ನ ಬಳಿ ಮಾತನಾಡುವೆ. ಅದಕ್ಕೆ ನೀನು ಮಾಮೂಲಿ ಸ್ನೇಹಿತರಂತೆ ಉತ್ತರಿಸಬೇಕು.

ರಾಜನ ಸಲಹೆಯಂತೆ ಬಡವ ಅರ್ಧ ಗಂಟೆ ಮುಂಚೆಯೇ ಹೋಗಿ ಆ ಧನಿಕನ ಅಂಗಡಿಯಲ್ಲಿ ಕುಳಿತುಕೊಂಡ. ಕೆಲವು ಸಮಯದ ನಂತರ ಅಲ್ಲಿಗೆ ಆಗಮಿಸಿದ ರಾಜ ಬಡವನಿಗೆ ಬಾಗಿ ಗೌರವಿಸಿದ. ಅದಕ್ಕೆ ಬಡವ ಮಾಮೂಲಿ ಸ್ನೇಹಿತನಂತೆ ಪ್ರತಿಕ್ರಿಯಿಸಿದ. ಬಳಿಕ ರಾಜ ಬಡವನ ಕೈಯನ್ನು ಚುಂಬಿಸಿ ನೀವು ಯಾವಾಗ ಇತ್ತ ಕಡೆ ಬಂದಿರಿ, ನಾನಂತೂ ತುಂಬಾ ದಿನಗಳಿಂದ ನಿಮ್ಮನ್ನು ನೆನಪಿಸುತ್ತಿದ್ದೆ ಎಂದು ಕೇಳಿದ.

ತಾನು ಬಂದು ಒಂದು ವಾರ ಕಳೆದಿದೆ. ಹೀಗೆ ಬಂದು ತಾನೊಂದು ಸಮಸ್ಯೆಯಲ್ಲಿ ಸಿಲುಕಿಕೊಂಡಿದ್ದೇನೆ. ಈ ಸಮಸ್ಯೆ ಪರಿಹಾರವಾದ ಕೂಡಲೇ ತಾನು ಅತ್ತ ಕಡೆ ಬರುವೆ ಎಂದು ಬಡವ ಹೇಳಿದ. ಅದಕ್ಕೆ ರಾಜ ನನ್ನಿಂದ ಏನಾದರೂ ನಿಮಗೆ ನೆರವು ಬೇಕಿತ್ತೇ ಎಂದು ಕೇಳಿದ. ನಿಮ್ಮ ಮತುಗಳನ್ನು ಕೇಳಿ ತುಂಬಾ ಸಂತೋಷವಾಯಿತು. ಅಗತ್ಯವಿದ್ದರೆ ನಿಮ್ಮನ್ನು ನಾನು ಸಂಪರ್ಕಿಸುತ್ತೇನೆ ಎಂದು ಬಡವ ಹೇಳಿದ.

ಇದರಿಂದ ಹೆದರಿದ ಧನಿಕ ಆ ಬಡವನ ಹಣವನ್ನು ಹಿಂದಿರುಗಿಸಿ, ಈ ವಿಚಾರವನ್ನು ಯಾವುದೇ ಕಾರಣಕ್ಕೂ ರಾಜನ ಬಳಿ ಹೇಳಿದಿರಿ ಎಂದು ವಿನಂತಿಸಿಕೊಂಡ. ಹೀಗೆ ಯಾವುದೇ ವ್ಯಾಜ್ಯಗಳಿಲ್ಲದೆ ರಾಜನು ಬಡವನ ಸಮಸ್ಯೆಯನ್ನು ಬಗೆಹರಿಸಿದ.

## ಎಚ್ಚರಿಕೆ...

# ಹದಿಹರೆಯದವರ ತಂಬಾಕು ಸೇವನೆಗೆ ಚಿತ್ರನಟರು ಪ್ರೇರಣೆ!



ವಾಸ್ತವಿಕ ಜೀವನದಲ್ಲಿ ತಂಬಾಕು ಸೇವನೆಗಿಂತ ಹದಿಹರೆಯದವರಿಗೆ ಚಿತ್ರನಟರನ್ನು ಪರದೆಯಲ್ಲಿ ಸಿಗರೇಟ್ ಸೇವನೆಯ ಸಂದರ್ಭ ವೀಕ್ಷಿಸುವುದು ತುಂಬಾ ಅಪಾಯಕಾರಿಯಾಗಿದೆ. ಬಾಲಿವುಡ್ ಮತ್ತು ಹುಡುಗರಲ್ಲಿ ತಂಬಾಕು ಸೇವನೆಯ ಬಗ್ಗೆ ಅರಿಯಲು ಮಾಡಿದ ಒಂದು ಅಧ್ಯಯನದಿಂದ ಈ ವಿಷಯ ತಿಳಿದು ಬಂದಿದೆ.

'ಹೆಲ್ತ್ ರಿಲೇಟೆಡ್ ಇಂಫರ್ಮೇಶನ್ ಎಮೋಂಗ್‌ಸ್ಟ್ ಯೂಥ್' (ಎಚ್‌ಆರ್‌ಐಡಿಎವೈ) ಎಂಬ ಸರಕಾರೇತರ ಸಂಸ್ಥೆ ನಡೆಸಿದ ಈ ಸಂಶೋಧನೆಯಲ್ಲಿ ಈ ಮಾಹಿತಿಯನ್ನು ಬಹಿರಂಗಪಡಿಸಲಾಗಿದೆ. ಒಬ್ಬ ವಿದ್ಯಾರ್ಥಿಯು ಟಿವಿ ಪರದೆಯ ಮೇಲೆ ತನ್ನ ಇಷ್ಟದ ನಟನನ್ನು ಧೂಮಪಾನ ಮಾಡುವ ಸಂದರ್ಭ ನೋಡುತ್ತಾನೆಯೋ ಆತ ತನ್ನ ವಾಸ್ತವಿಕ ಜೀವನದಲ್ಲಿ ಸಾಮಾನ್ಯ ರೂಪದಲ್ಲಿ ಧೂಮಪಾನ ಮಾಡುವ ವಿದ್ಯಾರ್ಥಿಗಿಂತ ದುಪ್ಪಟ್ಟು ಧೂಮಪಾನ ಮಾಡುತ್ತಾನೆ.

ದಿಲ್ಲಿಯ 12 ಶಾಲೆಯ ಸಮೀಪ 4000 ವಿದ್ಯಾರ್ಥಿಗಳನ್ನು ಈ ಸಂಶೋಧನೆಗೆ ಒಳಪಡಿಸಲಾಯಿತು. ವಿದ್ಯಾರ್ಥಿಗಳು ವರ್ತಮಾನದಲ್ಲೂ ತಂಬಾಕು ಸೇವನೆ ಮಾಡುತ್ತಾರೆಯೋ ಅಥವಾ ಯಾವಾಗಲೂ ಈ ರೀತಿ ಮಾಡುತ್ತಾರೆಯೇ ಎಂಬುದನ್ನು ಪತ್ತೆ ಹಚ್ಚಲು ಕೂಡ ಸಂಶೋಧನೆಯಲ್ಲಿ ಪ್ರಯತ್ನಿಸಲಾಗಿದೆ.

ವಿದ್ಯಾರ್ಥಿಗಳು ತಂಬಾಕು ಸೇವನೆಗೆ ಸಂಬಂಧಿಸಿದ ಜಾಹೀರಾತುಗಳನ್ನು ವೀಕ್ಷಿಸುತ್ತಾರೆಯೇ ಅಥವಾ ಚಲನಚಿತ್ರಗಳಲ್ಲಿ ತಂಬಾಕು ಸೇವನೆಯನ್ನು ನೋಡುತ್ತಾರೆಯೇ ಎಂಬುದನ್ನು ಕೂಡ ಗಮನಿಸಲಾಗಿದೆ. ವಿಶ್ವದಲ್ಲಿ ಅತಿ ಹೆಚ್ಚು ಚಿತ್ರಗಳನ್ನು ನಿರ್ಮಿಸುವ ಬಾಲಿವುಡ್‌ನ ಪೂರ್ವದಲ್ಲಿ ತಂಬಾಕು ಸೇವನೆಯನ್ನು ಏರಿಸಲು ಆಲೋಚನೆ ನಡೆದಿತ್ತು. 2005ರಿಂದ ಹೊಸ ಚಿತ್ರ ಮತ್ತು ಟಿವಿಗಳಲ್ಲಿ ಧೂಮಪಾನದ ದೃಶ್ಯಗಳನ್ನು ಪ್ರಸಾರ ಮಾಡಲು ನಿರ್ಬಂಧಿಸಲಾಗಿತ್ತು.

ಪ್ರಸಿದ್ಧ ನಿರ್ಮಾಪಕರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒತ್ತಿ ಹೇಳುತ್ತಾ ಚಿತ್ರಗಳಲ್ಲಿ ಧೂಮಪಾನವನ್ನು ಪ್ರಸಾರ ಮಾಡದಂತೆ ಹೇಳಿದ ತೀರ್ಪನ್ನು ಆಕ್ಷೇಪಿಸಿದ್ದರು. ಇದು ಈಗ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿದೆ.

ಮುಖ್ಯ ಅಧ್ಯಯನಕರ್ತೆ ಮೋನಿಕಾ ಅರೋಡಾ ಐಎಎನ್‌ಎಸ್‌ನೊಂದಿಗೆ ಮಾತನಾಡುತ್ತಾ ''ಈ ಅಧ್ಯಯನದಲ್ಲಿ ಹುಡುಗರು ಸುಮಾರು 59 ಚಿತ್ರಗಳಲ್ಲಿ 162 ಬಾರಿ ತಂಬಾಕು ಸೇವನೆಯನ್ನು ನೋಡಿದ್ದಾರೆ. ಇದರ ಪರಿಣಾಮವಾಗಿ ಹುಡುಗಿಯರಿಗಿಂತ ಹುಡುಗರೇ ಹೆಚ್ಚು ಸಂಪರ್ಕಕ್ಕೆ ಬರುತ್ತಾರೆ.

ತಂಬಾಕು ಉತ್ಪಾದನೆ ನಿಯಂತ್ರಕ ಕಾಯ್ದೆ (ಸಿಓಟಿಪಿಎ)ಯ ಪ್ರಕಾರ ತಂಬಾಕು ಉತ್ಪಾದನೆಯ ಯಾವುದೇ ಪ್ರತ್ಯಕ್ಷ ಮತ್ತು ಪರೋಕ್ಷ ಜಾಹೀರಾತು ಮತ್ತು ಪ್ರಚಾರವನ್ನು ನಿರ್ಬಂಧಿಸಲಾಗಿದೆ. ಆದರೆ ಇದರ ಹೊರತಾಗಿಯೂ ಸುಮಾರು ಶೇ.7.3ರಷ್ಟು ಹುಡುಗರಲ್ಲಿ ಒಂದಲ್ಲ ಒಂದು ರೀತಿಯ ತಂಬಾಕು ಪ್ರಚಾರ ಸಾಮಗ್ರಿ ಇದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಸಹ ಅಧ್ಯಯನಕರ್ತ ಹಾಗೂ ಎಚ್‌ಆರ್‌ಐಡಿಎವೈಯ ವ್ಯವಸ್ಥಾಪಕ ಗೋರಂಗ್ ನರರುಖ್ ಹೇಳುವಂತೆ, ಇದು ಬಾಲಿವುಡ್ ಚಲನಚಿತ್ರ ಮತ್ತು ಹದಿಹರೆಯದವರ ತಂಬಾಕು ಸೇವನೆಗೆ ಸಂಬಂಧಿಸಿ ನಡೆದ ಪ್ರಥಮ ಅಧ್ಯಯನವಾಗಿದೆ.

# ಚಾಲ್ತಿಯಲ್ಲಿರುವ ಬಾಲ್ಯ ವಿವಾಹ

ಫಾತಿಮಾ ನಸ್ರೀನ್
fathimanas09@gmail.com



ಹಿಂದೆ ಸಮಾಜದಲ್ಲಿ ಅನಿಷ್ಠ ಪದ್ಧತಿಗಳಿದ್ದವು. ಧರ್ಮದ ಹೆಸರಿನಲ್ಲಿ ಅನೇಕ ಅನಾಚಾರಗಳು ನಡೆಯುತ್ತಿದ್ದವು. ಅನೇಕ ಮೂಢನಂಬಿಕೆಗಳು ಆಚರಣೆಯಲ್ಲಿದ್ದವು. ಆಯಾಯ ಕಾಲದಲ್ಲಿ ಅದರ ವಿರುದ್ಧ ಕೆಲವೊಂದು ಮಂದಿ ದನಿಯೆತ್ತುತ್ತಿದ್ದರು. ಆದರೆ ಆಚರಿಸುವವರ ಸಂಖ್ಯೆ ಅಧಿಕವಾಗಿದ್ದು, ಬೆರಳೆಣಿಕೆಯಷ್ಟು ಮಂದಿ ಮಾತ್ರ ಅದರ ವಿರುದ್ಧ ಇದ್ದುದರಿಂದ ಅನಿಷ್ಟ ಪದ್ಧತಿಯನ್ನು ಅಷ್ಟು ಸುಲಭವಾಗಿ ತಡೆಗಟ್ಟಲು ಸಾಧ್ಯವಾಗುತ್ತಿರಲಿಲ್ಲ. ಕಾಲಕ್ರಮೇಣ ಜನರಲ್ಲಿ ಪ್ರಜ್ಞಾವಂತಿಕೆ ಮೂಡಿ ಸಮಾಜದ ಅನಿಷ್ಟ ಪದ್ಧತಿಗಳು ಬಹುತೇಕ ನಿರ್ಮೂಲನೆಗೊಂಡವು.

ಹಿಂದೆ ಚಾಲ್ತಿಯಲ್ಲಿದ್ದ ಮತ್ತು ಈಗಲೂ ಚಾಲ್ತಿಯಲ್ಲಿರುವ ಕೆಲವೊಂದು ಸಾಮಾಜಿಕ ಅನಿಷ್ಟ ಪದ್ಧತಿಗಳ ಬಲಿಪಶುಗಳು ಹೆಣ್ಮಕ್ಕಳು ಎಂಬುದು ಗಮನಾರ್ಹ. ಬಾಲ್ಯ ವಿವಾಹವಿರಲಿ, ಸತಿಸಹಗಮನ ಪದ್ಧತಿ ಇರಲಿ, ದೇವದಾಸಿ ಪದ್ಧತಿ ಇರಲಿ ಅಥವಾ ಈಗ ಬಹುವಾಗಿ ಚಾಲ್ತಿಯಲ್ಲಿರುವ ವರದಕ್ಷಿಣೆ, ಮರ್ಯಾದಾ ಹತ್ಯೆಯಾಗಿರಲಿ. ಈ ಎಲ್ಲ ಅನಿಷ್ಟ ಪದ್ಧತಿಗಳ ಬಲಿಪಶುಗಳು ಹೆಣ್ಮಕ್ಕಳು ಎಂಬುದನ್ನು ಗಮನಿಸಬಹುದಾಗಿದೆ.

ಇದೇ ಜುಲೈ ಒಂದರಂದು ಚಿತ್ರದುರ್ಗದ ಕಕ್ಕೇರಹರವು ಎಂಬ ಗ್ರಾಮದಲ್ಲಿ ಬಾಲ್ಯ ವಿವಾಹವೊಂದು ನಡೆಯುತ್ತಿತ್ತು. ಯಾರೋ ಸುದ್ದಿಮುಟ್ಟಿಸಿದ ಬಳಿಕ ಅಥವಾ ದೂರು ನೀಡಿದ ಬಳಿಕ ಅಧಿಕಾರಿಗಳ ತಂಡ ದಾಳಿ ನಡೆಸಿ ಆ ಬಾಲ್ಯ ವಿವಾಹವನ್ನು ತಡೆಯಿತು. ವಿಚಿತ್ರವೆಂದರೆ ಗ್ರಾಮಸ್ಥರು ಅಧಿಕಾರಿಗಳ ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಿದ್ದರು. ಈ ಗ್ರಾಮಸ್ಥರು ಮದುವೆಯ ಔತಣ ತಪ್ಪಿ ಹೋಗುತ್ತಲ್ಲಾ ಎಂಬ ಭೀತಿಯಿಂದ ಅಧಿಕಾರಿಗಳ ಕಾರ್ಯಾಚರಣೆಗೆ ತಡೆಯೊಡ್ಡಿರುವುದಲ್ಲ. ಬದಲಾಗಿ ಅಂತಹ ಒಂದು ಅನಾಚಾರವನ್ನು ಅಲ್ಲಿನ ಗ್ರಾಮಸ್ಥರು ಒಪ್ಪಿಕೊಂಡಿದ್ದಾರೆ.

ಹಾಗಾದರೆ ಇಂತಹ ಬಾಲ್ಯ ವಿವಾಹ ಎಂಬುದು ಇಂದು ಗ್ರಾಮದಲ್ಲಿರುವ ಒಂದೆರಡು ಮನೆಗಳಲ್ಲೋ, ಕುಟುಂಬದಲ್ಲೋ ಕದ್ದು ಮುಚ್ಚಿ ನಡೆಯುವಂತಹ ಅನಾಚಾರವಲ್ಲ. ಇಡೀ ಗ್ರಾಮವೇ ಸಾಮಾಜಿಕ ಅನಿಷ್ಟ ಪದ್ಧತಿಯನ್ನು ಜಾರಿಯಲ್ಲಿರಿಸಿಕೊಂಡಿದೆ ಎಂದಾಯಿತು. ಹಾಗಾದರೆ ನಮ್ಮ ದೇಶದಲ್ಲಿ ಇಂತಹ ಅದೆಷ್ಟು ಗ್ರಾಮಗಳಿರಬಹುದಲ್ಲವೇ?! ಅಂಕಿ ಅಂಶ ಗಮನಿಸಿದಾಗ ಚಿತ್ರದುರ್ಗ ಜಿಲ್ಲೆಯೊಂದರಲ್ಲೇ ಕಳೆದ 6 ತಿಂಗಳಲ್ಲಿ ಕಕ್ಕೇರಹಳ್ಳಿ ಸೇರಿದಂತೆ ಒಟ್ಟು 7 ಬಾಲ್ಯ ವಿವಾಹವನ್ನು ತಡೆಹಿಡಿಯಲಾಗಿದೆ. ಹಾಗಾದರೆ ತಡೆಹಿಡಿಯದೆ ಸಲೀಸಾಗಿ ನಡೆದಿರುವ ಬಾಲ್ಯ ವಿವಾಹಗಳೆಷ್ಟಿರಬಹುದು?!

ಬಾಲ್ಯ ವಿವಾಹ, ಅನೈತಿಕತೆ, ಮಹಿಳಾ ದೌರ್ಜನ್ಯ, ಮರ್ಯಾದಾ ಹತ್ಯೆ ಮುಂತಾದ ಘಟನೆಗಳು ಬೆಳಕಿಗೆ ಬಂದಾಗ ಕಾನೂನು ಎಚ್ಚೆತ್ತುಕೊಂಡು ಅದರ ನಿಯಂತ್ರಣಕ್ಕಾಗಿ ಹೊಸ ಕಾನೂನು ಜಾರಿಗೊಳಿಸುತ್ತದೆ. ಆದರೆ ಇಂತಹ ಕಾನೂನು ಜಾರಿಗೊಂಡ ಬಳಿಕವೂ ಅನಿಷ್ಟ ಪದ್ಧತಿಯಲ್ಲಿ ಗಣನೀಯ ನಿಯಂತ್ರಣವನ್ನು ಸಾಧಿಸಲು ಸಾಧ್ಯವಾಗಿಲ್ಲ. ಒಂದರ್ಥದಲ್ಲಿ ಹೇಳುವುದಾದರೆ ಹೊಸ ಕಾನೂನುಗಳು ತರಾತುರಿಯಲ್ಲಿ ತೆಗೆದುಕೊಂಡ ನಿರ್ಧಾರದಂತಿವೆ. ಉದಾಹರಣೆಗೆ, ವಿವಾಹದ ವಯಸ್ಸಿನ ಮಿತಿ ಗಂಡಸಿಗೆ 21 ಮತ್ತು ಹೆಣ್ಣಿಗೆ 18 ಎಂದಾಗಿದೆ. ಈ ವಯಸ್ಸಿಗೆ ಮುಂಚಿತವಾಗಿ ವಿವಾಹವಾದರೆ ಅಂಥವರಿಗೆ ಮೂರು ವರ್ಷ ಕಡ್ಡಾಯ ಶಿಕ್ಷೆ ವಿಧಿಸಬೇಕು ಎಂಬ ಹೊಸ ಕಾನೂನು ಜಾರಿಗೆ ಬರಲು ಸಿದ್ಧತೆಯಲ್ಲಿದೆ. ವಾಸ್ತವದಲ್ಲಿ ಇಂಥದ್ದೊಂದು ಕಾನೂನು ಬಾಲ್ಯವಿವಾಹವನ್ನಾಗಲೀ, ಸಾಮಾಜಿಕ ಅನಿಷ್ಟಗಳ ಬಲಿಪಶುಗಳಾಗುತ್ತಿರುವ ಹೆಣ್ಮಕ್ಕಳ ರಕ್ಷಣೆಗಾಗಲೀ ನೆರವಾಗುವುದೇ? ಖಂಡಿತಾ ಇಲ್ಲ. ಇದರ ಜೊತೆಗೆ ಹೆತ್ತವರ ಸಮ್ಮತಿಯಿಲ್ಲದೆ ಪ್ರೇಮ ವಿವಾಹವಾಗುವುದಕ್ಕೂ ತಡೆಯೊಡ್ಡುವ ಕಾನೂನು ಕೂಡ ಜಾರಿ ತರಲು ಚಿಂತನೆ ನಡೆಯುತ್ತಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ, ಸಮಾಜದಲ್ಲಿ ಹೆಣ್ಮಕ್ಕಳು ಅನುಭವಿಸುತ್ತಿರುವ ಸಮಸ್ಯೆಗೂ ಮತ್ತು ಅದರ ನಿಯಂತ್ರಣಕ್ಕೆಂದು ಜಾರಿಗೊಳಿಸಲಾಗುತ್ತಿರುವ ಕಾನೂನಿಗೂ ನಿಕಟ ಸಂಬಂಧವೇ ಇಲ್ಲದಂತಾಗಿದೆ.

ಜಾಗತಿಕ ಮಕ್ಕಳ ಪರಿಸ್ಥಿತಿಯ ಬಗ್ಗೆ ಯುನಿಸೆಫ್ 2009ರಲ್ಲಿ ಸಿದ್ಧಪಡಿಸಿದ್ದ ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ ಶೇ.47ರಷ್ಟು ಯುವತಿಯರು 18ರ ಹರೆಯಕ್ಕೆ ಮುನ್ನವೇ ಮದುವೆ ಮಾಡಿಕೊಳ್ಳುತ್ತಿದ್ದಾರೆ. ಇವುಗಳ ಪೈಕಿ ಶೇ.56 ಯುವತಿಯರು ಗ್ರಾಮೀಣ ಪ್ರದೇಶಕ್ಕೆ ಸೇರಿದವರು. ಅದೇ ರೀತಿ ವಿಶ್ವದ ಬಾಲ್ಯವಿವಾಹದಲ್ಲಿ ಶೇ.40ರಷ್ಟು ಪ್ರಕರಣಗಳು ದಾಖಲಾಗಿರುವುದು ಭಾರತದಲ್ಲಿ ಎಂಬುದನ್ನು ಯುನಿಸೆಫ್‌ನ ಸಮೀಕ್ಷೆಯು ತಿಳಿಸಿದೆ. ಅಂದರೆ ಇಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟುವುದಕ್ಕಾಗಿ ವಿವಾಹದ ವಯಸ್ಸಿನ ಮಿತಿಯನ್ನು ಕಟ್ಟು ನಿಟ್ಟಾಗಿಸುವುದು ಅಲ್ಲ. ಬದಲಾಗಿ ಅಂತಹ ಅನಿಷ್ಟ ಪದ್ಧತಿಗಳು ಜಾರಿಯಲ್ಲಿರುವ ಸಮಾಜ ಯಾ ಪ್ರದೇಶದಲ್ಲಿ ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

*ಕೇವಲ ಬಾಲ್ಯ ವಿವಾಹ ಮಾತ್ರವಲ್ಲ, ಲಿವಿಂಗ್ ಟುಗೆದರ್, ಬಾಡಿಗೆ ತಾಯ್ತನ, ಸಲಿಂಗ ವಿವಾಹ ಇತ್ಯಾದಿ ಅನಿಷ್ಟಗಳಿಗೆ ಇಲ್ಲಿನ ಕಾನೂನು ವ್ಯವಸ್ಥೆಯೇ ಆಧುನಿಕತೆಯ ಹೆಸರಿನಲ್ಲಿ ಅನುವು ಮಾಡಿಕೊಡುತ್ತಿರುವಾಗ 18-21 ಎಂಬ ವಿವಾಹ ಕಾನೂನಿನಲ್ಲಿ ಯಾವ ನ್ಯಾಯವಿದೆ. ವಿವಾಹವಾಗದೆಯೇ ಒಟ್ಟಿಗೆ ಬಾಳಬಹುದು, ಅದು ಅನೈತಿಕ ಸಂಬಂಧವಲ್ಲ ಎಂದು ತೀರ್ಪು ನೀಡುವ ಇದೇ ನ್ಯಾಯಾಂಗ ವ್ಯವಸ್ಥೆಯು ಹೆಣ್ಣು 18 ವಯಸ್ಸಿಗೆ ಮುಂಚೆ ಹಾಗೂ ಗಂಡು 21 ವಯಸ್ಸಿಗೆ ವಿವಾಹ ಮಾಡಿಕೊಳ್ಳಬಾರದು ಎಂದರೆ ಕಾನೂನಿನ ರೀತಿಯಲ್ಲಿ ವಿವಾಹವೆಂದರೆ ಏನರ್ಥವಿರಬಹುದು? ಇಂತಹ ವಿತಂಡ ವಾದಗಳೇ ಇಂದು ಕಾನೂನು ಆಗಿ ಜಾರಿಗೊಳ್ಳುತ್ತಿರುವಾಗ ಹೆಣ್ಣಿನ ಸಮಸ್ಯೆಗಳು ಹಾಗೆಯೇ ಜೀವಂತವಾಗಿಯೇ ಉಳಿಯುತ್ತಿವೆ.*

ಬಾಲ್ಯ ವಿವಾಹ ಎಂಬುದು ಅನಿಷ್ಟ ಪದ್ಧತಿಯಾಗಿರಬಹುದು. ಆದರೆ ವಿವಾಹ ಎಂಬುದು ಕೇವಲ ಆಚರಣೆಯಲ್ಲ. ಅದೊಂದು ಪವಿತ್ರ ಬಂಧನವಾಗಿದೆ. ಇಸ್ಲಾಮಿ ನೆಲೆಗಟ್ಟಿನಲ್ಲಿ ವಿವಾಹಕ್ಕೆ ವಿಶೇಷ ಅರ್ಥ ಮತ್ತು ಶರ್ತಗಳಿವೆ. ಹೆಣ್ಣು ಮತ್ತು ಗಂಡು ವಿವಾಹಕ್ಕೆ ಯೋಗ್ಯರಾಗಿದ್ದಾರೆಯೇ ಎಂಬುದು ವಿವಾಹಕ್ಕಿರುವ ಶರತ್ತು. ಮಾತ್ರವಲ್ಲ, ಆ ವಿವಾಹಕ್ಕೆ ಹೆಣ್ಣು- ಗಂಡಿನ ಒಪ್ಪಿಗೆ ಅಗತ್ಯವಿದೆ. ಅದರಲ್ಲೂ ಹೆಣ್ಣಿನ ಒಪ್ಪಿಗೆಗೆ ಆದ್ಯತೆ ನೀಡಲಾಗಿದೆ. ಕೇವಲ ವಯಸ್ಸಿನ ಮಿತಿಯು ಒಂದು ವಿವಾಹದ ಅನುಮತಿ ಎನಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ಮಿತಿಗಳು ಹೇರುವುದರಿಂದ ಸಹಜ ದೈಹಿಕ ಬೆಳವಣಿಗೆಗಳಿನುಗುಣವಾಗಿ ನಡೆಯುವಂತಹ ವಿವಾಹಗಳು ಕೂಡ ಬಾಲ್ಯ ವಿವಾಹವೆಂದು ಕರೆಸಿಕೊಳ್ಳುತ್ತದೆ. ಹಲವು ಸಂದರ್ಭಗಳಲ್ಲಿ ಇದು ಅನೈತಿಕ ಸಂಬಂಧಗಳಿಗೆ ದಾರಿ ಮಾಡಿಕೊಡುವ ಅಪಾಯವಿರುತ್ತದೆ.

ಕೇವಲ ಬಾಲ್ಯ ವಿವಾಹ ಮಾತ್ರವಲ್ಲ, ಲಿವಿಂಗ್

ಟುಗೆದರ್, ಬಾಡಿಗೆ ತಾಯ್ತನ, ಸಲಿಂಗ ವಿವಾಹ ಇತ್ಯಾದಿ ಅನಿಷ್ಟಗಳಿಗೆ ಇಲ್ಲಿನ ಕಾನೂನು ವ್ಯವಸ್ಥೆಯೇ ಆಧುನಿಕತೆಯ ಹೆಸರಿನಲ್ಲಿ ಅನುವು ಮಾಡಿಕೊಡುತ್ತಿರುವಾಗ 18-21 ಎಂಬ ವಿವಾಹ ಕಾನೂನಿನಲ್ಲಿ ಯಾವ ನ್ಯಾಯವಿದೆ. ವಿವಾಹವಾಗದೆಯೇ ಒಟ್ಟಿಗೆ ಬಾಳಬಹುದು, ಅದು ಅನೈತಿಕ ಸಂಬಂಧವಲ್ಲ ಎಂದು ತೀರ್ಪು ನೀಡುವ ಇದೇ ನ್ಯಾಯಾಂಗ ವ್ಯವಸ್ಥೆಯು ಹೆಣ್ಣು 18 ವಯಸ್ಸಿಗೆ ಮುಂಚೆ ಹಾಗೂ ಗಂಡು 21 ವಯಸ್ಸಿಗೆ ವಿವಾಹ ಮಾಡಿಕೊಳ್ಳಬಾರದು ಎಂದರೆ ಕಾನೂನಿನ ರೀತಿಯಲ್ಲಿ ವಿವಾಹವೆಂದರೆ ಏನರ್ಥವಿರಬಹುದು? ಇಂತಹ ವಿತಂಡ ವಾದಗಳೇ ಇಂದು ಕಾನೂನು ಆಗಿ ಜಾರಿಗೊಳ್ಳುತ್ತಿರುವಾಗ ಹೆಣ್ಣಿನ ಸಮಸ್ಯೆಗಳು ಹಾಗೆಯೇ ಜೀವಂತವಾಗಿಯೇ ಉಳಿಯುತ್ತಿವೆ.

ದೇಶದಲ್ಲಿ ನಡೆಯುತ್ತಿರುವ ಹೆಚ್ಚಿನ ಬಾಲ್ಯ ವಿವಾಹವನ್ನು ಮುಖ್ಯವಾಗಿ ನಾವು ವಿರೋಧಿಸಬೇಕಾಗಿರುವುದು ಅಂತಹ ವಿವಾಹದಲ್ಲಿ ಹೆಣ್ಣಿನ ಭಾವನೆಗಳಿಗೆ ಯಾವುದೇ ಬೆಲೆ ನೀಡದಿರುವುದಕ್ಕೆ. ಬಾಲ್ಯ ವಿವಾಹವೆನ್ನುವುದು ಹೆಣ್ಣಿನ ಅನುಮತಿಯಿಲ್ಲದೆ ಯಾರಿಗೋ (ಹಲವು ಸಂದರ್ಭಗಳಲ್ಲಿ ಹೆಣ್ಣಿನ ತಂದೆಯ ವಯಸ್ಸಿನ ವರನೊಂದಿಗೆ) ಮದುವೆ ಮಾಡಿಕೊಟ್ಟು ಕೈತೊಳೆದುಕೊಳ್ಳುವ ಹೆತ್ತವರ ಅಸಹಾಯಕತೆಯಾಗಿರುತ್ತದೆ. ಇವುಗಳನ್ನು ತಡೆಗಟ್ಟುವುದು ಸ್ಥಳೀಯಾಡಳಿತದ ಜವಾಬ್ದಾರಿ. ಆದರೆ ಪ್ರಸಕ್ತ ಸನ್ನಿವೇಶದಲ್ಲಿ ಅನೈತಿಕತೆಯೇ ಕೂಡಿದ ಸಮಾಜವೊಂದು ಸದ್ದಿಲ್ಲದೆ ನಿರ್ಮಾಣಗೊಳ್ಳುತ್ತಿದೆ. ಇದಕ್ಕೆ ಬಲಿಪಶುಗಳಾಗುತ್ತಿರುವುದು ಹೆಣ್ಮಕ್ಕಳು ಮಾತ್ರ.

ಬಾಲ್ಯ ವಿವಾಹವು ದೇಶದಲ್ಲಿ ಇಷ್ಟೊಂದು ವ್ಯಾಪಕವಾಗಿ ಚಾಲ್ತಿಯಲ್ಲಿರಲು ಕಾರಣವೇನು? ಇದರ ಹಿಂದಿರುವ ಮೂಢನಂಬಿಕೆಗಳೇನು? ಇದನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸಲು ಕೈಗೊಳ್ಳಬೇಕಾದ ವೈಜ್ಞಾನಿಕ ಕ್ರಮಗಳೇನು? ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಯೋಜನೆ ಕೈಗೊಂಡರೆ ಕೆಲವೇ ವರ್ಷದಲ್ಲಿ ದೇಶದಲ್ಲಿ ಬಾಲ್ಯ ವಿವಾಹ ನಿರ್ಮೂಲನೆಗೊಳ್ಳಲಿದೆ. ಅದರ ಜೊತೆಗೆ ಸಾಮಾಜಿಕ ಅನಿಷ್ಟಕ್ಕೊಳಗಾಗುತ್ತಿರುವ ಹೆಣ್ಮಕ್ಕಳನ್ನೂ ಉಳಿಸಿಕೊಳ್ಳಬಹುದು.



# ಭಯೋತ್ಪಾದನೆಗೆ ಸಜ್ಜಾಗಿದೆ ಮುತಾಲಿಕ್ 'ಸೇನೆ'

● ರಾಜು ಪಿ.

ಇದು ನಮ್ಮ ದೇಶದ ದುರಂತವೇ ಸರಿ. ದೇಶವನ್ನು ಕಾಯುವುದಕ್ಕಾಗಿ ಶ್ರೀರಾಮ ಸೇನೆ ಕಾರ್ಯಕರ್ತರಿಗೆ ಬೆಳಗಾವಿಯ ಭೂ ಕೈಲಾಸ ಆಶ್ರಮದಲ್ಲಿ ಮಿಲಿಟರಿ ದೈಹಿಕ ಕಸರತ್ತುಗಳನ್ನು ಕಲಿಸಲಾಗುತ್ತಿದೆ. ಇದನ್ನು ಕಲಿಸುತ್ತಿರುವುದು ನಿವೃತ್ತ ಸೇನಾಧಿಕಾರಿಗಳು. ಮಂಗಳೂರಿನ ಪಬ್‌ನಲ್ಲಿ ಹೆಣ್ಣು ಮಕ್ಕಳ ಮೇಲೆ ದಾಳಿ ನಡೆಸಿದ, ಗೋಹತ್ಯೆ ಹೆಸರಿನಲ್ಲಿ ಮಾನವ ಹತ್ಯೆಗಳನ್ನು ನಡೆಸಿದ, ಉಡುಪಿಯ ಹಾಜಬ್ಬ ಹಸನಬ್ಬರನ್ನು ಬೆತ್ತಲೆಗೊಳಿಸಿದ, ಗುಜರಾತ್‌ನಲ್ಲಿ ಗರ್ಭಿಣಿ ಮಹಿಳೆಯರ ಹೊಟ್ಟೆಗೆ ತ್ರಿಶೂಲವನ್ನು ಚುಚ್ಚಿದ, ದೇಶದಲ್ಲಿ ಅದೆಷ್ಟೋ ಹತ್ಯಾಕಾಂಡಗಳನ್ನು ನಡೆಸಿದ ಕೇಸರಿ ವಿಭಾಗದ 'ದೇಶ ಪ್ರೇಮ(?)'ವನ್ನು ಇನ್ನಷ್ಟು ಹೆಚ್ಚಿಸಲು ನಿವೃತ್ತ ಸೇನಾಧಿಕಾರಿಗಳು ಈ ತಾಲೀಮುಗಳನ್ನು ಕಲಿಸುತ್ತಿದ್ದಾರೆ!

ತನ್ನ ಸೇನೆಯು ಆತ್ಮಾಹುತಿ ದಳವನ್ನು ಹೊಂದಿದೆ. ಇದರಲ್ಲಿ 1200 ಮಂದಿ ತರಬೇತಿ ಪಡೆದಿದ್ದಾರೆ ಎಂದು ಈ ಹಿಂದೆಯೇ ಸಂಘಟನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಪತ್ರಕರ್ತರ ಮುಂದೆ ಹೇಳಿದ್ದರು. ಈಗ ಬಹಿರಂಗವಾಗಿ ದೈಹಿಕ ಕಸರತ್ತುಗಳನ್ನು ಪ್ರದರ್ಶಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಮುತಾಲಿಕರ ಬಾಯಿಯಲ್ಲಿ ಅಂದು ಉದುರಿದ ಮಾತುಗಳಿಗೆ ಪ್ರಾಯಶ್ಚಿತವಾಗಿ ಮಾತ್ರ. ಅಂದರೆ ಇದರ ಉದ್ದೇಶ ತನ್ನ ಹಿಡನ್ ಅಜೆಂಡಾಗಳನ್ನು ಬಚ್ಚಿಡುವುದು. ಈ ಕಾರ್ಯಕ್ರಮದಲ್ಲಿ ರವಿ ಶಂಕರ್ ಗುರೂಜಿ ಹಾಗೂ ಬೇರೆ ಕೆಲವು ಸ್ವಾಮೀಜಿಗಳೂ ಭಾಗವಹಿಸಿದ್ದರು. ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್, ಸ್ವಾಮಿ ದಯಾನಂದ ಪಾಂಡೆ, ಅಸೀಮಾನಂದ ಮುಂತಾದ ಸ್ವಾಮಿಜಿಗಳನ್ನು ಗಣನೆಗೆ ತೆಗೆದುಕೊಳ್ಳುವಾಗ ಸ್ವಾಮೀಜಿಗಳು, ಆಶ್ರಮಗಳು ಇಂತಹುದರಲ್ಲಿ


ಪ್ರಮೋದ್ ಮುತಾಲಿಕ್

ಭಾಗಿಯಾಗುವುದರಲ್ಲಿ ಅಚ್ಚರಿಯೇನಿಲ್ಲ.

ತನ್ನ ಸಂಘಟನೆಯು 3000 ಮಂದಿಗೆ ಇಂತಹ ತರಬೇತಿ ನೀಡಿದೆ ಎಂದು ಮುತಾಲಿಕ್ ಮಾಧ್ಯಮದಲ್ಲಿ ನಡೆದ ಚರ್ಚೆಯೊಂದರ ವೇಳೆ ಹೇಳಿದ್ದಾರೆ. ಹೀಗೆ ತರಬೇತಿ ಪಡೆದವರಲ್ಲಿ 300 ಮಂದಿ ದೇಶದ ಸೇನೆಗೆ ಸೇರಲು ಈ ತರಬೇತಿಯು ಪ್ರಯೋಜನಕಾರಿಯಾಗಿದೆ ಎಂದಿದ್ದರು. ಹಾಗಾದರೆ ಭಾರತೀಯ ಸೇನೆಯಲ್ಲಿ ಈಗ ಶ್ರೀರಾಮ ಸೇನೆಯ ಶಾಖೆಗಳೂ ನಡೆಯುತ್ತಿವೆಯೇ? ಎಂಬ ಪ್ರಶ್ನೆಯನ್ನು ಇದು ಹುಟ್ಟು ಹಾಕುತ್ತದೆ.

ಸೇನಾಧಿಕಾರಿಗಳು ಹಿಂದುತ್ವ ಸಂಘಟನೆಗಳಿಗೆ ತರಬೇತಿ ನೀಡುವುದು ಮತ್ತು ಹಿಂದುತ್ವ ಕಾರ್ಯಕರ್ತರು ಭಾರತೀಯ ಸೇನೆಗೆ ನುಸುಳುವುದರಲ್ಲಿ ಅಚ್ಚರಿಪಡುವಂತದ್ದೇನಿಲ್ಲ. ದೇಶವನ್ನೇ ನಡುಗಿಸಿದ ಮಾಲೇಗಾಂವ್ ಸ್ಫೋಟಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿರುವುದು ಬೇರಾರೂ ಅಲ್ಲ. ಭಾರತೀಯ ಸೇನೆಯ ಲೆಫ್ಟಿನೆಂಟ್ ಕರ್ನಲ್ ಪುರೋಹಿತ್.

ಪುರೋಹಿತ್ ಅಲ್ಲದೆ ಬೇರೆ ಸೇನಾಧಿಕಾರಿಗಳೂ ಹಿಂದುತ್ವ

## ಜಂಬಗಿ-ಮುತಾಲಿಕ್ ಸಂಬಂಧ ಬಹಿರಂಗವಾಗಲಿ



(ಫೈಲ್ ಫೋಟೊ)

ತನಗೆ ಜಂಬಗಿ(ಹುಬ್ಬಳ್ಳಿ ಬಾಂಬ್ ಸ್ಫೋಟ ಪ್ರಕರಣದ ಆರೋಪಿ)ಯ ಪರಿಚಯವೇ ಇಲ್ಲ ಎನ್ನುವ ಪ್ರಮೋದ್ ಮುತಾಲಿಕ್ ಆತನ ಹೆಗಲಿಗೆ ಕೈ ಹಾಕಿ ತೆಗೆಸಿಕೊಂಡಿರುವ ಚಿತ್ರ.

ದೇಶದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಮುತಾಲಿಕ್ ಜಂಬಗಿಗಳ ಉತ್ಪಾದನೆಯಲ್ಲಿ ತೊಡಗಿದ್ದಾನೆ. ಮುತಾಲಿಕ್‌ನ ಆ ಸೇನೆಗೆ ಇದೀಗ ನೆರವಾಗುತ್ತಿರುವವರು ನಿವೃತ್ತ ಸೇನಾಧಿಕಾರಿಗಳು.

ಅಂದ ಹಾಗೆ ಹುಬ್ಬಳ್ಳಿ ನ್ಯಾಯಾಲಯ ಸ್ಫೋಟ ಪ್ರಕರಣದ ಆರೋಪಿ ನಾಗರಾಜ್ ಜಂಬಗಿಯು ಕೂಡ ಈ ಹಿಂದೆ ಇದೇ ಮುತಾಲಿಕ್ ಸೇನೆಯಲ್ಲಿ ತರಬೇತಿ ಪಡೆದಿದ್ದ. ಹುಬ್ಬಳ್ಳಿ ನ್ಯಾಯಾಲಯದಲ್ಲಿ ಬಾಂಬ್ ಸ್ಫೋಟಿಸಲು ಕೂಡ ಯಶಸ್ವಿಯಾಗಿದ್ದ. ಆದರೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಜಂಬಗಿಯನ್ನು ಬಂಧಿಸಲಾದಾಗ ಆತ ಜಂಬಗಿಗೂ ತನಗೂ ಯಾವುದೇ ಸಂಬಂಧವಿಲ್ಲ. ಆತ ಯಾರೆಂದು ನನಗೆ ತಿಳಿದಿಲ್ಲ ಎಂಬ ಉತ್ತರವನ್ನು ನೀಡಿದ್ದ. ಮುಂದೆ ಮುತಾಲಿಕ್ ನೇತೃತ್ವದಲ್ಲಿ ತರಬೇತಿ ಪಡೆದ ಈ 'ಆತಂಕ ಪಡೆ' ಒಂದು ವೇಳೆ ದೇಶದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಿದರೆ ಆಗಲೂ ಮುತಾಲಿಕ್ ಇದೇ ಉತ್ತರವನ್ನು ನೀಡಬಹುದಲ್ಲವೇ?

ಮುತಾಲಿಕ್ ತನಗೂ ಜಂಬಗಿಗೂ ಸಂಬಂಧವಿಲ್ಲ ಎಂಬ ಹೇಳಿಕೆಯನ್ನು ನೀಡುತ್ತಿದ್ದಂತೆಯೇ ಜಂಬಗಿಯ ಹೆತ್ತವರು ಈ ರೀತಿ ಪ್ರತಿಕ್ರಿಯಿಸಿದ್ದರು. ''ತನ್ನ ಮಗನನ್ನು ಹರಕೆಯ ಕುರಿ ಮಾಡಲಾಗಿದೆ. ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ತನ್ನ ಕೆಲಸಕ್ಕೆ ಮಗನನ್ನು ಬಳಸಿಕೊಂಡಿದ್ದ. ಆದರೆ ಆತ ಪೊಲೀಸರ ವಶವಾಗುವ ಸಂದರ್ಭ ಆತನನ್ನು ಬಿಡುಗಡೆಗೊಳಿಸಲು ಮುತಾಲಿಕ್ ಹಿಂದೇಟು ಹಾಕಿದ್ದ. ಮುತಾಲಿಕ್‌ನಲ್ಲಿ ತನ್ನ ಮಗನನ್ನು ರಕ್ಷಿಸಲು ಬಿನ್ನವಿಸಿಕೊಂಡಾಗ ತನಗೆ ಜಂಬಗಿಯವೇ ಇಲ್ಲ ಎಂದು ಹೇಳಿ ತಪ್ಪಿಸಿಕೊಂಡಿದ್ದ.

8 ವರ್ಷಗಳ ಹಿಂದೆ ಶಿಕ್ಷಣ ಪಡೆಯಲು ಜಂಬಗಿ ಮನೆಯಿಂದ ಬಾಗಲಕೋಟೆಗೆ ತೆರಳಿದ್ದ. ಆದರೆ ಆತ ಈಗ ನಮ್ಮ ಮುಂದೆ ತಪ್ಪಿತಸ್ಥನಾಗಿ ಬಂದಿದ್ದಾನೆ. ಇಷ್ಟು ದಿನ ಆತ ಎಲ್ಲಿದ್ದ. ಏನು ಮಾಡುತ್ತಿದ್ದ ಎಂಬುದು ತಮಗೆ ತಿಳಿದಿಲ್ಲ. ಆದರೆ ಇದೀಗ ಜಂಬಗಿ ಸೆರೆಯಾದಾಗ ಮುತಾಲಿಕ್ ತನಗೆ ಆತನ ಪರಿಚಯವೇ ಇಲ್ಲ ಎನ್ನುತ್ತಿದ್ದಾನೆ.'' ಇದು ನಾಗರಾಜ್ ಜಂಬಗಿಯು ಹುಬ್ಬಳ್ಳಿ ನ್ಯಾಯಾಲಯ ಸ್ಫೋಟ ಪ್ರಕರಣದಲ್ಲಿ ಸೆರೆಯಾದ ಸಂದರ್ಭದಲ್ಲಿ ಪತ್ರಕರ್ತರಿಗೆ ನೀಡಿದ ಸಂದರ್ಶನದ ತುಣುಕು.

ಇದೀಗ ನಾಗರಾಜ್ ಜಂಬಗಿ ಜೈಲಿನಲ್ಲಿಯೇ ಕೊಲೆಯಾಗಿದ್ದಾನೆ. ಜಂಬಗಿಯನ್ನು ಮುತಾಲಿಕ್ ಬಲಿ ಕೊಟ್ಟಿದ್ದಾನೆ ಎಂಬುದು ಸ್ಪಷ್ಟ. ಆತನನ್ನು ವಿಧ್ವಂಸಕ ಕೃತ್ಯಗಳಿಗೆ ಬಳಸಿದವರ ವಿರುದ್ಧ ಹಾಗೂ ಆತನ ಕೊಲೆಯ ಬಗ್ಗೆ ಯಾವುದೇ ತನಿಖೆಗಳು ನಡೆದಿಲ್ಲ. ಜಂಬಗಿಯ ಕೊಲೆ ಪ್ರಕರಣ ಹಳ್ಳ ಹಿಡಿಯುತ್ತಿದ್ದಂತೆಯೇ ಹುತ್ತದೊಳಗಿದ್ದ ಮುತಾಲಿಕ್ ಇದೀಗ ಪುನಃ ಇನ್ನಷ್ಟು ಜಂಬಗಿಗಳನ್ನು ಹುಟ್ಟು ಹಾಕುವ ಕಸರತ್ತು ನಡೆಸುತ್ತಿದ್ದಾನೆ. ರಕ್ಷಣೆಗಾಗಿ ಪೊಲೀಸರಿರುವಾಗ ಮುತಾಲಿಕ್ ಸೇನೆಯ ಅವಶ್ಯಕತೆ ದೇಶಕ್ಕಿಲ್ಲ. ಮುತಾಲಿಕ್ ಯಾವ ಉದ್ದೇಶಕ್ಕಾಗಿ ಈ ಸೇನೆಯನ್ನು ಕಟ್ಟುತ್ತಿದ್ದಾನೆ. ಮುತಾಲಿಕ್‌ನ ಹೆಸರು ಈ ಹಿಂದೆ ಸ್ಫೋಟ ಪ್ರಕರಣಗಳಲ್ಲೂ ಕೇಳಿ ಬಂದಿದೆ. ಮುತಾಲಿಕ್‌ನ ಆಪ್ತ ಜಂಬಗಿಯ ಕೊಲೆ ಪ್ರಕರಣದ ತನಿಖೆಗೆ ಮರುಜೀವ ನೀಡಬೇಕು. ಈ ಸಂದರ್ಭ ಮುತಾಲಿಕ್‌ನನ್ನು ಹಾಗೂ ಆತನ ಸೇನೆಯನ್ನು ಗಂಭೀರ ವಿಚಾರಣೆ ಒಳಪಡಿಸಬೇಕು. ಈಗಾಗಲೇ ಮುತಾಲಿಕ್ ಮೇಲೆ ಕೋಮು ಪ್ರಚೋದಕ ಭಾಷಣಗಳಿಗೆ ಸಂಬಂಧಿಸಿ ಮತ್ತು ಶಾಂತಿ ಕದಡಿದ ಪ್ರಕರಣಗಳಿಗೆ ಸಂಬಂಧಿಸಿ ಹಲವು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದೆ. ಈ ನಿಟ್ಟಿನಲ್ಲಿ ಆತನನ್ನು ತೀವ್ರ ತನಿಖೆಗೊಳಪಡಿಸಿ ಮುಂದಿನ ದಿನಗಳಲ್ಲಿ ನಡೆಯಬಹುದಾದ ಇನ್ನಷ್ಟು ವಿಧ್ವಂಸಕ ಕೃತ್ಯಗಳನ್ನು ತಡೆಯಬೇಕಾಗಿದೆ.

---

ಭಯೋತ್ಪಾದಕರೊಂದಿಗೆ ನಂಟು ಹೊಂದಿರುವುದು ಈಗಾಗಲೇ ಜಗಜ್ಜಾಹೀರಾಗಿದೆ. 7 ಮಂದಿ ಸೇನಾಧಿಕಾರಿಗಳು ಹಿಂದುತ್ವ ಭಯೋತ್ಪಾದನೆಗೆ ಸಹಕರಿಸಿರುವುದು ಆಡಿಯೊ ಟೇಪ್‌ವೊಂದರಲ್ಲಿ ಬಹಿರಂಗವಾಗಿತ್ತು. ಅದನ್ನು ತೆಹಲ್ಕಾ ನಿಯತಕಾಲಿಕ ಜನವರಿ 1, 2011ರ ಸಂಚಿಕೆಯಲ್ಲಿ ಪ್ರಕಟಿಸಿತ್ತು. ಮೇಜರ್ ಉಪಾಧ್ಯಾಯ, ಕರ್ನಲ್ ಹಸ್ಮುಖ್ ಪಟೇಲ್ (ನಿವೃತ್ತ), ಕರ್ನಲ್ ಶೈಲೇಶ್ ರಾಯ್‌ಕರ್ (ನಿವೃತ್ತ), ಕರ್ನಲ್ ಆದಿತ್ಯ ಬಪ್ಪಾದಿತ್ಯ ಧರ್ (ನಿವೃತ್ತ), ಬ್ರಿಗೇಡರ್ ಮಾಥೂರ್,


ಮಂಗಳೂರಿನಲ್ಲಿ ನಡೆದ ಪಬ್ ದಾಳಿಯ ಸಂದರ್ಭ (ಫೈಲ್ ಫೋಟೋ)

ಮೇಜರ್ ನಿತಿನ್ ಜೋಶಿ, ಮೇಜರ್ ಪ್ರಯಾಗ್ ಮೊಡಕ್ ಹಿಂದುತ್ವ ಭಯೋತ್ಪಾದಕರಿಗೆ ನೆರವು ನೀಡಿರುವುದು ಇದರಿಂದ ಬೆಳಕಿಗೆ ಬಂದಿತ್ತು.

ಹಸ್ಮುಖ್ ಹಿಂದುತ್ವ ಉಗ್ರಗಾಮಿಗಳಿಗೆ ತರಬೇತಿ ನೀಡಿದ್ದರೆ, ಮರಾಠ ರೆಜಿಮೆಂಟ್‌ನ ಶೈಲೇಶ್ ರಾಯ್‌ಕರ್ ಬನ್ಸಾಲದಲ್ಲಿ ಈ ತರಬೇತಿಗಳನ್ನು ನಡೆಸಲು ಸಹಕರಿಸುತ್ತಿದ್ದ. ಲೆಫ್ಟಿನೆಂಟ್ ಪುರೋಹಿತ್‌ನೊಂದಿಗಿನ ಸಂಭಾಷಣೆಯೊಂದರಲ್ಲಿ ಕರ್ನಲ್ ಆದಿತ್ಯ ಬಪ್ಪದಿತ್ಯ ಧರ್, ಈ ದೇಶವನ್ನು ಯಾವ ರೀತಿಯಲ್ಲಿ ಹಿಂದುತ್ವ ರಾಷ್ಟ್ರವಾಗಿ ಪರಿವರ್ತಿಸಬೇಕು ಎಂಬುದಾಗಿ ಚರ್ಚಿಸಿದ್ದ. 'ಈ ದೇಶವನ್ನು ಸೇನೆಯು ಯಾವ ರೀತಿಯಲ್ಲಿ ವಶಪಡಿಸಿಕೊಳ್ಳಬೇಕು' ಎಂಬ ಪುರೋಹಿತ್‌ನ ಪ್ರಶ್ನೆಗೆ ಧರ್, 'ಹೌದು, ಹೌದು, ನಾನು ಮೂರು ಲಕ್ಷ ಪತ್ರಗಳನ್ನು ಯೋಧರ ನಡುವೆ ವಿತರಿಸಿದ್ದೆ. ಇದು ರಾಜಕೀಯ ಪ್ರಯತ್ನವಲ್ಲ. ಮತ್ತು ನಾನು ಅಖಂಡ ಭಾರತದ 20,000 ಮ್ಯಾಪ್‌ಗಳನ್ನು ಜನವರಿ 26ರಂದು ಜವಾನರಿಗೆ ಹಂಚಿದ್ದೇನೆ. ಬೀಜವನ್ನು ಬಿತ್ತಲು ಇದು ನನ್ನ ವಿನೀತ ಪ್ರಯತ್ನವಾಗಿದೆ'' ಎಂದಿದ್ದ.

ಭಯೋತ್ಪಾದಕ ತರಬೇತಿಗಾಗಿ ಜನರನ್ನು ಇಸ್ರೇಲ್‌ಗೆ ಹಾಗೂ ನೇಪಾಳಕ್ಕೆ ಕಳುಹಿಸುವುದರ ಬಗ್ಗೆ ಪುರೋಹಿತ್ ಮಾತನಾಡುವುದು ಟೇಪ್ ರೆಕಾರ್ಡರ್‌ನಲ್ಲಿ ಬಹಿರಂಗವಾಗಿತ್ತು. ಪುರೋಹಿತ್ ಒಮ್ಮೆ ಮಿಲಿಟರಿ ಬೇಹುಗಾರಿಕಾ ಅಧಿಕಾರಿಯಾಗಿದ್ದ. ಆತನ ಕೆಲಸ ಜಮ್ಮು ಮತ್ತು ಕಾಶ್ಮೀರದಲ್ಲಿ ತನ್ನ ಮಾಹಿತಿದಾರರ ಜಾಲವನ್ನು ಹರಡುವುದು ಮತ್ತು ನಿರ್ಣಾಯಕ ಮಾಹಿತಿಗಳನ್ನು ಪಡೆಯುವುದು. ತನ್ನ ಅಧಿಕಾರವಧಿಯ ವೇಳೆ ಪುರೋಹಿತ್ ಮುಸ್ಲಿಮರ ವಿರುದ್ಧ ಯಾವ ರೀತಿ ಕೆಲಸ ಮಾಡಿರಬಹುದು ಎಂಬುದನ್ನು ನಾವು ಅರ್ಥೈಸಿಕೊಳ್ಳಬಹುದಾಗಿದೆ.

ಇವನ್ನೆಲ್ಲಾ ಗಮನಿಸುವಾಗ ನಿವೃತ್ತ ಸೇನಾಧಿಕಾರಿಗಳು ಶ್ರೀರಾಮ ಸೇನೆಗೆ ತರಬೇತಿ ನೀಡುವುದರಲ್ಲಿ ಅಚ್ಚರಿಪಡಬೇಕಾದುದೇನಿಲ್ಲ. ಬಹಿರಂಗವಾಗಿ ಸೇನೆಯ ದೈಹಿಕ ಕಸರತ್ತುಗಳನ್ನು ಮಾತ್ರ ಕಲಿಸುವುದಾದರೂ, ಪರದೆಯ ಹಿಂದೆ ಯಾವೆಲ್ಲಾ ರೀತಿಯ ತರಬೇತಿಗಳನ್ನು ನೀಡಲಾಗುತ್ತದೆ ಎಂಬುದನ್ನು ಸಾಮಾನ್ಯ ಜನರು ತಿಳಿಯಲಾರರಾದರೂ ಅರ್ಥೈಸಿಕೊಳ್ಳಲು ಸಮರ್ಥರು.

ಮುತಾಲಿಕ್ ಒಬ್ಬ ಹಿಂದುತ್ವ ತಲೆಗಡರಿಸಿಕೊಂಡ ವ್ಯಕ್ತಿಯೆಂಬುದು ಇಡೀ ದೇಶವೇ ಅರಿತಿದೆ. ಪಬ್ ದಾಳಿ ನಡೆದ ಸಂದರ್ಭದಲ್ಲಿ ಜನ ಅದೆಷ್ಟು ಆಕ್ರೋಶಗೊಂಡಿದ್ದರೆಂದರೆ, ಆತನಿಗೆ ಒಳವಸ್ತ್ರವನ್ನು ಕಳಿಸುವ ಮೂಲಕ ಅದನ್ನು ಪ್ರದರ್ಶಿಸಿದ್ದರು. ಅದೇ ಮುತಾಲಿಕ್‌ನ 'ಸೇನೆ'ಗೆ ಮಿಲಿಟರಿ ವಿದ್ಯೆ ಕಲಿಸಲು ಸೇನಾಧಿಕಾರಿಗಳು ಮುಂದೆ ಬರುತ್ತಾರೆ ಎಂದಾದರೆ, ಅವರ ತಲೆಯಲ್ಲಿ ತುಂಬಿರುವ ಹಿಂದುತ್ವ ವಿಷವು ಯಾವ ಮಟ್ಟದಲ್ಲಿರಬಹುದು ಎಂಬುದನ್ನು ವಿಶ್ಲೇಷಿಸಬೇಕಾಗಿಲ್ಲ.

ಹುಬ್ಬಳ್ಳಿ ಕೋರ್ಟ್‌ನಲ್ಲಿ ನಡೆದ ಬಾಂಬ್ ಸ್ಫೋಟದ ಆರೋಪಿಗಳಲ್ಲೊಬ್ಬನಾದ ನಾಗರಾಜ ಜಂಬಗಿ ಮುತಾಲಿಕ್‌ರ ಆಪ್ತ ಸಹಚರರಲ್ಲೊಬ್ಬನಾಗಿದ್ದ. ಹಲವು ಹಿಂದುತ್ವ ಸ್ಫೋಟಗಳಲ್ಲಿ

*ಈ ಮೇಲಿನ ಎಲ್ಲಾ ವಿಷಯಗಳನ್ನೂ ಗಮನಿಸುವಾಗ ಹಿಂದುತ್ವವಾದಿ ಪ್ರಮೋದ್ ಮುತಾಲಿಕ್‌ರ 'ಸೇನೆ'ಗೆ ಮಿಲಿಟರಿ ತರಬೇತಿ ನೀಡುವುದರೊಳಗಿನ ಮರ್ಮ ಸ್ಪಷ್ಟವಾಗುತ್ತದೆ. ಸೇನಾಧಿಕಾರಿಗಳು ಹಿಂದುತ್ವವಾದಿಗಳೊಂದಿಗೆ ಕೈಜೋಡಿಸಿರುವುದು ಒಂದು ಅಪಾಯಕಾರಿ ಸೂಚನೆಯಾಗಿದೆ. ಮುಸ್ಲಿಮ್ ಸಂಘಟನೆಗಳೆಂದರೆ ಇಲ್ಲದ ವಿವಾದಗಳನ್ನು ಸೃಷ್ಟಿಸುವ ಮಾಧ್ಯಮಗಳಿಗೆ ಮಾತ್ರ ಮುತಾಲಿಕರ 'ಸೇನಾ' ತಯಾರಿಯ ಬಗ್ಗೆ ಯಾವುದೇ ಅನುಮಾನಗಳು ಉಂಟಾಗುತ್ತಿಲ್ಲ. ಮಾಧ್ಯಮಗಳು ಕೇವಲ ಮುತಾಲಿಕ್ 'ಸೇನೆ'ಯ ಒಳಿತು ಕೆಡುಕುಗಳ ಬಗ್ಗೆ ಮಾತ್ರ ಚರ್ಚೆ ನಡೆಸುತ್ತಿವೆ. ವಿನಃ ಅದು ಎಷ್ಟು ಅಪಾಯಕಾರಿ ಎಂಬುದನ್ನು ಜನರಿಗೆ ತೋರ್ಪಡಿಸುವ ಕಾಳಜಿಯನ್ನು ತೋರಿಸುತ್ತಿಲ್ಲ.*



*ಕೋಮು ಪ್ರಚೋದಕ ಭಾಷಣಗಳಿಗೆ ಸಂಬಂಧಿಸಿ ಪ್ರಮೋದ್ ಮುತಾಲಿಕ್‌ನನ್ನು ಈ ಹಿಂದೆ ಹಲವು ಬಾರಿ ಬಂಧಿಸಲಾಗಿತ್ತು.*

ಪ್ರಮುಖನಾಗಿದ್ದ ಜೋಶಿಯಂತೆಯೇ, ಜಂಬಗಿ ತನ್ನ ಸಹಚರರಿಂದಲೇ ಶಂಕಾಸ್ಪದ ರೀತಿಯಲ್ಲಿ ಹತ್ಯೆಗೀಡಾಗಿದ್ದ. ಆತನ ಹತ್ಯೆಯಾದದ್ದು ಜೈಲಿನಲ್ಲಿ. ಜೋಶಿ ಹತ್ಯೆಯ ಬಗ್ಗೆ ಸಮರ್ಪಕ ತನಿಖೆ ನಡೆಸಲು ಮಧ್ಯ ಪ್ರದೇಶದ ಬಿಜೆಪಿ ಸರಕಾರ ಹಿಂದೇಟು ಹಾಕುತ್ತಿರುವಂತೆಯೇ, ಇಲ್ಲಿ ಜಂಬಗಿ ವಿಚಾರದಲ್ಲಿಯು ಕೂಡ ಕರ್ನಾಟಕ ಸರಕಾರ ಮಾಡುತ್ತಿರುವುದು ಬೇರೆ ವಿಚಾರ. ಆದರೆ ಈ ಜಂಬಗಿ ಎಲ್ಲೆಲ್ಲಾ ಇಂತಹ ಸೈನಿಕ ತರಬೇತಿಗಳನ್ನು ಪಡೆದಿದ್ದ ಎಂಬುದು ಮುತಾಲಿಕ್‌ಗೆ ಮಾತ್ರ ತಿಳಿದ ವಿಚಾರವಾಗಿದೆ.

ಆರೆಸ್ಸೆಸ್‌ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಇಂದ್ರೇಶ್ ಕುಮಾರ್ ಹಿಂದುತ್ವ ಭಯೋತ್ಪಾದನೆಯಲ್ಲಿ ಭಾಗಿಯಾಗಿರುವುದು ಸ್ವಾಮಿ ಅಸೀಮಾನಂದನ ತಪ್ಪೊಪ್ಪಿಗೆ ಹೇಳಿಕೆಯಿಂದ ಬಹಿರಂಗವಾಗಿದೆ. ಅಜ್ಮೀರ್ ಸ್ಫೋಟಕ್ಕೆ ಇಂದ್ರೇಶ್ ಯುವಕರನ್ನು ಪೂರೈಸಿರುವುದು, ಹಿಂದುತ್ವ ಭಯೋತ್ಪಾದಕರು ಮಕ್ಕಾ ಮಸ್ಜಿದ್, ಮಾಲೆಗಾಂವ್ ಸ್ಫೋಟ, ಅಜ್ಮೀರ್ ಸ್ಫೋಟ, ಸಂಜೋತ ಎಕ್ಸ್‌ಪ್ರೆಸ್ ಸ್ಫೋಟವನ್ನೊಳಗೊಂಡಂತೆ ದೇಶವನ್ನೇ ನಡುಗಿಸಿದ ಹಲವು ಭಯೋತ್ಪಾದಕ ಕೃತ್ಯಗಳನ್ನು ನಡೆಸಿರುವುದು ತನಿಖೆಗಳಿಂದ ಬಹಿರಂಗವಾಗಿದೆ. ಮಾಲೆಗಾಂವ್ ಸ್ಫೋಟದ ಪ್ರಧಾನ ಆರೋಪಿ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ವಿಶ್ವ ಹಿಂದೂ ಪರಿಷತ್‌ನ ಸದಸ್ಯೆಯಾದರೆ, ಸುನೀಲ್ ಜೋಶಿ ಆರೆಸ್ಸೆಸ್‌ನ ಸದಸ್ಯನಾಗಿದ್ದ. ಸ್ವಾಮಿ ಅಸೀಮಾನಂದ ಆರೆಸ್ಸೆಸ್ ನಡೆಸುತ್ತಿದ್ದ ಆಶ್ರಮವೊಂದರ ಮೇಲ್ವಿಚಾರಕನಾಗಿದ್ದ.

ನಾಂದೇಡ್‌ನಲ್ಲಿ 2006ರ ಎಪ್ರಿಲ್ 6ರಂದು ಆರೆಸ್ಸೆಸ್ ಕಾರ್ಯಕರ್ತ ಲಕ್ಷ್ಮಣ್ ರಾಜ್ ಕೊಂಡ್ವಾರನ ಮನೆಯಲ್ಲಿ ಸ್ಫೋಟವೊಂದು ನಡೆದಿತ್ತು. ಈತ ನಿವೃತ್ತ ನಿರಾವರಿ ಇಂಜಿನಿಯರ್ ಆಗಿದ್ದ. ಬಾಂಬ್ ತಯಾರಿಸುತ್ತಿದ್ದ ವೇಳೆ ನಡೆದ ಈ ಸ್ಫೋಟದಲ್ಲಿ ಆತನ ಪುತ್ರ 27ರ ಹರೆಯದ ನರೇಶ್ ರಾಜ್‌ಕೊಂಡ್ವಾರ ಮತ್ತು 31ರ ಹರೆಯದ ಹಿಮಾಂಶು ಪಾನ್ಸೆ ಸತ್ತಿದ್ದರು. ಯೋಗೇಶ್ ರವೀಂದ್ರ ದೇಶ್ ಪಾಂಡೆ ವಿಧೋಲ್ಕರ್, ಮರೋಟಿ ಕಿಶೋರ್ ವಾಗ್ ಮತ್ತು ಜಯರಾಮ್ ಎಂಬವರು ಗಂಭೀರವಾಗಿ ಗಾಯಗೊಂಡಿದ್ದರು. ಇನ್ನೊಬ್ಬ ಗಾಯಾಳು ರಾಹುಲ್ ಮನೋಹರ್ ರಾವ್ ಪಾಂಡೆ ಸ್ಫೋಟ ನಡೆದ ಸ್ಥಳದಿಂದ ಪರಾರಿಯಾಗಿದ್ದರೂ, ಪೊಲೀಸರು ಆತನನ್ನು ಬಂಧಿಸುವಲ್ಲಿ ನಂತರ ಯಶಸ್ವಿಯಾಗಿದ್ದರು. ಮೊದಲು ಪೊಲೀಸರು ಇದು ಪಟಾಕಿ ವ್ಯಾಪಾರಿಯ ಮನೆಯಲ್ಲಿ ನಡೆದ ಸ್ಫೋಟವೆಂದು ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸಿದರೂ, ಇವರು ಪರ್ಭಾನಿ, ಜಲ್ನಾ ಮತ್ತು ಪುರ್ನಾದಲ್ಲಿ ಸ್ಫೋಟಗಳನ್ನು ನಡೆಸುವುದಕ್ಕಾಗಿ ಬಾಂಬ್‌ಗಳನ್ನು ಸಿದ್ಧಪಡಿಸುತ್ತಿದ್ದರು ಎಂದು ಎನ್‌ಐಎಯ ತನಿಖೆಯಿಂದ ಬೆಳಕಿಗೆ ಬಂದಿದೆ.

ಈ ಮೇಲಿನ ಎಲ್ಲಾ ವಿಷಯಗಳನ್ನೂ ಗಮನಿಸುವಾಗ ಹಿಂದುತ್ವವಾದಿ ಪ್ರಮೋದ್ ಮುತಾಲಿಕ್‌ರ 'ಸೇನೆ'ಗೆ ಮಿಲಿಟರಿ ತರಬೇತಿ ನೀಡುವುದರೊಳಗಿನ ಮರ್ಮ ಸ್ಪಷ್ಟವಾಗುತ್ತದೆ. ಸೇನಾಧಿಕಾರಿಗಳು ಹಿಂದುತ್ವವಾದಿಗಳೊಂದಿಗೆ ಕೈಜೋಡಿಸಿರುವುದು ಒಂದು ಅಪಾಯಕಾರಿ ಸೂಚನೆಯಾಗಿದೆ. ಮುಸ್ಲಿಮ್ ಸಂಘಟನೆಗಳೆಂದರೆ ಇಲ್ಲದ ವಿವಾದಗಳನ್ನು ಸೃಷ್ಟಿಸುವ ಮಾಧ್ಯಮಗಳಿಗೆ ಮಾತ್ರ ಮುತಾಲಿಕರ 'ಸೇನಾ' ತಯಾರಿಯ ಬಗ್ಗೆ ಯಾವುದೇ ಅನುಮಾನಗಳು ಉಂಟಾಗುತ್ತಿಲ್ಲ. ಮಾಧ್ಯಮಗಳು ಕೇವಲ ಮುತಾಲಿಕ್ 'ಸೇನೆ'ಯ ಒಳಿತು ಕೆಡುಕುಗಳ ಬಗ್ಗೆ ಮಾತ್ರ ಚರ್ಚೆ ನಡೆಸುತ್ತಿವೆ. ವಿನಃ ಅದು ಎಷ್ಟು ಅಪಾಯಕಾರಿ ಎಂಬುದನ್ನು ಜನರಿಗೆ ತೋರ್ಪಡಿಸುವ ಕಾಳಜಿಯನ್ನು ತೋರಿಸುತ್ತಿಲ್ಲ. ಇನ್ನೊಂದೆಡೆ ರಾಜ್ಯ ಸರಕಾರ ಶಾಲಾ ಪಠ್ಯ ಕ್ರಮಗಳಲ್ಲಿ ಭಗವದ್ಗೀತೆಯನ್ನು ಸೇರಿಸಲು ಹೊರಟಿದೆ. ಈಗಾಗಲೇ ಮಧ್ಯ ಪ್ರದೇಶದ ಬಿಜೆಪಿ ಸರಕಾರ ಸೂರ್ಯ ನಮಸ್ಕಾರ, ಭಗವದ್ಗೀತೆಗಳನ್ನು ಪಠ್ಯ ಕ್ರಮದಲ್ಲಿ ಸೇರಿಸಿದೆ. ಕರ್ನಾಟಕದಲ್ಲೂ ಜಾರಿಗೊಳಿಸಲು ಮುಂದಾಗಿದೆ.

ಇವೆಲ್ಲಾ ಒಂದು ಅಪಾಯದ ಮುನ್ಸೂಚನೆಯಾಗಿದೆ. ಇದು ಜಾರಿಗೆ ಬರುವುದು ರಾಜ್ಯದಲ್ಲಿರುವ ಜಾತ್ಯತೀತ ಜನರ ಸೋಲಾಗಲಿದೆ. ದೇಶದ ಜಾತ್ಯತೀತ ಮೌಲ್ಯಗಳನ್ನು ಉಳಿಸಲು ಎಲ್ಲಾ ಪ್ರಗತಿಪರ ಸಂಘಟನೆಗಳು ಮತ್ತು ಜನರು ಜನಜಾಗೃತಿ ಮೂಡಿಸುತ್ತಾ ಹೋರಾಟ ತೀವ್ರಗೊಳಿಸಬೇಕಾಗಿದೆ.

33ನೇ ಪುಟದಿಂದ

## ದೇವಸ್ಥಾನ, ಸ್ವಾಮೀಜಿಗಳ ಶ್ರೀಮಂತಿಕೆಯೂ



ಪತ್ರಕರ್ತನೊಬ್ಬ ಅವರು ಶೇಖರಿಸಿಟ್ಟಿದ್ದ ಸಂಪತ್ತನ್ನು ನೋಡಿ ''ಗೋಲ್ಡ್ ಸಾಯಿ ಪ್ಯಾಲೇಸ್'' ಎಂದು ಹೆಸರಿಸಿಯೇ ಬಿಟ್ಟ. ಏಕೆಂದರೆ ಅಷ್ಟು ಪ್ರಮಾಣದ ಆಭರಣಗಳು ಯಾರಿಗೂ ತಿಳಿಯದ ಹಾಗೆ ಬಾಬಾ ಬಚ್ಚಿಟ್ಟಿದ್ದರು.ತನ್ನನ್ನು ತಾನು ದೇವ ಮಾನವನೆಂದು ಘೋಷಿಸಿಕೊಂಡು ಅಪಾರವಾದ ಸಂಪತ್ತನ್ನು ಗಳಿಸಿಕೊಂಡಿದ್ದರು. ಆದರೆ ಈ ಬಾಬಾ ಮಾಡುತ್ತಿದ್ದ ಪವಾಡಗಳು ನಕಲಿ ಎಂದು ಅವರ ಸಾವಿನ ಬಳಿಕ ಸುದ್ದಿಯಾಯಿತು. ಬಾಬಾ ಏನೋ ಹೋದರು. ಆದರೆ ಅವರು ಗಳಿಸಿ ಕ್ರೋಢೀಕರಿಸಿದ್ದ ಸಂಪತ್ತು ಇಂದು ಕಂಡವರ ಸೊತ್ತಾಗುತ್ತಿದ್ದೆ. ದೇಶದ ಹಲವು ಕಡೆಗಳಲ್ಲಿ ಬಾಬಾ ಒಟ್ಟು ಗೂಡಿಸಿಟ್ಟಿದ್ದ ಹಣ ಹರಿದಾಡಲು ಪ್ರಾರಂಭಿಸಿದೆ.

ಇನ್ನು ಬಾಬಾ ರಾಮ್‌ದೇವ್ ಕೂಡ ಒಂದಷ್ಟು ಪ್ರಚಾರದಲ್ಲಿದ್ದರು. ಭ್ರಷ್ಟಾಚಾರ ವಿರೋಧಿ ಸತ್ಯಾಗ್ರಹ ಎಂದು ಜನರನ್ನು ಮರುಳುಗೊಳಿಸುತ್ತಾ ಹೋರಾಟವನ್ನು ಪ್ರಾರಂಭಿಸಿದ್ದರು. ಆದರೆ ಈ ಬಾಬಾ ರಾಮ್‌ದೇವ್ ಸನ್ಯಾಸಿಯಾಗಿದ್ದರೂ ಆತ ಕೇವಲ ಭಾರತದಲ್ಲಿ ಮಾತ್ರ ಆಸ್ತಿಯನ್ನು ಹೊಂದಿರುವುದಲ್ಲ. ಬದಲಾಗಿ ಸ್ಕಾಟ್‌ಲೆಂಡಿನಲ್ಲಿ ಒಂದು ದ್ವೀಪವನ್ನೇ ಕೊಂಡುಕೊಂಡಿದ್ದಾರೆ. ಆಯುರ್ವೇದ ಔಷಧ, ಯೋಗ ಮೊದಲಾದವುಗಳ ವ್ಯವಹಾರ ನಡೆಸತ್ತಾ 1152 ಕೋಟಿ ರೂಪಾಯಿಗಳ ಸರದಾರ ಎನಿಸಿಕೊಂಡಿದ್ದಾರೆ.

ಇನ್ನು ಧರ್ಮಸ್ಥಳ ಮಂಜುನಾಥ ದೇವಸ್ಥಾನ ಚರ್ಚೆಗೆ ಬಂದಿದ್ದು ಸಂಪತ್ತಿನ ಮೂಲಕ ಅಲ್ಲ. ಬದಲಾಗಿ ಮುಖ್ಯಮಂತ್ರಿಯು ತನ್ನ ಭ್ರಷ್ಟಾಚಾರ ಆರೋಪಗಳನ್ನು ಮರೆಮಚಲು ಆಣೆ ಪ್ರಮಾಣದ ರಾಜಕೀಯಕ್ಕಾಗಿ ಈ ಧಾರ್ಮಿಕ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಆದರೆ ಈ ಕ್ಷೇತ್ರ ಸಂಪತ್ತಿನ ವಿಷಯದಲ್ಲಿ ಚರ್ಚೆಗೆ ಗ್ರಾಸವಾಗಿಲ್ಲವಾದರೂ ಈ ಕ್ಷೇತ್ರವು ಕೂಡ ಸಂಪತ್ತಿನ ಗಳಿಕೆಯಲ್ಲಿ ಹಿಂದೆ ಬಿದ್ದಿಲ್ಲ. ಮುಖ್ಯಮಂತ್ರಿಯ ಕೃಪಾಪೋಷಣೆಯಿಂದ ಇದು ಕೂಡ ಸರಕಾರದ ಅನುದಾನವನ್ನು ಬಾಚಿಕೊಳ್ಳುತ್ತಿದೆ.

ತಿರುಪತಿಯ ಬಾಲಾಜಿ ದೇವಾಲಯಲ್ಲಿ ವಾರ್ಷಿಕ 650 ಕೋಟಿ ರೂ. ಉತ್ಪತ್ತಿ ಇದೆ. ಮಹಾರಾಷ್ಟ್ರದಲ್ಲಿರುವ ಶಿರ್ಡಿ ಸಾಯಿಬಾಬಾ ದೇವಾಲಯದ ವಾರ್ಷಿಕ ವರಮಾನ ಸುಮಾರು 450 ಕೋಟಿ ರೂ.ಗಳಷ್ಟಿವೆ. ಜಮ್ಮುವಿನಲ್ಲಿರುವ ವೈಷ್ಣೋದೇವಿ ಮಂದಿರದ ವಾರ್ಷಿಕ ವರಮಾನ 500 ಕೋಟಿ ರೂ.ಗಳಷ್ಟಿವೆ. ಹೀಗೆ ಪಟ್ಟಿ ಮಾಡುತ್ತಾ ಹೋದಂತೆ ಇನ್ನಷ್ಟು ದೇವಾಲಯಗಳು ಇವುಗಳಲ್ಲಿ ಸೇರಬಹುದು. ಹೀಗೆ ಕೋಟಿಗಟ್ಟಲೆ ರೂಪದಲ್ಲಿ ಆಸ್ತಿಗಳು ದೇವಾಲಯಗಳಲ್ಲಿ ಕ್ರೋಢೀಕರಣವಾಗುತ್ತಿದೆ.

ಹಿಂದಿನ ಕಾಲದಲ್ಲಿ ಸ್ವಾಮೀಜಿಗಳು ವೈರಾಗಿಗಳಾಗಿ ಜೀವಿಸುತ್ತಿದ್ದರು. ಅವರ ಬಳಿ ಇದ್ದುದನ್ನೆಲ್ಲವನ್ನೂ ದಾನ ಮಾಡುತ್ತಾ ಅವರು ಜನರ ಸೇವೆಯನ್ನು ಮಾಡುತ್ತಿದ್ದರು. ಆದರೆ ಈಗಿನ ಹೆಚ್ಚಿನ ಸ್ವಾಮೀಜಿಗಳ ಪರಿಸ್ಥಿತಿಯನ್ನು ನೋಡಿದರೆ ನಡೆದಾಡುವ ದೇವರೆಂದು ಬಿಂಬಿಸಿಕೊಂಡು ಶ್ರೀಮಂತರಿಂದ, ಮಧ್ಯಮವರ್ಗದವರಿಂದ ಅಪಾರ ಪ್ರಮಾಣದ ಸಂಪತ್ತನ್ನು ಬಾಚಿಕೊಳ್ಳುತ್ತಿದ್ದಾರೆ. ಜೊತೆಗೆ ಹಲವು ರೀತಿಯ ವ್ಯಾಪಾರಗಳನ್ನು ನಡೆಸುತ್ತಾ ತಮ್ಮನ್ನು ಖಜಾನೆಯನ್ನು ಭರಿಸಿಕೊಳ್ಳುತ್ತಿದ್ದಾರೆ. ಹೀಗೆ ಇಲ್ಲಿನ ಬಂಡವಾಳ ಶಾಹಿಗಳಿಗೆ ಸ್ವಿಸ್ ಬ್ಯಾಂಕ್ ರೂಪದಲ್ಲಿ ಇವರಿಗೆ ನೆರವು ನೀಡುತ್ತಿರುತ್ತಾರೆ. ಇವುಗಳೆಲ್ಲವುಗಳಿಗೆ ಕಡಿವಾಣ ಹಾಕುವ ಬದಲು ಸ್ವತಃ ನಮ್ಮ ರಾಜಕಾರಣಿಗಳು ಅವರ ಪಾದಪೂಜೆಯನ್ನು ಕಾಲ ಕಳೆಯುತ್ತಿದ್ದಾರೆ.

ನಮ್ಮ ರಾಜ್ಯದ ಮುಖ್ಯಮಂತ್ರಿಯನ್ನೇ ತೆಗೆದುಕೊಳ್ಳೋಣ. ಅವರು ಮಠ ಮಾನ್ಯಗಳಿಗೆ ಧಾರಾಳ ಅನುದಾನವನ್ನು ನೀಡುತ್ತಾರೆ. ಅವರು ಮಂಡಿಸಿದ್ದ ಬಜೆಟ್‌ಗಳನ್ನು ಮಠ

*ನಿಜವಾದ ಸ್ವಾಮೀಜಿಗಳು, ದೇವಸ್ಥಾನಗಳು ಯಾವತ್ತೂ ಸಂಪತ್ತನ್ನು ಆಶಿಸುವುದಿಲ್ಲ. ಅವುಗಳು ಎಂದೂ ತಮಗೆ ಸಂಪತ್ತು ತಂದು ಕೊಡಿ ಎಂದು ಹೇಳಿಕೊಂಡಿಲ್ಲ. ಹಿಂದಿನ ಕಾಲದಲ್ಲಿ ರಾಜರುಗಳು ತಮ್ಮಲ್ಲಿರುವ ನಿಧಿಯನ್ನು ಸಂರಕ್ಷಿಸಲು ದೇವಸ್ಥಾನಗಳ ಮೊರೆ ಹೋಗಿದ್ದರು. ಅವನ್ನು ಧಾರ್ಮಿಕ ಸ್ಥಳಗಳಲ್ಲಿ ಅವಿತಿಡುಟ್ಟಿದ್ದರು. ರಾಜರುಗಳ ಮರಣಾ ನಂತರ ಆ ಸಂಪತ್ತು ಯಾವುದೇ ರೀತಿಯಲ್ಲಿ ಚಲನೆಯಲ್ಲಿಲ್ಲ. ಈ ಪ್ರಮಾಣದಲ್ಲಿ ದೇವಸ್ಥಾನ, ಸ್ವಾಮೀಜಿಗಳ ಬಳಿಯಲ್ಲಿ ಸಂಪತ್ತು ಕ್ರೋಢೀಕರಣವಾಗುತ್ತಿದ್ದರೆ ದೇಶ ಅಭಿವೃದ್ಧಿ ಹೊಂದುವುದು ಎಂದು? ಒಂದು ಅಂದಾಜಿನ ಪ್ರಕಾರ ಅನಂತ ಪದ್ಮನಾಭ ದೇವಾಲಯದಲ್ಲಿ ದೊರೆತಿರುವ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಂಡರೆ ಕೇರಳ ರಾಜ್ಯವು ಶ್ರೀಮಂತ ರಾಜ್ಯವಾಗಿ ರೂಪುಗೊಳ್ಳಬಹುದು.*


ಶ್ರೀಮಂತ ತಿರುಪತಿ ದೇವಾಲಯ

ಮಾನ್ಯಗಳ ಬಜೆಟ್ ಎಂದು ಜನತೆ ಅಣಕಿಸಿದ್ದುಂಟು. ತನ್ನ ಸರಕಾರವು ಯಾವುದಾದರೂ ಗಂಡಾಂತರಕ್ಕೆ ಸಿಲುಕಿದಾಗ ಯಡಿಯೂರಪ್ಪ ಮೊದಲಿಗೆ ಹೋಗುವುದು ಸ್ವಾಮೀಜಿಗಳ ಬಳಿಗೆ. ಅಷ್ಟರ ಮಟ್ಟಿಗೆ ಅವರು ತಾನೋರ್ವ ಧಾರ್ಮಿಕ ವ್ಯಕ್ತಿ ಎಂದು ತೋರ್ಪಡಿಸುತ್ತಾರೆ.

ನಿಜವಾದ ಸ್ವಾಮೀಜಿಗಳು, ದೇವಸ್ಥಾನಗಳು ಯಾವತ್ತೂ ಸಂಪತ್ತನ್ನು ಆಶಿಸುವುದಿಲ್ಲ. ಅವುಗಳು ಎಂದೂ ತಮಗೆ ಸಂಪತ್ತು ತಂದು ಕೊಡಿ ಎಂದು ಹೇಳಿಕೊಂಡಿಲ್ಲ. ಹಿಂದಿನ ಕಾಲದಲ್ಲಿ ರಾಜರುಗಳು ತಮ್ಮಲ್ಲಿರುವ ನಿಧಿಯನ್ನು ಸಂರಕ್ಷಿಸಲು ದೇವಸ್ಥಾನಗಳ ಮೊರೆ ಹೋಗಿದ್ದರು. ಅವನ್ನು ಧಾರ್ಮಿಕ ಸ್ಥಳಗಳಲ್ಲಿ ಅವಿತಿಡುಟ್ಟಿದ್ದರು. ರಾಜರುಗಳ ಮರಣಾ ನಂತರ ಆ ಸಂಪತ್ತು ಯಾವುದೇ ರೀತಿಯಲ್ಲಿ ಚಲನೆಯಲ್ಲಿಲ್ಲ. ಈ ಪ್ರಮಾಣದಲ್ಲಿ ದೇವಸ್ಥಾನ, ಸ್ವಾಮೀಜಿಗಳ ಬಳಿಯಲ್ಲಿ ಸಂಪತ್ತು ಕ್ರೋಢೀಕರಣವಾಗುತ್ತಿದ್ದರೆ ದೇಶ ಅಭಿವೃದ್ಧಿ ಹೊಂದುವುದು ಎಂದು? ಒಂದು ಅಂದಾಜಿನ ಪ್ರಕಾರ ಅನಂತ ಪದ್ಮನಾಭ ದೇವಾಲಯದಲ್ಲಿ ದೊರೆತಿರುವ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಂಡರೆ ಕೇರಳ ರಾಜ್ಯವು ಶ್ರೀಮಂತ ರಾಜ್ಯವಾಗಿ ರೂಪುಗೊಳ್ಳಬಹುದು.

ಈ ಬಗ್ಗೆ ಸರಕಾರವು ಹೊಸ ನೀತಿಯನ್ನು ರೂಪಿಸಬೇಕು. ಧಾರ್ಮಿಕ ಕೇಂದ್ರಗಳಲ್ಲಿ ಅವಿತಿಡಲಾಗಿರುವ ಸಂಪತ್ತನ್ನು ದೇಶದ ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ನೂತನ ನೀತಿಯನ್ನು ರೂಪಿಸಬೇಕು. ಒಂದು ದೇಶದ ಸಂಪತ್ತು ಚಲನೆಯಲ್ಲಿಲ್ಲದಿದ್ದರೆ ಆ ದೇಶವು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ.

ನಮ್ಮ ದೇಶದ ಸಂಪತ್ತಿನ ಒಂದು ಭಾಗ ಇಲ್ಲಿನ ರಾಜಕಾರಣಿಗಳು, ಉದ್ಯಮ ಕುಳಗಳು, ಐಎಎಸ್ ಅಧಿಕಾರಿಗಳಲ್ಲಿದ್ದರೆ, ಇನ್ನೊಂದು ಭಾಗ ಸ್ವಾಮೀಜಿಗಳು, ಆಶ್ರಮಗಳು ಮತ್ತು ದೇವಸ್ಥಾನಗಳ ಪಾಲಾಗಿವೆ. ವಾಸ್ತವದಲ್ಲಿ ಇದು ಸೇರಬೇಕಾದುದು ಇಲ್ಲಿನ ಜನತೆಗೆ. 80% ಶೇಕಡ ಜನರು ಬಡತನದಲ್ಲಿರುವ, 41.6% ಮಂದಿ ವಿಶ್ವ ಸಂಸ್ಥೆ ನಿಗದಿಪಡಿಸಿದ ಬಡತನ ರೇಖೆಗಿಂತ ಕೆಳಗಿರುವ ನಮ್ಮ ದೇಶದ ದೇವಸ್ಥಾನಗಳು ಲಕ್ಷ ಕೋಟಿ ರೂಪಾಯಿಗಳ ಆಸ್ತಿಗಳನ್ನು ಹೊಂದಿರುವುದು ಅದ್ಭುತವೇ ಸರಿ. ಹಣಕ್ಕಾಗಿ ಜನರನ್ನು ಮರಳು ಮಾಡುವವರನ್ನು ದೇವ ಮಾನವರೆಂದು ಕರೆಯಲಾಗುತ್ತದೆ. ಅವರು ಗಳಿಸಿದ ದೊಡ್ಡ ಪ್ರಮಾಣದ ಸಂಪತ್ತಿನಲ್ಲಿ ಸಣ್ಣ ಪ್ರಮಾಣದಲ್ಲಿ ಜನರಿಗಾಗಿ ಆತ ವೆಚ್ಚ ಮಾಡಿದರೂ ಆತನನ್ನು ದೈವಿಕ ಸ್ವರೂಪಿಯೆಂದು ಮಾಧ್ಯಮಗಳೇ ಬಿತ್ತರಿಸುತ್ತವೆ. ಸಾಯಿಬಾಬ ಸಾಯುವ ವೇಳೆ ಆ ಬಗ್ಗೆ ವರದಿ ಮಾಡಲು ಮಾಧ್ಯಮಗಳು ತೋರಿಸಿದ ಕಾಳಜಿಯನ್ನೂ ನಾವು ಗಮನಿಸಬಹುದಾಗಿದೆ.

ಹೊಟ್ಟೆಗೆ ಸರಿಯಾಗಿ ಹಿಟ್ಟಿಲ್ಲದಿದ್ದರೂ ದೇವಸ್ಥಾನ, ಆಶ್ರಮಗಳು, ಸ್ವಾಮೀಜಿಗಳಿಗೆ ದೇಣಿಗೆ ನೀಡುವ ಬಗ್ಗೆ ಸಾಮಾನ್ಯ ಜನರು ಚಿಂತಿಸಬೇಕಾಗಿದೆ. ಆಡಳಿತ ವರ್ಗವೂ ಸಂಪತ್ತಿನ ಕ್ರೋಢೀಕರಣದ ಎಚ್ಚರಗೊಳ್ಳಬೇಕಾಗಿದೆ.

# ಕ್ಯಾಂಪಸ್ ಫ್ರಂಟ್ ರಾಜ್ಯಾಧ್ಯಕ್ಷರೊಂದಿಗೆ ಸಂದರ್ಶನ

*ಶಾಲಾ ಕಾಲೇಜುಗಳಲ್ಲಿ ಬಿಜೆಪಿ ಸರಕಾರವು ಭಗವದ್ಗೀತೆಯನ್ನು ಬೋಧಿಸಲು ಹೊರಟಿದೆ. ಇದು ಶಿಕ್ಷಣದ ಕೇಸರೀಕರಣದ ಭಾಗವಾಗಿದೆ. ಈ ಬಗ್ಗೆ ಪ್ರಸ್ತುತ ಪಾಕ್ಷಿಕವು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಜ್ಯಾಧ್ಯಕ್ಷರೊಂದಿಗೆ ಸಂದರ್ಶನ ನಡೆಸಿತು.*

**ಪ್ರಸ್ತುತ: ಶಾಲಾ-ಕಾಲೇಜುಗಳಲ್ಲಿ ಭಗವದ್ಗೀತೆಯನ್ನು ಬೋಧಿಸಲು ರಾಜ್ಯ ಸರಕಾರವು ಸುತ್ತೋಲೆ ಹೊರಡಿಸಿದೆ. ಈ ಬಗ್ಗೆ ತಾವೇನು ಹೇಳುತ್ತೀರಿ?**

ಶಾಕೀರ್: ಶಾಲಾ ಕಾಲೇಜುಗಳಲ್ಲಿ ಭಗವದ್ಗೀತೆ ಬೋಧಿಸಲು ಸರಕಾರ 'ಸುತ್ತೋಲೆ ಹೊರಡಿಸಿರುವುದು ಸಂಪೂರ್ಣವಾಗಿ ಸಂವಿಧಾನಕ್ಕೆ ವಿರುದ್ಧವಾದದ್ದಾಗಿದೆ. ಸಂವಿಧಾನವು ಎಲ್ಲಾ ಧರ್ಮಗಳನ್ನೂ ಸಮಾನವಾಗಿ ನೋಡುತ್ತದೆ. ಇದರ ಮಧ್ಯೆ ಶಾಲೆಗಳಲ್ಲಿ ಕೇವಲ ಒಂದು ಧರ್ಮದ ಧರ್ಮ ಗ್ರಂಥವನ್ನು ಬೋಧಿಸುವುದು ಸರಿಯಲ್ಲ. ಇದು ಸ್ಪಷ್ಟವಾಗಿ ಧಾರ್ಮಿಕ ಅಸಮಾನತೆಯಾಗಿದೆ. ಜಾತ್ಯತೀತ ಮನೋಭಾವನೆಯುಳ್ಳ ಪ್ರತಿಯೊಬ್ಬನೂ ಇದನ್ನು ವಿರೋಧಿಸಬೇಕಾಗಿದೆ.

ಒಂದು ವೇಳೆ ಬೋಧಿಸುವುದಾದರೆ ಕುರ್‌ಆನ್, ಬೈಬಲ್ ಸೇರಿದಂತೆ ಎಲ್ಲಾ ಧರ್ಮಗ್ರಂಥಗಳನ್ನೂ ಸರಕಾರ ಬೋಧಿಸಬೇಕಾಗಿದೆ.

**ಪ್ರಸ್ತುತ: ಶಾಲೆಗಳಲ್ಲಿ ಭಗವದ್ಗೀತೆ ಬೋಧಿಸುವುದರಿಂದ ಸಮಾಜದಲ್ಲಿ ಯಾವ ರೀತಿಯ ಪರಿಣಾಮಗಳು ಉಂಟಾಗಬಹುದು?**

ಶಾಕೀರ್: ಸರಕಾರದ ಈ ನಿರ್ಧಾರದಿಂದ ವಿದ್ಯಾರ್ಥಿಗಳ ನಡುವೆ ಕೋಮುವಾದ ಮತ್ತು ಜಾತಿವಾದ ಮೊಳಕೆಯೊಡೆಯುವ ಸಾಧ್ಯತೆಯಿದೆ. ಇದು ರಾಜ್ಯದಲ್ಲಿ ಕೋಮುವಾದಿ ಅಜೆಂಡಾವನ್ನು ಜಾರಿಗೊಳಿಸುವ ಬಿಜೆಪಿ ಸರಕಾರದ ಹುನ್ನಾರಗಳಲ್ಲಿ ಒಂದಷ್ಟೇ. ಮಧ್ಯ ಪ್ರದೇಶದಲ್ಲೂ ಬಿಜೆಪಿ ಸರಕಾರ ಶಾಲೆಯಲ್ಲಿ ಸೂರ್ಯ ನಮಸ್ಕಾರ, ಭಗವದ್ಗೀತೆ ಬೋಧನೆಗಳನ್ನು ಜಾರಿಗೊಳಿಸಿದೆ. ಇದು ರಾಜ್ಯವು ಅಪಾಯಕಾರಿ ಹೆಜ್ಜೆಯನ್ನಿಡುತ್ತಿರುವುದಕ್ಕೆ ಮುನ್ಸೂಚನೆಯಾಗಿದೆ. ಬಿಜೆಪಿ ಸರಕಾರವು ಅಧಿಕಾರಕ್ಕೆ ಬಂದಂದಿನಿಂದ ರಾಜ್ಯದಲ್ಲಿ ಜಾತ್ಯತೀತ ಮೌಲ್ಯಗಳು ನಾಶವಾಗುತ್ತಿದ್ದು ಜನ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದೆ.

**ಪ್ರಸ್ತುತ: ಸರಕಾರದ ಈ ನಿರ್ಧಾರದ ವಿರುದ್ಧ ಕ್ಯಾಂಪಸ್ ಫ್ರಂಟ್ ಹೋರಾಡಲಿದೆಯೇ?**

ಶಾಕೀರ್: ಸರಕಾರವು ತಕ್ಷಣವೇ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕಾಗಿದೆ. ದೇಶದ ಸಂವಿಧಾನದ ಮೌಲ್ಯವನ್ನು



ಮುಹಮ್ಮದ್ ಶಾಕೀರ್

ರಕ್ಷಿಸುವುದಕ್ಕಾಗಿ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಇತರ ಸಮಾನ ಮನಸ್ಕ ವಿದ್ಯಾರ್ಥಿ, ಯುವ, ಸಾಮಾಜಿಕ ಸಂಘಟನೆಗಳ ಜೊತೆ ಸೇರಿ ತೀವ್ರ ಹೋರಾಟವನ್ನು ನಡೆಸಲಿದೆ.

**ಪ್ರಸ್ತುತ: ಕೋಲಾರದ ಕಾಲೇಜೊಂದರಲ್ಲಿ ಭಗವದ್ಗೀತೆಯನ್ನು ಬೋಧಿಸುತ್ತಿದ್ದ ಸಂದರ್ಭ ಪ್ರತಿಭಟನೆ ನಡೆಸಿದ ವಿದ್ಯಾರ್ಥಿ ಸಂಘಟನೆಯೊಂದರ ನಾಯಕನನ್ನು ಬಂಧಿಸಲಾಗಿದೆ. ಈ ಬಗ್ಗೆ ನಿಮ್ಮ ಸಂಘಟನೆಯ ನಿಲುವೇನು?**

ಶಾಕೀರ್: ಕೋಲಾರದಲ್ಲಿ ಪದವಿ ಪೂರ್ವ ಕಾಲೇಜೊಂದರಲ್ಲಿ ಪರೀಕ್ಷೆ ನಡೆಯುತ್ತಿದ್ದ ವೇಳೆ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಶಿರಸಿ ಮಠದ ಗಂಗಾಧೇಶ್ವರ ಸರಸ್ವತಿ ಸ್ವಾಮೀಜಿಗಳು ಧ್ವನಿವರ್ಧಕ ಬಳಸಿ ಭಾಷಣ ಮಾಡಿದ್ದರ ವಿರುದ್ಧ ಪ್ರತಿಭಟಿಸಿದ ಎಸ್‌ಎಫ್‌ಐ ನಾಯಕನನ್ನು ಬಂಧಿಸಲಾಗಿದೆ. ಇದನ್ನು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ತೀವ್ರವಾಗಿ ಖಂಡಿಸುತ್ತದೆ. ಮುಖ್ಯವಾಗಿ ಇಲ್ಲಿ ಬಂಧಿಸಬೇಕಾಗಿರುವುದು ಸ್ವಾಮೀಜಿಗಳನ್ನಾಗಿದೆ. ಅಲ್ಲದೆ ಭಗವದ್ಗೀತೆ ಬೋಧನೆಗೆ ಬೆಂಬಲ ಸೂಚಿಸಿ ಎಬಿವಿಪಿಯವರು ಸಭೆ ನಡೆಸಿದಾಗ ಅವರನ್ನು ಬಂಧಿಸಲಾಗಿಲ್ಲ. ಸರಕಾರದ ಪಕ್ಷಪಾತಿ ನಿಲುವನ್ನು ಕೂಡ ಸಂಘಟನೆಯು ತೀವ್ರವಾಗಿ ಖಂಡಿಸುತ್ತದೆ.

# ಕಾರ್ಪೊರೇಟರ್ ನಾಝ್ನೀನ್ ಬೇಗಂಗೆ ಡಾಕ್ಟರೇಟ್



ಚೆನ್ನೈ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಷ್ಟ್ರೀಯ ಉಪಾಧ್ಯಕ್ಷೆ ಹಾಗೂ ಬಿಬಿಎಂಪಿ ಕಾರ್ಪೊರೇಟರ್ ಪ್ರೊ.ನಾಝ್ನೀನ್ ಬೇಗಂರನ್ನು ಚೆನ್ನೈಯ ಫ್ಲೋರಿಡಾ ಯುನಿವರ್ಸಿಟಿ ಡಾಕ್ಟರೇಟ್ ನೀಡಿ ಗೌರವಿಸಿದೆ.

ತನ್ನ ವಿಶೇಷ ಸಾಮಾಜಿಕ ಸೇವೆಗಾಗಿ ನಾಝ್ನೀನ್ ಬೇಗಂಗೆ ಈ ಗೌರವ ದೊರೆತಿದೆ. ನಾಝ್ನೀನ್ ಬೇಗಂ 2010ರಲ್ಲಿ ನಡೆದ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಎಸ್‌ಡಿಪಿಐಯಿಂದ ಪಾದರಾಯಣಪುರ ವಾರ್ಡ್‌ನಿಂದ ಜಯಗಳಿಸಿದ್ದರು.

## ಪಠ್ಯ ಕ್ರಮದಲ್ಲಿ ಭಗವದ್ಗೀತೆ: ಕ್ಯಾಂಪಸ್ ಫ್ರಂಟ್ ಖಂಡನೆ

ಮಂಗಳೂರು: ಕರ್ನಾಟಕದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಭಗವದ್ಗೀತೆಯನ್ನು ಕಲಿಸುವ ಬಿಜೆಪಿ ಸರಕಾರದ ನಿರ್ಧಾರವು ದೇಶದ ಜಾತ್ಯತೀತತೆಗೆ ಮಾರಕವಾಗಿದ್ದು, ಇದನ್ನು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ತೀವ್ರವಾಗಿ ಖಂಡಿಸಿದೆ.

ಸರಕಾರದ ಈ ನಿರ್ಧಾರವು ರಾಜ್ಯವನ್ನು ಕೇಸರೀಕರಣಗೊಳಿಸುವುದರ ಒಂದು ಭಾಗವಾಗಿದೆ. ಇದರಿಂದ ಎಳೆಯ ಮಕ್ಕಳ ಮನಸ್ಸಿನಲ್ಲಿ ಕೋಮುಭಾವನೆ ಮೊಳಕೆಯೊಡೆಯುವ ಸಾಧ್ಯತೆಗಳಿವೆ. ಅಲ್ಲದೆ ಎಲ್ಲಾ ಧರ್ಮಗಳನ್ನು ಸಮಾನವಾಗಿ ಪರಿಗಣಿಸಬೇಕಾದ ನಮ್ಮ ದೇಶದ ಶಾಲೆಗಳಲ್ಲಿ ಒಂದೇ ಧರ್ಮದ ಧಾರ್ಮಿಕ ಗ್ರಂಥವನ್ನು ಕಲಿಸುವುದು ಧಾರ್ಮಿಕ ತಾರತಮ್ಯವಾಗಿದ್ದು, ಇದು ಸಂವಿಧಾನಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಮುಂದಿನ ದಿನಗಳಲ್ಲಿ ಇತರ ಧರ್ಮೀಯರು ತಮ್ಮ ಪವಿತ್ರ ಗ್ರಂಥಗಳನ್ನೂ ಶಾಲೆಯಲ್ಲಿ ಪಠ್ಯ ಕ್ರಮವಾಗಿ ಸೇರಿಸುವಂತೆ ಪಟ್ಟು ಹಿಡಿದರೆ ಅದು ಸಮಸ್ಯೆಗೆ ಎಡೆಮಾಡಿಕೊಡಲಿದೆ ಕ್ಯಾಂಪಸ್ ಫ್ರಂಟ್ ರಾಜ್ಯ ಕಾರ್ಯದರ್ಶಿ ತುಫೈಲ್ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮಧ್ಯ ಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರಕಾರವೂ ಶಾಲೆಯಲ್ಲಿ ಸೂರ್ಯ ನಮಸ್ಕಾರ, ಭಗವದ್ಗೀತೆಗಳನ್ನು ಪಠ್ಯ ಕ್ರಮದಲ್ಲಿ ಸೇರಿಸಿದ್ದು, ಇವೆಲ್ಲಾ ಹಿಂದುತ್ವ ಅಜೆಂಡಾಗಳನ್ನು ಕಾರ್ಯರೂಪಕ್ಕೆ ತರುವ ಬಿಜೆಪಿಯ ತಂತ್ರಗಳಾಗಿವೆ ಎಂದು ಅವರು ಹೇಳಿದ್ದಾರೆ.

## ಮುಸ್ಲಿಮ್ ಮೀಸಲಾತಿಗಾಗಿ ಹೋರಾಟ ತೀವ್ರಗೊಳಿಸಲು ಪಾಪ್ಯುಲರ್ ಫ್ರಂಟ್ ನಿರ್ಧಾರ

ಕೋಝಿಕ್ಕೋಡ್: ಜಸ್ಟಿಸ್ ರಂಗನಾಥ ಮಿಶ್ರಾ ಆಯೋಗವು ಶಿಫಾರಸು ಮಾಡಿದಂತೆ ಮುಸ್ಲಿಮರು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕೋಟ ಮೀಸಲಾಯಿತಿಗಾಗಿ ಹೋರಾಟವನ್ನು ತೀವ್ರಗೊಳಿಸಲು ಇಲ್ಲಿ ನಡೆದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯು ನಿರ್ಧರಿಸಿದೆ.

ಕೇಂದ್ರ ಸರಕಾರದ ಹುದ್ದೆಗಳಲ್ಲಿ ಹಾಗೂ ವಿದ್ಯಾ ಸಂಸ್ಥೆಗಳಲ್ಲಿ 15 ಶೇಕಡ ಮೀಸಲಾತಿ ನೀಡಬೇಕು ಮತ್ತು ಅದರಲ್ಲಿ 10 ಶೇಕಡವನ್ನು ಪ್ರತ್ಯೇಕವಾಗಿ ಮುಸ್ಲಿಮ್ ಸಮುದಾಯಕ್ಕೆ ನೀಡಬೇಕೆಂದು ಶಿಫಾರಸ್ಸು ಮಾಡಿರುವ ವರದಿಯನ್ನು 2009ರ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ಆದರೆ ಯುಪಿಎ ಸರಕಾರ ಇದರ ಜಾರಿಗಾಗಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಸಭೆ ದೂರಿದೆ.

ಮುಸ್ಲಿಮ್ ಮೀಸಲಾತಿಯ ವಿಷಯದಲ್ಲಿ ಇತರ ರಾಜಕೀಯ ಪಕ್ಷಗಳೂ ಯಾವುದೇ ಆಸಕ್ತಿಯನ್ನು ತೋರುತ್ತಿಲ್ಲ. ಈ ವಿಷಯದ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಇದುವರೆಗೆ ಗಂಭೀರವಾದ ಚರ್ಚೆಯೂ ನಡೆಯದಿರುವುದು ಮುಖ್ಯವಾಹಿನಿ ರಾಜಕೀಯ ಪಕ್ಷಗಳ ಉದಾಸೀನತೆಯನ್ನು ತೋರ್ಪಡಿಸುತ್ತದೆ ಎಂದು ಸಭೆ ಅಭಿಪ್ರಾಯಿಸಿದೆ.

# ಗ್ವಾಂಟೆನಾಮೊದಲ್ಲಿ ಇಸ್ಲಾಮ್ ಸ್ವೀಕರಿಸಿದ ಅಮೆರಿಕ ಸೈನಿಕ

# ಬದಲಾವಣೆಗೆ ಕೈದಿಗಳೇ ಪ್ರೇರಣೆ

● ಶೌಕತ್ ಅಲಿ, ಎಸ್.

ಸೌದಿ ಅರೇಬಿಯಾ: ತಾಲಿಬಾನ್ ಮತ್ತು ಅಲ್ ಖಾಯಿದಾದ ಮುಸ್ಲಿಮ್ ಕೈದಿಗಳನ್ನು ಇಡಲಾಗುವ ಕುಖ್ಯಾತ ಗ್ವಾಂಟೆನಾಮೊ ಜೈಲಿನಲ್ಲಿ ಸೇನಾ ಭದ್ರತಾ ಸಿಬ್ಬಂದಿಯಾಗಿ ಸೇರುವಾಗ ಅಮೆರಿಕದ ಸೈನಿಕ ಟೆರ್ರಿ ಬ್ರೂಕ್ಸ್‌ಗೆ ತಾನು ಆ ಕೈದಿಗಳ ಧರ್ಮವನ್ನು ಅನುಸರಿಸಲಿರುವೆನೆಂದು ಬಹುಶ: ಆಗ ತಿಳಿದಿರಲಿಲ್ಲ. 2003ರಲ್ಲಿ ಮೊರೊಕ್ಕೊದ ಕೈದಿಯೊಬ್ಬನೊಂದಿಗೆ ಕೆಲವು ಕಾಲ ಚರ್ಚೆಗಳನ್ನು ನಡೆಸಿದ ನಂತರ ಬ್ರೂಕ್ಸ್ ಇಸ್ಲಾಮ್ ಸ್ವೀಕರಿಸಿದ್ದಾರೆ.

ಪಶ್ಚಿಮ ಸೌದಿ ಅರೇಬಿಯಾದ ಮದೀನಾ ನಗರದಲ್ಲಿ ಪ್ರಾರ್ಥನೆ ನಡೆಸುತ್ತಿರುವಾಗ ಬ್ರೂಕ್ಸ್ ಸ್ಥಳೀಯ ಪತ್ರಕರ್ತರ ಕಣ್ಣಿಗೆ ಬಿದ್ದಿದ್ದಾರೆ. ಅಲ್ಲಿ ಪ್ರಾರ್ಥನೆಯ ಬಳಿಕ ಅವರು ತನ್ನ ಮೊದಲ ಉಮ್ರಾಕ್ಕಾಗಿ ಮಕ್ಕಾಗೆ ತೆರಳಲಿದ್ದರು.

ಸೌದಿಯ ಅರೇಬಿಕ್ ಮಾಧ್ಯಮವೊಂದು ಬ್ರೂಕ್ಸ್‌ರನ್ನು ಮಾತನಾಡಿಸಿದಾಗ ತಾನು ಇಸ್ಲಾಮ್ ಧರ್ಮವನ್ನು ಅನುಸರಿಸಿರುವುದರ ಕ್ರೆಡಿಟ್ ಮೊರಕ್ಕೊದ '590 ನಂಬರ್‌ನ ಬಂದಿಖಾನೆ'ಯಲ್ಲಿರುವ ಅಹ್ಮದ್ ಅಲ್ ರಷ್ದಿಗೆ ಸಲ್ಲಬೇಕೆಂದಿದ್ದಾರೆ. ಜಾತ್ಯತೀತವೆಂದು ಹೇಳಿಕೊಳ್ಳುವ ಅಮೆರಿಕ ಇಸ್ಲಾಮ್ ಸ್ವೀಕರಿಸಿದ ಬಳಿಕ ಬ್ರೂಕ್ಸ್‌ನನ್ನು ಕರ್ತವ್ಯದಿಂದ ವಜಾ ಮಾಡಿರುವುದು ಅಚ್ಚರಿಯ ಸಂಗತಿ.

2003ಕ್ಕೂ ಹಿಂದೆಯೇ ತನ್ನನ್ನು ಗ್ವಾಂಟೆನಾಮೊಗೆ ಕಳುಹಿಸಲಾಗಿತ್ತು ಮತ್ತು ನಂತರ ಅಲ್ಲಿ ಕೆಲವು ಕೈದಿಗಳೊಂದಿಗೆ ಬೆರೆಯಲು ಆರಂಭಿಸಿದೆ ಎಂದು ಬ್ರೂಕ್ಸ್ ಹೇಳಿದ್ದಾರೆ.

''ಆ ಶ್ರೇಷ್ಠ ಗಳಿಗೆಯನ್ನು ನಾನು ಈಗಲೂ ನೆನಪಿಸುತ್ತೇನೆ. 2003ರಲ್ಲಿ ನಾನು ಇಸ್ಲಾಮ್ ಸ್ವೀಕರಿಸುವಾಗ ಸಮಯ ಮಧ್ಯಾಹ್ನ 12:49 ಆಗಿತ್ತು. ಅಲ್ ರಶಾದಿಯೊಂದಿಗೆ ಹಲವು ಬಾರಿ ಚರ್ಚಿಸಿದ ನಂತರ ನಾನು ಈ ನಿರ್ಧಾರವನ್ನು ತೆಗೆದುಕೊಂಡಿದ್ದೆ'' ಎಂದು



ಮುಸ್ತಫಾ ಅಬ್ದುಲ್ಲಾ

ಅವರು ಹೇಳಿದರು.

''ಅದು ನನ್ನ ಜೀವನದಲ್ಲಿ ಅತ್ಯಂತ ಸ್ಮರಣೀಯ ಗಳಿಗೆಯಾಗಿದೆ. ನಾನು ಇಸ್ಲಾಮ್ ಸ್ವೀಕರಿಸುವ ವೇಳೆ ಹಲವು ಕೈದಿಗಳು ನನ್ನ ಸುತ್ತ ಕುಳಿತುಕೊಂಡಿದ್ದರು ಮತ್ತು ನನ್ನನ್ನು ಮುಸ್ತಫಾ ಎಂದು ಕರೆಯಲು ನಿರ್ಧರಿಸಿದರು. ನಂತರ ನಾನು ನನ್ನ ಹೆಸರಿಗೆ ಅಬ್ದುಲ್ಲಾವನ್ನು ಸೇರಿಸಿದೆ. ಈಗ ನನ್ನನ್ನು ಮುಸ್ತಫಾ ಅಬ್ದುಲ್ಲಾ ಎಂದು ಕರೆಯಲಾಗುತ್ತದೆ'' ಎಂದರು.

ಈ ಹಿಂದೆ ಒಮ್ಮೆಯೂ ಗ್ವಾಂಟೆನಾಮೊ ಜೈಲನ್ನು ಕಾಣದಿರುವುದರಿಂದ ಅಮೆರಿಕ ಸೇನೆಯು ತನ್ನನ್ನು ಇಲ್ಲಿಗೆ ನಿಯೋಜಿಸಿದಾಗ ತುಂಬಾ ಸಂತೋಷಗೊಂಡಿದ್ದೆ ಎಂದು ಬ್ರೂಕ್ಸ್ ಹೇಳಿದ್ದಾರೆ.

''ನಾನು ಅಲ್ಲಿಗೆ ತಲುಪಿದಾಗ ನನಗೆ ದೊಡ್ಡ ಆಘಾತವಾಗಿತ್ತು. ಬಂದೀಖಾನೆಯ ಕಟ್ಟಡದೊಳಗೆ ಪ್ರವೇಶಿಸುವುದಕ್ಕೆ ಮೊದಲೇ



ಇದೊಂದು ಭಯಾನಕವೆಂದು ನನಗೆ ತೋರಿತ್ತು ಮತ್ತು ಇದು ಪಾಪಸು ಕಳ್ಳಿಗಳು ಮತ್ತು ವಿಷ ಪೂರಿತ ಉರಗಗಳಿಗೆ ಮಾತ್ರ ಹೊಂದಬಹುದು ಎಂದು ಭಾವಿಸಿದ್ದೆ. ಇಲ್ಲಿ ಬಂಧನದಲ್ಲಿರುವ ಜನ ನಿಜವಾಗಲೂ ಇಂತಹ ಭದ್ರತಾ ಕ್ರಮವನ್ನು ಕೈಗೊಳ್ಳಬೇಕಾದಷ್ಟು ಅಪಾಯಕಾರಿಗಳೇ ಎಂದು ನಾನು ಭಾವಿಸಿದ್ದೆ'' ಎಂದು ಬ್ರೂಕ್ಸ್ ಹೇಳಿದರು.

ಅಲ್ ರಶ್ದಿ ಮತ್ತು ಇತರ ಕೈದಿಗಳೊಂದಿಗೆ ಇಸ್ಲಾಮ್, ಫೆಲೆಸ್ತೀನ್, ಅಫ್ಘಾನಿಸ್ತಾನ ಮತ್ತು ಮಧ್ಯ ಪ್ರಾಚ್ಯಗಳ ಬಗ್ಗೆ ಅರಿತಾಗ ತಾನು ಇಸ್ಲಾಮ್‌ನತ್ತ ಆಕರ್ಷಿತನಾದೆ ಎಂದು ಬ್ರೂಕ್ಸ್ ಹೇಳುತ್ತಾರೆ.

‘ರಾತ್ರಿ ವೇಳೆಯಲ್ಲಿ ಅವರ ಸೆಲ್‌ಗಳ ಹೊರಗಡೆ ಕುಳಿತು ಅವರ ಮಾತುಗಳನು ಕೇಳುತ್ತಿದ್ದೆ. ಆ ಸಂದರ್ಭದಲ್ಲಿ ನಮ್ಮ ನಡುವೆ ಒಂದು ರೀತಿಯ ಗೌರವ ಭಾವವುಂಟಾಯಿತು. ಗ್ವಾಂಟೆನಾಮೊ ತಲುಪುವ ಮೊದಲು ನಾನು ದೇವರ ಬಗ್ಗೆ ನಂಬಿಕೆ ಹೊಂದಿರಲಿಲ್ಲ. ಈಗ ನಾನು ಇಸ್ಲಾಮನ್ನು ಸ್ವೀಕರಿಸಿದ್ದೇನೆ. ಈಗ ನಾನು ಈ ಧರ್ಮದ ರುಚಿಯನ್ನು ಅನುಭವಿಸುತ್ತಿದ್ದೇನೆ. ಇಸ್ಲಾಮ್ ಒಂದು ಶುದ್ಧ ಧರ್ಮ ಮತ್ತು ಅಂತಿಮ ಸತ್ಯ'' ಎಂದು ಬ್ರೂಕ್ ಹೇಳುತ್ತಾರೆ.

ತಾನು ಇಸ್ಲಾಮ್ ಸ್ವೀಕರಿಸಿರುವುದನ್ನು ಗ್ವಾಂಟೆನಾಮೊದಲ್ಲಿರುವ ಇತರ ಅಮೆರಿಕ ಸೈನಿಕರಿಂದ ಮುಚ್ಚಿಡಲು ಬಯಸಿದ್ದೆ. ಆದರೆ ನಮ್ಮ ಅಧಿಕಾರಿಯು ಇದನ್ನು ತಿಳಿದಾಗ ಆತ ಮತ್ತು ಇತರ ಸೈನಿಕರು ತನ್ನೊಂದಿಗೆ ಕ್ರೂರವಾಗಿ ನಡೆದುಕೊಂಡರು ಮತ್ತು ತಾನು ಅಮೆರಿಕಕ್ಕೆ ಮೋಸ ಮಾಡುತ್ತಿರುವುದಾಗಿ ಹೇಳಿದರು. ತನ್ನ ಗುತ್ತಿಗೆಯು ಮುಗಿಯುವುದಕ್ಕೆ 2 ವರ್ಷ ಮೊದಲೇ ತನ್ನನ್ನು ಸೇನೆಯಿಂದ ವಜಾಗೊಳಿಸಲಾಯಿತು ಎಂದು ಬ್ರೂಕ್ ಹೇಳಿದ್ದಾರೆ.

‘ಇಸ್ಲಾಮ್ ಸ್ವೀಕರಿಸುವುದಕ್ಕೆ ನನಗುಂಟಾದ ಅನುಭವಗಳ ಬಗ್ಗೆ ನಾನು ಪುಸ್ತಕವನ್ನು ಬರೆಯುತ್ತಿದ್ದೇನೆ. ಗ್ವಾಂಟೆನಾಮೊದಲ್ಲಿರುವ ಕೈದಿಗಳಿಗೆ ನೆರವಾಗುವುದಕ್ಕಾಗಿ ನಾನು ಅಮೆರಿಕದಲ್ಲಿ ಕೆಲಸವನ್ನು ತೊರೆದಿದ್ದೇನೆ. ಆ ಜೈಲಿನಲ್ಲಿ ಏನು ನಡೆಯುತ್ತಿದೆಯೋ, ಅದು ನಿಜವಾಗಿಯೂ ಅಮಾನವೀಯ ಮತ್ತು ಮಾನವಹಕ್ಕುಗಳ ಕನಿಷ್ಠ ತತ್ವಗಳನ್ನೂ ಅಲ್ಲಿ ಉಲ್ಲಂಘಿಸಲಾಗುತ್ತಿದೆ'' ಎಂದು ಅವರು ಹೇಳಿದರು.

# ಅಮ್ಮ

ಅಮ್ಮ ನಾ ಕೇಳಲಿಲ್ಲ ಏನನ್ನೂ
ಬಯಸಿದೆ ಕೇವಲ ನಿನ್ನ ಆಸರೆಯನ್ನು
ಕೇಳಲಿಲ್ಲ ನಾ ನಿನಗೆ ಜನ್ಮ ಕೊಡು ಎಂದು
ಆದರೆ ಏನಾಯಿತು ನಿನಗೆ ಇಂದು?
ಮಲಗಿದ್ದೆ ನಿನ್ನ ಉದರವೆಂಬ
ಬೆಚ್ಚನೆಯ ಮಂಚದಲ್ಲಿ
ದಿನ ದೂಡುತ್ತಿದ್ದೆ
ನಿನ್ನ ನೋಡುವ ತವಕದಲಿ
ಕೊನೆಗೂ ತಿಳಿಯಿತೆ ನಿನಗೆ ನಾ ಹೆಣ್ಣೆಂದು!
ನಂಬಿದೆ ನೀ ಹೆಣ್ಣು ಕುಲವ ಶಾಪವೆಂದು!
ನಾನಂದು ನಿದ್ರೆಯ ಮಂಪರಿಗೆ ಜಾರಿದ್ದೆ
ಸುಂದರ ಕನಸುಗಳ ಕಾಣುತ್ತಿದ್ದೆ
ಚುಚ್ಚಿದರು ನನ್ನ... ಕೊಂದೇ ಬಿಟ್ಟರು
ಮಾನವೀಯತೆ ಇಲ್ಲದ ರಾಕ್ಷಸರು
ನಾ ಅತ್ತೆ, ಬೇಡಿದೆ... ಕಾಡಿದೆ
ನೋವಿನಿಂದ ಚೀರಾಡಿದೆ
ಅಮ್ಮ ನೀ ಮನಸ್ಸು ಮಾಡಿದರೆ
ನಾನಂದು ಉಳಿಯುತ್ತಿದ್ದೆ
ನಿನ್ನ ಮನದಂಗಳದಲ್ಲಿ ನಲಿಯುತ್ತಿದ್ದೆ
ನಿನ್ನ ಪ್ರೀತಿಯ ಮಗಳಾಗಿ ಬಾಳುತ್ತಿದ್ದೆ
ಆದರೆ ಅಮ್ಮ ನಾ ನಿನಗೆ ಬೇಡವಾದೆ
ಯಾಕೀಗೆ ಮಾಡಿದೆ...?
ಹೆಣ್ಣೆಂದೇ... ಕೀಳೆಂದೆ...?
ನೀನೂ ಹೆಣ್ಣು ಎಂಬುದನ್ನು ಮರೆತೆಯಾ...?
ಅಲ್ಲ ನಾ ನಿನಗೆ ಹೊರೆಯಾದೆಯಾ...?
ಯಾಕಮ್ಮ ನೀನಷ್ಟು ಕ್ರೂರಿಯಾದೆ...?
ಕೊನೆಗೂ ನಾ ನಿನಗೆ ಬೇಡವಾದೆ...?

ರೇಶ್ಮಾ ಝೂಕೀರ್, ಮುಲ್ಕಿ

## ■ ಪುತ್ತೂರು: ಎಸ್‌ಡಿಪಿಐಯಿಂದ ಉಚಿತ ಪುಸ್ತಕ ವಿತರಣೆ

ಪುತ್ತೂರು: ಸೊಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಇದರ ವತಿಯಿಂದ ಇತ್ತೀಚೆಗೆ ಬನ್ನೂರು ಜಂಕ್ಷನ್‌ನಲ್ಲಿ ಬಡ ಮಕ್ಕಳಿಗೆ ಪುಸ್ತಕ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಎಸ್‌ಡಿಪಿಐ ಪುತ್ತೂರು ನಗರ ಸಮಿತಿಯ ಉಪಾಧ್ಯಕ್ಷ ಅಬ್ದುಲ್ ರಹಿಮಾನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಜಿಲ್ಲಾಧ್ಯಕ್ಷ ಸಿದ್ದೀಕ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ವೇದಿಕೆಯಲ್ಲಿ ಉಪಸ್ಥಿತರಿರುವ ಗಣ್ಯರು.

ಮುಖ್ಯ ಅತಿಥಿಗಳಾಗಿ ಎಸ್‌ಡಿಪಿಐ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಸಲೀಂ ಗುರುವಾಯನಕೆರೆ, ಕ್ಯಾಂಪಸ್ ಫ್ರಂಟ್ ಕರ್ನಾಟಕ ರಾಜ್ಯ ಕಾರ್ಯದರ್ಶಿ ತುಫೈಲ್, ಎಸ್‌ಡಿಪಿಐ ಪುತ್ತೂರು ವಿಧಾನಸಭಾ ಸಮಿತಿ ಅಧ್ಯಕ್ಷ ಅಬ್ದುಲ್ ಹಮೀದ್ ಸಾಲ್ಮರ, ಪಾಪ್ಯುಲರ್ ಫ್ರಂಟ್ ಪುತ್ತೂರು ವಲಯ ಕಾರ್ಯದರ್ಶಿ ಶರೀಫ್, ಜಿಲ್ಲಾ ಸಮಿತಿ ಸದಸ್ಯ ಪಿಬಿಕೆ, ಉದ್ಯಮಿ ವಹಾಬ್ ಸಲೀಂ, ಎಸ್‌ಡಿಪಿಐ ಬನ್ನೂರು ವಲಯಾಧ್ಯಕ್ಷ ಜಬ್ಬಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಗರ ಸಮಿತಿ ಪ್ರಧಾನ ಕಾರ್ಯದರ್ಶಿ ನೌಫಲ್ ಸ್ವಾಗತಿಸಿ, ತಾಜುದ್ದೀನ್ ಸಾಲ್ಮರ ವಂದಿಸಿದರು ಮತ್ತು ಉಸ್ಮಾನ್ ಕೆರೆಮೂಲೆ ನಿರೂಪಿಸಿದರು.

ಇದಕ್ಕೂ ಮುನ್ನ ಪಕ್ಷದ ಕಾರ್ಯಕರ್ತರು ಬನ್ನೂರು, ಬಪ್ಪಳಿಗೆ, ಸಾಲ್ಮರ ಪ್ರದೇಶಕ್ಕೆ ಒಳಪಟ್ಟ 400 ಮನೆಗಳ ಸರ್ವೆ ನಡೆಸಿದ್ದು, ಆಯ್ದ 155 ಬಡ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಪುಸ್ತಕ ವಿತರಿಸಲಾಯಿತು.

## ■ ಡಿಸೇಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ



ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ದಕ್ಷಿಣ ಕನ್ನಡ ಜಿಲ್ಲೆ ಇದರ ವತಿಯಿಂದ ಇತ್ತೀಚೆಗೆ ಮಂಗಳೂರು ಜಿಲ್ಲಾಧಿಕಾರಿ ಕಚೇರಿಯ ಮುಂದೆ ಡಿಸೇಲ್ ಹಾಗೂ ಅಡುಗೆ ಅನಿಲ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಬಿರುಸಿನ ಮಳೆಯನ್ನೂ ಲೆಕ್ಕಿಸದೆ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆಯನ್ನು ಏರಿಸುವ ಕೇಂದ್ರ ಸರಕಾರದ ಕ್ರಮವನ್ನು ಖಂಡಿಸಿದ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಜಲೀಲ್ ಕೆ., ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರನ್ನು ಇದು ಇನ್ನೂ ಸಂಕಷ್ಟಕ್ಕೆ ದೂಡಿದೆ ಎಂದರು.

ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಕಾರ್ಯದರ್ಶಿ ಸಲೀಂ ಗುರುವಾಯನಕೆರೆ ಮತ್ತು ಯೂಸುಫ್ ಆಲಡ್ಕ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ■ ಸ್ಥಾಪನಾ ದಿನಾಚರಣೆ

**ಬೆಳ್ತಂಗಡಿ:** ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು ತನ್ನ ದ್ವಿತೀಯ ಸ್ಥಾಪನಾ ದಿನವನ್ನು ಜೂನ್ 21ರಂದು ಇಲ್ಲಿ ಆಚರಿಸಿತು.

ಇದರ ಅಂಗವಾಗಿ ಮಡಂತ್ಯಾರಿನ ಬಂಗಾರಕಟ್ಟೆಯಲ್ಲಿ ಪಕ್ಷದ ಧ್ವಜ ಹಾರಿಸಲಾಯಿತು. ನಂತರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಹಂಪಲು ವಿತರಿಸಲಾಯಿತು. ಪಕ್ಷದ ಬೆಳ್ತಂಗಡಿ ಕ್ಷೇತ್ರಾಧ್ಯಕ್ಷ ಅಕ್ಬರ್ ಬಿ., ಜಿಲ್ಲಾ ಸಮಿತಿ ಸದಸ್ಯ ಹೈದರ್ ನೀರ್‌ಸಾಲ್, ಉಪಾಧ್ಯಕ್ಷ ಇಕ್ಬಾಲ್ ಬಿ., ಕಾರ್ಯದರ್ಶಿ ಅನೀಸ್ ಗೇರುಕಟ್ಟೆ, ತಾಲೂಕು ಸಮಿತಿ ಸದಸ್ಯ ಅಶ್ರಫ್, ಅಕ್ಬರ್ ಕೆ.ಪಿ, ಉಸ್ಮಾನ್ ವೇಣೂರು, ಕಾಸಿಮ್ ಬಿ.ಎಂ, ರಝಾಕ್ ಬಿ.ಎಂ, ಅತಾವುಲ್ಲಾ, ಪಾಂಡವರಕಲ್ಲು ಮಸೀದಿಯ ಅಧ್ಯಕ್ಷರು, ಇಮಾಮರು ಧ್ವಜಾರೋಹಣದ ವೇಳೆ ಉಪಸ್ಥಿತರಿದ್ದರು.

## ■ಬೆಳ್ತಂಗಡಿ: ಎಸ್‌ಡಿಪಿಐ ಕಾರ್ಯಕರ್ತರ ಸಭೆ

ಬೆಳ್ತಂಗಡಿ: ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ, ಬೆಳ್ತಂಗಡಿ ವಿಧಾನಸಭೆಯ ವತಿಯಿಂದ ಜು.3ರಂದು ನಗರದ ಜೆ.ಎಂ.ಎಫ್ ಸಭಾ ಭವನದಲ್ಲಿ ಕಾರ್ಯಕರ್ತರ ಸಭೆ ನಡೆಯಿತು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಬಿ.ಸಿ ರೋಡ್ ಪ್ರಸಕ್ತ ರಾಜಕೀಯ ಸ್ಥಿತಿ ಗತಿಗಳ ಬಗ್ಗೆ ಮತ್ತು ಮುಂದಿನ ನಗರ ಪಂಚಾಯತ್ ಚುನಾವಣೆಯ ಸಿದ್ದತೆ ಬಗ್ಗೆ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಸಲೀಂ ಗುರುವಾಯನಕೆರೆ, ಉಪಾಧ್ಯಕ್ಷರಾದ ಇಕ್ಬಾಲ್, ಕಾರ್ಯದರ್ಶಿ ಅನೀಸ್ ಗೇರುಕಟ್ಟೆ ಕೋಶಾಧಿಕಾರಿ ಇಸ್ಮಾಯಿಲ್ ಹಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಬೆಳ್ತಂಗಡಿ ವಿಧಾನ ಸಭಾ ಸಮಿತಿ ಅಧ್ಯಕ್ಷರಾದ ಅಕ್ಬರ್ ಬಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕ್ಬರ್ ಕೆ.ಪಿ ಸ್ವಾಗತಿಸಿ, ನಿರೂಪಿಸಿದರು. ಅಶ್ರಫ್ ಪಿ. ಕಟ್ಟೆ ವಂದಿಸಿದರು.

## ■ಕುಕ್ಕಾಜೆ: ಎಸ್‌ಡಿಪಿಐನಿಂದ ತಂಗುದಾಣದ ಕೊಡುಗೆ

ಬಂಟ್ವಾಳ: ಮಂಚಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕುಕ್ಕಾಜೆ ಹಳೇ ಚೆಕ್‌ಪೋಸ್ಟ್ ಬಳಿ ಎಸ್‌ಡಿಪಿಐ ವತಿಯಿಂದ ತಾತ್ಕಾಲಿಕ ಬಸ್ಸು ತಂಗುದಾಣ ನಿರ್ಮಿಸಲಾಗಿದೆ.

ಕಳೆದ ಐದು ವರ್ಷಗಳಿಂದ ಮಂಚಿ ಗ್ರಾಮ ಪಂಚಾಯತ್ ಬಸ್ಸು ತಂಗುದಾಣ ನಿರ್ಮಿಸುವುದಾಗಿ ಭರವಸೆ ನೀಡುತ್ತಿದ್ದರೂ, ಅದನ್ನು ಪೂರೈಸಿರಲಿಲ್ಲ. ಮಳೆಗಾಲದಲ್ಲಿ ಮತ್ತು ಬೇಸಿಗೆ ಕಾಲದಲ್ಲಿ ಈ ಪ್ರದೇಶದ ನಾಗರಿಕರು, ವಿದ್ಯಾರ್ಥಿಗಳು ಮತ್ತು ವೃದ್ಧರು ಬಸ್ಸು ತಂಗುದಾಣವಿಲ್ಲದೆ ತೊಂದರೆ ಅನುಭವಿಸುತ್ತಿದ್ದರು. ಆದುರಿಂದ ಎಸ್‌ಡಿಪಿಐ ತಾತ್ಕಾಲಿಕ ತಂಗುದಾಣ ನಿರ್ಮಿಸಿದ್ದು, ಮಳೆಗಾಲ ಮುಗಿದ ಬಳಿಕ ಶಾಶ್ವತ ಬಸ್ಸು ತಂಗುದಾಣ ನಿರ್ಮಿಸುವುದಾಗಿ ಎಸ್‌ಡಿಪಿಐ ಮಂಚಿ ಅಧ್ಯಕ್ಷ ಫೈರುಝ್ ಮಂಚಿ ತಿಳಿಸಿದ್ದಾರೆ.

## ■ಮಂಡ್ಯ: ಎಸ್‌ಡಿಪಿಐ ಸ್ಥಾಪನಾ ದಿನಾಚರಣೆ




ಮಂಡ್ಯ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಸ್ಥಾಪನಾ ದಿನಾಚರಣೆಯನ್ನು ಜೂನ್ 21ರಂದು ಮಂಡ್ಯದಲ್ಲಿ ಆಚರಿಸಲಾಯಿತು. ಜಿಲ್ಲಾಧ್ಯಕ್ಷ ಮುಹಮ್ಮದ್ ತಾಹಿರ್ ಪಕ್ಷದ ಧ್ವಜವನ್ನು ಹಾರಿಸಿದರು. ನಂತರ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಝೈಬುಲ್ಲಾ, ಉಪಾಧ್ಯಕ್ಷ ಮನ್ಸೂರು ಅಹ್ಮದ್, ಕಾರ್ಯದರ್ಶಿ ನೂರ್ ಅಹ್ಮದ್ ಖುರೇಶಿ, ಕೋಶಾಧಿಕಾರಿ ಅಸ್ಗರ್ ಅಹ್ಮದ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ಹಾಸನ: ಎಸ್‌ಡಿಪಿಐ ಕಚೇರಿ ಉದ್ಘಾಟನೆ

ಹಾಸನ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಹಾಸನ ಜಿಲ್ಲಾ ಸಮಿತಿಯ ನೂತನ ಕಚೇರಿಯು ಇಲ್ಲಿನ ವಲ್ಲಭಾಯಿ ರೋಡ್‌ನಲ್ಲಿ ಉದ್ಘಾಟನೆಗೊಂಡಿತು.

ಉದ್ಘಾಟನಾ ಸಮಾರಂಭದ ವೇಳೆ ಕೆಲವರನ್ನು ಸನ್ಮಾನಿಸಲಾಯಿತು. ಡಾ. ಅಬ್ದುಲ್ ಬಶೀರ್, ಡಾ. ರತ್ನಾಕರ ಶೆಟ್ಟಿ, ಸಮಾಜ ಸೇವಕ ಅಬ್ದುಲ್ ಹಕ್, ಮಾಜಿ ಕೌನ್ಸಿಲರ್ ಅಬ್ದುಲ್ ಲತೀಫ್, ದಲಿತ ಸಂಘರ್ಷ ಸಮಿತಿಯ ಹಾಸನ ಜಿಲ್ಲಾ ನಾಯಕ ಹೆಟ್ಟೂರು ಅಣ್ಣಯ್ಯ, ವೀಡಿಯೊ ಗ್ರಾಫರ್ ಉದಯರನ್ನು ಸನ್ಮಾನಿಸಲಾಯಿತು.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ ನಾಯಕ ಉಸ್ಮಾನ್ ಬೇಗ್, ಎಸ್‌ಡಿಪಿಐ ಉಪಾಧ್ಯಕ್ಷ ಮೀಸೆ ಮಂಜಯ್ಯ, ರಾಜ್ಯ ಸಮಿತಿ ಸದಸ್ಯ ನಿರ್ವಾಣಪ್ಪ, ರಾಜ್ಯ ಸಮಿತಿ ಸದಸ್ಯ ಮಲ್ನಾಡ್ ಮೆಹ್ಬೂಬ್, ಜನತಾ ಮಾಧ್ಯಮದ ಸಂಪಾದಕ ಆರ್.ಪಿ.ವೆಂಕಟೇಶ ಮೂರ್ತಿ, ಸಕ್ಲೇಶ್‌ಪುರ ಅಸೆಂಬ್ಲಿ ಅಧ್ಯಕ್ಷ ನಜೀಬ್ ಅಕ್ರಮ್, ಎಸ್‌ಡಿಪಿಐ ನಾಯಕ ಮುಜಾಹಿದ್, ಪಾಪ್ಯುಲರ್ ಫ್ರಂಟ್ ಜಿಲ್ಲಾಧ್ಯಕ್ಷ ರಿಝ್ವಾನ್ ಬೇಗ್ ಈ ಸಂದರ್ಭ ಉಪಸ್ಥಿತರಿದ್ದರು.

## ■ಬೆಳಪುವಿನಲ್ಲಿ 'ಸ್ಕೂಲ್ ಚಲೋ'



ಉಡುಪಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಬೆಳಪು ಸರ್ಕಲ್ ಬಳಿ ಸ್ಕೂಲ್ ಚಲೊ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಹ್ಮದೀಯ ಮೊಹಲ್ಲಾದ ಇಮಾಮರಾದ ಸಯ್ಯದ್ ಫೈಝುಲ್ಲಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಭಾಷಣ ಮಾಡಿದ ಪಾಪ್ಯುಲರ್ ಫ್ರಂಟ್ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಅನೀಸ್ ಅಹ್ಮದ್, ಸಂಘಟನೆಯು ರಾಷ್ಟ್ರವ್ಯಾಪಿ ಸ್ಕೂಲ್ ಚಲೋ ಕಾರ್ಯಕ್ರಮದ ಮೂಲಕ ಗ್ರಾಮ ಗ್ರಾಮಗಳಲ್ಲಿ ಪ್ರತಿಯೊಬ್ಬರಲ್ಲಿ ಶಿಕ್ಷಣದ ಕಾಳಜಿಯನ್ನು ಮೂಡಿಸುತ್ತಿದೆ ಎಂದರು.

ಪಾಪ್ಯುಲರ್ ಫ್ರಂಟ್‌ನ ಈ ಕಾರ್ಯಕ್ರಮವನ್ನು ಬೆಳಪು ಗ್ರಾಮ ಪಂಚಾಯತ್ ಅಧ್ಯಕ್ಷ ದೇವಿ ಪ್ರಸಾದ್ ಶೆಟ್ಟಿ ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಮೀರ್ ಹಂಝ, ಬದ್ರಿಯಾ ಜಾಮಿಯಾ ಮಸ್ಜಿದ್ ಅಧ್ಯಕ್ಷ ಇಬ್ರಾಹೀಂ ಫಕೀರ್, ಪಾಪ್ಯುಲರ್ ಫ್ರಂಟ್ ಪ್ರಧಾನ ಕಾರ್ಯದರ್ಶಿ ರಫೀಕ್ ಮಜೂರು, ಸಯ್ಯದ್ ಅಶ್ರಫ್ ಪಾಲ್ಗೊಂಡಿದ್ದರು. ಹನೀಫ್ ಮೂಳೂರು ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ ನೂರಾರು ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು.

## ■ಕೃಷ್ಣಾಪುರ: ಉಚಿತ ಪುಸ್ತಕ ವಿತರಣೆ

ಕೃಷ್ಣಾಪುರ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕೃಷ್ಣಾಪುರ ಘಟಕದ ವತಿಯಿಂದ ''ಉಚಿತ ಪುಸ್ತಕ ವಿತರಣೆ'' ಕಾರ್ಯಕ್ರಮವು ಕೃಷ್ಣಾಪುರದ ಅಲ್ ಬದ್ರಿಯಾ ಸಭಾಂಗಣದಲ್ಲಿ ದಿ.29-05-2011ರಂದು ಆಯೋಜಿಸಲಾಗಿತ್ತು.

ಕೃಷ್ಣಾಪುರ ಜುಮಾ ಮಸೀದಿ ಖತೀಬರಾದ ಅಲ್‌ಹಾಜ್ ಇ.ಕೆ. ಇಬ್ರಾಹೀಂ ಮದನಿ ಕಾರ್ಯಕ್ರಮ ಉದ್ಘಾಟಿಸಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಬೂಬಕರ್ ಕುಳಾಯಿ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ದ.ಕ.ಜಿಲ್ಲಾ ಸಮಿತಿ ಸದಸ್ಯ ಅಶ್ರಫ್



ಜೋಕಟ್ಟೆ, ಅಲ್ ಬದ್ರಿಯಾ ಎಜುಕೇಷನ್ ಎಸೋಸಿಯೇಷನ್ ಅಧ್ಯಕ್ಷರಾದ ಮುಮ್ತಾಝ್ ಅಲಿ, ಬದ್ರಿಯಾ ಜುಮಾ ಮಸೀದಿಯ ಉಪಾಧ್ಯಕ್ಷ ಎಂ.ಎಸ್.ಶರೀಫ್, ಅಲ್ ಬದ್ರಿಯಾ ಎಜುಕೇಷನ್ ಎಸೋಸಿಯೇಷನ್‌ನ ಸಂಚಾಲಕರಾದ ಬಿ.ಎ.ನಝೀರ್, ಸಿರಾಜುಲ್ ಹುದಾ ಎಸೋಸಿಯೇಷನ್ ಅಧ್ಯಕ್ಷರಾದ ಮುಹಮ್ಮದ್ ಅನ್ವಾರ್ ಹಾಗೂ ಎಸ್‌ಡಿಪಿಐ ಕೃಷ್ಣಾಪುರ ಬ್ರಾಂಚ್‌ನ ಅಧ್ಯಕ್ಷ ಅಯಾಝ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮುಹಮ್ಮದ್ ಸಫಾಫ್ ಕಾರ್ಯಕ್ರಮ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ 150 ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು.




ಉಡುಪಿ: ಪಾಪ್ಯುಲರ್ ಫ್ರಂಟ್ ಮೂಳೂರು ವಲಯದ ವತಿಯಿಂದ ಇತ್ತೀಚೆಗೆ ಕಾಪುವಿನಲ್ಲಿ ಸ್ಕೂಲ್ ಚಲೊ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪಾಪ್ಯುಲರ್ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಅನೀಸ್ ಅಹ್ಮದ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಮೀರ್ ಹಂಝ, ಕಾಪು ಗ್ರಾಮ ಪಂಚಾಯತ್ ಸದಸ್ಯ ಮೋಹನ್ ಕಾಂಚನ್, ದಂಡ ತೀರ್ಥ ಪ್ರೌಢಶಾಲೆಯ ನಿವೃತ್ತ ಅಧ್ಯಾಪಕ ಗೋಪಾಲ ಮಾಸ್ಟರ್, ಇಂಡಿಯನ್ ಫ್ರೆಟರ್ನಿಟಿ ಫೋರಂನ ದುಬೈ ಘಟಕದ ಅಬ್ದುಲ್ ರಶೀದ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಹನೀಫ್ ಮೂಳೂರು ಕಾರ್ಯಕ್ರಮ ನಿರೂಪಿಸಿದರು.

# ■ಮೈಸೂರು: ಪಾಪ್ಯುಲರ್ ಫ್ರಂಟ್‌ನಿಂದ 'ಸ್ಕೂಲ್ ಚಲೊ'






ಮೈಸೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಇತ್ತೀಚೆಗೆ ಮೀಲಾದ್ ಭಾಗ್‌ನಲ್ಲಿ ಸ್ಕೂಲ್ ಚಲೊ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಂಗವಾಗಿ ರ‍್ಯಾಲಿಯನ್ನು ಆಯೋಜಿಸಲಾಗಿತ್ತು. ಮಹಿಳೆಯರು ಮತ್ತು ಮಕ್ಕಳನ್ನೊಳಗೊಂಡಂತೆ ಬೃಹತ್ ಸಂಖ್ಯೆಯಲ್ಲಿ ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸುಮಾರು 800 ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಪುಸ್ತಕ ಹಾಗೂ ಇತರ ಶಾಲಾ ಸಾಮಗ್ರಿಗಳನ್ನು ವಿತರಿಸಲಾಯಿತು. 12 ಮಂದಿ ಮೆರಿಟ್ ವಿದ್ಯಾರ್ಥಿಗಳಿಗೆ ಸ್ಮಾರಕ ಹಾಗೂ ಬಹುಮಾನ ಮೊತ್ತ ನೀಡಿ ಸನ್ಮಾನಿಸಲಾಯಿತು. ಈ ವಿದ್ಯಾರ್ಥಿಗಳಿಗೆ ಪಿ.ಎಂ.ಹುಸೈನ್ ವಿಶೇಷ ಉಡುಗೊರೆಯನ್ನು ನೀಡಿದರು.

ಮೈಸೂರಿನ ಶಾಸಕ ತನ್ವೀರ್ ಸೇಟ್, ಮೇಯರ್ ಪುಷ್ಪಲತಾ ಚಿಕ್ಕಣ್ಣ, ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಪ್ರೊ| ಶಬ್ಬೀರ್ ಮುಸ್ತಫ, ಸಿ.ಎಂ.ಹುಸೈನ್, ಎಸ್‌ಡಿಪಿಐ ನಾಯಕಿ ಫಾತಿಮಾ, ಪಾಪ್ಯುಲರ್ ಫ್ರಂಟ್ ಜಿಲ್ಲಾಧ್ಯಕ್ಷ ಅತಾವುಲ್ಲಾ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸೈಫುಲ್ಲಾ ಸ್ವಾಗತಿಸಿ, ಜಿಲ್ಲಾ ಕಾರ್ಯದರ್ಶಿ ಆಝುಂ ಪಾಶ ವಂದಿಸಿದರು.

---

## ■ಉಡುಪಿಯಲ್ಲಿ ಪುಸ್ತಕ ವಿತರಣೆ



ಉಡುಪಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ನಡೆಯುತ್ತಿರುವ 'ಸ್ಕೂಲ್ ಚಲೊ' ರಾಷ್ಟ್ರೀಯ ಅಭಿಯಾನದ ಅಂಗವಾಗಿ ಇತ್ತೀಚೆಗೆ ಪಡುಬಿದ್ರೆಯ ಕಂಚಿನಡ್ಕ ಬಳಿ ಬಡ ಮಕ್ಕಳಿಗೆ ಪುಸ್ತಕ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎಸ್‌ಡಿಪಿಐ ಉಡುಪಿ ಜಿಲ್ಲಾಧ್ಯಕ್ಷ ಅಮೀರ್ ಹಂಝ, ಪಾಪ್ಯುಲರ್ ಫ್ರಂಟ್‌ನ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಫೀಕ್ ಮಜೂರ್, ಪಡುಬಿದ್ರಿ ವಲಯ ಮುಸ್ಲಿಮ್ ಒಕ್ಕೂಟದ ಅಧ್ಯಕ್ಷ ಎಂ.ಪಿ.ಮೊಹಿದ್ದೀನ್, ಪಡುಬಿದ್ರೆ ಉರ್ದು ಶಾಲಾ ಮುಖ್ಯೋಪಾಧ್ಯಾಯ ಸಯ್ಯದ್ ಸೈಫುಲ್ಲಾ, ಕಂಚಿನಡ್ಕ ಪ್ರಾಥಮಿಕ ಶಾಲೆಯ ಹೆಡ್ ಟೀಚರ್ ಕುಸುಮ, ಪಿ.ಉಮರ್ ಫಾರೂಕ್, ಪಾಪ್ಯುಲರ್ ಫ್ರಂಟ್ ಕಾಪು ಘಟಕಾಧ್ಯಕ್ಷ ಅಬ್ದುಲ್ ಖಾದರ್ ಉಚ್ಚಿಲ, ಕ್ಯಾಂಪಸ್ ಫ್ರಂಟ್ ರಾಜ್ಯ ಪ್ರಧಾನ ಕಾರ್ಯದರ್ಶಿ ಇಮ್ರಾನ್ ಎರ್ಮಾಳ್, ಪಾಪ್ಯುಲರ್ ಫ್ರಂಟ್ ಪಡುಬಿದ್ರೆ ವಲಯಾಧ್ಯಕ್ಷ ಇಬ್ರಾಹೀಂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಫೈಝುಲ್ ಕಾರ್ಯಕ್ರಮ ನಿರೂಪಿಸಿದರು.

### ಕ್ವಿಝ್ ಟೈಮ್-11ರ ಉತ್ತರಗಳು

| | |
|---|---|
| 1.ಇಂಡಿಯನ್ ಒಪಿನಿಯನ್ | 6.2,400 ಕಿ.ಮೀ. |
| 2.1857 | 7.ಫೋಟಾಮೀಟರ್ |
| 3.ಸಾಹು ಎಸ್.ಸಿ.ಜೈನ್ | 8.ಅಬೇಕಸ್(ಮಣಿ ಚೌಕಟ್ಟು) |
| 4.ಗಿರೀಶ್ ಕಾರ್ನಾಡ್ | 9.ಝಹೀರ್ ಅಬ್ಬಾಸ್ |
| 5.ಆಗ್ರಾ | 10.ಟಲ್ಕಟೋರ(ದೆಹಲಿ) |

## ■ದುಬೈ: ಇಐಎಫ್‌ಎಫ್‌ನಿಂದ ವಿದ್ಯಾಭ್ಯಾಸ, ಹಣಕಾಸು ನಿರ್ವಹಣೆಯ ಬಗ್ಗೆ ಕಾರ್ಯಾಗಾರ

ದುಬೈ: ಅನಿವಾಸಿ ಭಾರತೀಯರ ಸಾಮಾಜಿಕ ಸಂಘಟನೆಯಾದ ಎಮಿರೇಟ್ಸ್ ಇಂಡಿಯಾ ಫ್ರೆಟರ್ನಿಟಿ ಫೋರಂ (ಇಐಎಫ್‌ಎಫ್) ವತಿಯಿಂದ ಇತ್ತೀಚೆಗೆ ಅಲ್ ನಿಮ್ರ್ ಸಿವಿಲ್ ಇಂಜಿನಿಯರಿಂಗ್ ಕ್ಯಾಂಪ್ ಸೋನಾಪುರ್ ಕಾರ್ಮಿಕ ವಸತಿ ನಿಲಯದಲ್ಲಿ ಕಾರ್ಮಿಕರಿಗಾಗಿ 'ಶಿಕ್ಷಣದ ಮಹತ್ವ ಹಾಗು ಹಣಕಾಸಿನ ಪರಿಸ್ಥಿತಿಯ ನಿರ್ವಹಣೆ' ಎನ್ನುವ ವಿಷಯದ ಮೇಲೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರದಲ್ಲಿ ಇಐಎಫ್‌ಎಫ್ ನ ಕಾರ್ಯಕಾರಿ ಸಮಿತಿ ಸದಸ್ಯರೊಬ್ಬರು ಶಿಕ್ಷಣದ ಮಹತ್ವದ ಬಗ್ಗೆ ವಿವರಿಸಿದರು. ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣವು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ಮೌಲ್ಯಯುತವಾದ ಶಿಕ್ಷಣವನ್ನು ಪಡೆಯುವುದರ ಮೂಲಕ ಉಜ್ವಲವಾದ ಭವಿಷ್ಯವನ್ನು ರೂಪಿಸಬಹುದು ಎಂದು ಅವರು ಹೇಳಿದರು.

ಕಾರ್ಯಕ್ರಮದ ದ್ವಿತೀಯ ಅವಧಿಯಲ್ಲಿ ಹಣಕಾಸಿನ ಪರಿಸ್ಥಿತಿಯ ನಿರ್ವಹಣೆಯ ಬಗ್ಗೆ ಕಾರ್ಮಿಕರಿಗೆ ಉದಾಹರಣೆಗಳ ಸಹಿತ ಮಾಹಿತಿ ನೀಡಲಾಯಿತು.

ಪ್ರಶ್ನೋತ್ತರ ಅವಧಿಯನ್ನು ಇಐಎಫ್‌ಎಫ್‌ನ ಕಾರ್ಯಕಾರಿ ಸಮಿತಿ ಸದಸ್ಯ ಅಶ್ರಫ್ ದಳವಾಯಿ ನೆರವೇರಿಸಿದರು.

ಸುಮಾರು 125ಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದ ಮುರಳಿ, ದೇವರಾಜ, ಅಲ್ ನಿಮ್ರ್ ಸಿವಿಲ್ ಇಂಜಿನಿಯರಿಂಗ್ ಕ್ಯಾಂಪ್‌ನ ಆಡಳಿತ ವರ್ಗಕ್ಕೆ ಕೃತಜ್ಞತೆ ಸಲ್ಲಿಸಲಾಯಿತು.

ಅದೇ ರೀತಿ, ಇಐಎಫ್‌ಎಫ್ ವತಿಯಿಂದ ಶಾರ್ಜಾದ ರಯಾನ ಇಂಟರ್ ನ್ಯಾಶನಲ್ ಸ್ಕೂಲ್ ಹಾಗೂ ದುಬೈಯ ಬೆಂಗಳೂರು ಎಂಪಯರ್ ರೆಸ್ಟೋರೆಂಟ್‌ನಲ್ಲಿ 'ಉತ್ತಮ ಸಮಾಜಕ್ಕಾಗಿ - ಸಂತೃಪ್ತ ಕುಟುಂಬ' ಎನ್ನುವ ವಿಷಯದ ಮೇಲೆ ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

## ■ಸುರತ್ಕಲ್: ಪಾಪ್ಯುಲರ್ ಫ್ರಂಟ್‌ನಿಂದ 'ಸ್ಕೂಲ್ ಚಲೋ' ಕಾರ್ಯಕ್ರಮ



ಸುರತ್ಕಲ್: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ 'ಸ್ಕೂಲ್ ಚಲೋ' ರಾಷ್ಟ್ರೀಯ ಅಭಿಯಾನದ ಅಂಗವಾಗಿ ಸುರತ್ಕಲ್ ಘಟಕದ ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ದಿ.29-05-2011ರಂದು ಕೃಷ್ಣಾಪುರದ ಎಸ್‌ಡಿಪಿಐ ಕಚೇರಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಾಪ್ಯುಲರ್ ಫ್ರಂಟ್ ಸುರತ್ಕಲ್ ವಲಯ ಸದಸ್ಯ ಮುಹಮ್ಮದ್ ಹಮೀಫ್ ಕಾಟಿಪಳ್ಳ ವಹಿಸಿದ್ದರು. ಎಸ್‌ಡಿಪಿಐ ಮುಖಂಡರಾದ ಅಬೂಬಕರ್ ಕುಳಾಯಿ ಕಾರ್ಯಕ್ರಮ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಇಲ್ಲಿನ ಸಿರಾಜುಲ್ ಹುದಾ ಅಸೋಸಿಯೇಷನ್ ಅಧ್ಯಕ್ಷರಾದ ಮುಹಮ್ಮದ್ ಅನ್ಸಾರ್ ಕೃಷ್ಣಾಪುರ, ಬಶೀರ್ ಇಡ್ಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ತೌಫೀಕ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಈ ಸಂದರ್ಭ ಸುರತ್ಕಲ್, ಮುಕ್ಕ, ಕುಳಾಯಿ, ಮೈಂದಗುರಿ, ಇಡ್ಯಾ ಪರಿಸರದ 4 ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ಸೇರಿದಂತೆ ಒಟ್ಟು 30 ಮಂದಿ ವಿದ್ಯಾರ್ಥಿಗಳಿಗೆ ಮಕ್ಕಳಿಗೆ ಉಚಿತ ಪುಸ್ತಕ ವಿತರಿಸಲಾಯಿತು.



**ಮಂಗಳೂರು: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ದೇರಳಕಟ್ಟೆಯಲ್ಲಿ ಸ್ಕಾಲರ್‌ಶಿಪ್ ಅಭಿಯಾನ ನಡೆಯಿತು. ಕ್ಯಾಂಪಸ್ ಫ್ರಂಟ್ ದೇರಳಕಟ್ಟೆ ಅಧ್ಯಕ್ಷ ಇಮ್ರಾನ್ ಮತ್ತು ಮಲಾರ್ ಘಟಕಾಧ್ಯಕ್ಷ ಹೈದರ್ ಗ್ರಾಮ ಚಾವಡಿ ಸ್ಕಾಲರ್‌ಶಿಪ್ ಬಗ್ಗೆ ಮಾಹಿತಿ ನೀಡಿದರು.**

## ■ಮಂಗಳೂರು: ಕಾಂಪಸ್ ಫ್ರಂಟ್‌ನಿಂದ ಸ್ಕಾಲರ್‌ಶಿಪ್ ಅಭಿಯಾನ



ಮಂಗಳೂರು: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಇಲ್ಲಿನ ಬದ್ರಿಯಾ ಜುಮ್ಮಾ ಮಸೀದಿ ಮುಂಭಾಗದಲ್ಲಿ ಸ್ಕಾಲರ್‌ಶಿಪ್ ಅಭಿಯಾನವು ನಡೆಯಿತು.

ವಿದ್ಯಾರ್ಥಿಗಳು ಹಾಗೂ ಹೆತ್ತವರಲ್ಲಿ ಸರಕಾರ ಹಾಗೂ ಸರಕಾರೇತರ ಸಂಘಸಂಸ್ಥೆಗಳ ವಿವಿಧ ಸ್ಕಾಲರ್‌ಶಿಪ್ ಯೋಜನೆಗಳ ಬಗ್ಗೆ ಅರಿವುಂಟುಮಾಡುವುದಕ್ಕಾಗಿ ಸಂಘಟನೆಯು ರಾಜ್ಯಾದ್ಯಂತ ಈ ಅಭಿಯಾನವನ್ನು ಕೈಗೊಂಡಿದೆ.

ನೌಫಾಲ್, ರಾವಿ ಅನ್ಸಾರ್, ಝುಮೀಲ್ ಬೆಂಗ್ರೆ, ರಝಾಕ್ ಬೆಂಗ್ರೆ ಮತ್ತು ಸಲ್ಮಾನ್ ಸ್ಕಾಲರ್‌ಶಿಪ್ ಬಗ್ಗೆ ಮಾಹಿತಿ ನೀಡಿದರು.

## ■ರಾಮನಗರ: ವಿದ್ಯಾಭ್ಯಾಸ ಜಾಗೃತಿ ಕಾರ್ಯಕ್ರಮ



ರಾಮನಗರ: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ರಾಮನಗರ ತಾಲೂಕು ಘಟಕದ ವತಿಯಿಂದ ಇತ್ತೀಚೆಗೆ ಇಲ್ಲಿನ ಫೂಲ್ ಭಾಗ್‌ನಲ್ಲಿ ವಿದ್ಯಾಭ್ಯಾಸ ಜಾಗೃತಿ ಕಾರ್ಯಕ್ರಮವು ನಡೆಯಿತು.

ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಈ ರ್‍ಯಾಲಿಯಲ್ಲಿ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡು ವಿಶೇಷ ಮೆರುಗು ನೀಡಿದರು. ಫೂಲ್ ಭಾಗ್ ಸರಕಾರಿ ಶಾಲೆಯಿಂದ ಆರಂಭವಾದ ಈ ರ್‍ಯಾಲಿಯು ಹಲವು ಸ್ಲಮ್ ಪ್ರದೇಶಗಳನ್ನು ಹಾದು ಹೋಯಿತು.

ಕ್ಯಾಂಪಸ್ ಫ್ರಂಟ್ ರಾಮನಗರ ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮತೀನ್ ವಿದ್ಯಾಭ್ಯಾಸದ ಮಹತ್ವದ ಬಗ್ಗೆ ಮಾತನಾಡಿದರು.

ಸ್ಥಳೀಯ ವಾರ್ಡ್ ಕೌನ್ಸಿಲರ್ ಪ್ರವೀರ್ ಪಾಶ ಮತ್ತು ಉರ್ದು ಶಾಲೆಯ ಮುಖ್ಯೋಪಾಧ್ಯಾಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ■ಬೆಳಗಾವಿ: ಡೀಸೆಲ್ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ




ಬೆಳಗಾವಿ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಬೆಳಗಾವಿ ಜಿಲ್ಲಾ ವತಿಯಿಂದ ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆಯೇರಿಕೆಯ ವಿರುದ್ಧ ಇತ್ತೀಚೆಗೆ ಇಲ್ಲಿನ ರಾಣಿ ಚೆನ್ನಮ್ಮ ವೃತ್ತದ ಬಳಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಸ್‌ಡಿಪಿಐ ಬೆಳಗಾವಿ ಜಿಲ್ಲಾಧ್ಯಕ್ಷ ಎಮ್.ಎಮ್. ಮುಜಾವರ ಮತ್ತು ಉಪಾಧ್ಯಕ್ಷ ಎಂ.ರಫೀಕ್ ಮುಲ್ಲಾ ರ್‍ಯಾಲಿಯ ನೇತೃತ್ವ ವಹಿಸಿದ್ದರು. ಕೇಂದ್ರ ಸರಕಾರವು ಕೂಡಲೇ ಡೀಸೇಲ್ ಮತ್ತು ಅಡುಗೆ ಅನಿಲ ಬೆಲೆ ಏರಿಕೆಯನ್ನು ಹಿಂದೆಗೆದು ಕೊಳ್ಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕೋಶಾಧಿಕಾರಿ ಹಾರೂನ್ ಮುಜಾವರ, ಸಲಾಹುದ್ದೀನ್, ಝುಹೀರ್, ಫಝುಲ್ ಪಟೇಲ್, ಝೀಶಾನ್ ಮತ್ತು ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ■ ಟ್ಯಾಲೆಂಟ್ ವೃತ್ತಿಪರ ತರಬೇತಿಗೆ ಚಾಲನೆ




ಮಂಗಳೂರು: ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್‌ನ ವತಿಯಿಂದ ವತಿಯಿಂದ 8ನೆ ಬ್ಯಾಚಿನ ಉಚಿತ ಮೊಬೈಲ್ ತರಬೇತಿ ಹಾಗೂ 3ನೆ ಬ್ಯಾಚಿನ ಎಲೆಕ್ಟ್ರಿಕಲ್ಸ್, ಎಲೆಕ್ಟ್ರಾನಿಕ್ಸ್ ವೃತ್ತಿಪರ ಕೋರ್ಸುಗಳಿಗೆ ಚಾಲನಾ ಕಾರ್ಯಕ್ರಮವು ಟ್ಯಾಲೆಂಟ್ ಕಾನ್ಫರೆನ್ಸ್ ಹಾಲ್‌ನಲ್ಲಿ ಜರಗಿತು.

ಸಮಾರಂಭವನ್ನು ನಜಾತ್ ಸೊಸೈಟಿಯ ಸ್ಥಾಪಕಾಧ್ಯಕ್ಷ ಕೆ.ಐ ಅಬ್ದುಲ್ ಖಾದರ್ ದಾರಿಮಿ ಕುಕ್ಕಿಲ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮೀಫ್ ಅಧ್ಯಕ್ಷ ಮುಹಮ್ಮದ್ ಬ್ಯಾರಿ, ಕುಂಜತ್ತೂರು ಸಂಯುಕ್ತ ಜಮಾಅತ್ ಕಾರ್ಯದರ್ಶಿ ಪೊಡಿಮೋನು ಹಾಜಿ, ಉದ್ಯಮಿ ರಿಝ್ವಾನ್, ಸಮಾಜ ಸೇವಕ ಸುಲೈಮಾನ್ ಭಾಗವಹಿಸಿದ್ದರು.

ಸಂಸ್ಥೆಯ ಮುಖ್ಯಸ್ಥ ಅಬ್ದುಲ್ ರವೂಫ್ ಪುತ್ತಿಗೆ ಅಧ್ಯಕ್ಷತೆ ವಹಿಸಿದ್ದರು. ಅಬ್ದುಲ್ ಹಮೀದ್ ಕಣ್ಣೂರು ಸ್ವಾಗತಿಸಿ, ರಫೀಕ್ ಮಾಸ್ಟರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮುಹಮ್ಮದ್ ಯು.ಬಿ ಕಾರ್ಯಕ್ರಮ ನಿರೂಪಿಸಿ ಅಕ್ರಂ ಹಸನ್ ಉಳ್ಳಾಲ ವಂದಿಸಿದರು.

ಈ ಸಂದರ್ಭ ಸಂಸ್ಥೆಯ ಅಧ್ಯಕ್ಷ ರಿಯಾಝ್ ಕಣ್ಣೂರು, ತಾಂತ್ರಿಕ ತರಬೇತುದಾರರಾದ ಮಜೀದ್ ತುಂಬೆ, ದಾವೂದ್ ವಳವೂರು, ಸದಸ್ಯರಾದ ಅನ್ವರ್ ಜೆಪ್ಪು, ಮುಸ್ತಫಾ ಬಾಂಬಿಲ, ಅಸ್ಫರ್ ಹುಸೈನ್ ಬೆಂಗರೆ ಹಾಜರಿದ್ದರು.

## ■ ನಜಾತ್ ಸೊಸೈಟಿಯಿಂದ ವನಮಹೋತ್ಸವ

ಮಂಗಳೂರು: ಜೂ 26: ನಜಾತ್ ಪೀಸ್ ರಿಲೀಫ್ ಸೊಸೈಟಿ ಮಂಗಳೂರು ಇದರ ವತಿಯಿಂದ ಪಣಂಬೂರು ಬೀಚ್‌ನಲ್ಲಿ ಗಿಡ ನೆಡುವ ಕಾರ್ಯಕ್ರಮವು ನಡೆಯಿತು.

ನೇತೃತ್ವ ವಹಿಸಿದ್ದ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ಕೆ.ಐ. ಅಬ್ದುಲ್ ಖಾದರ್ ದಾರಿಮಿ ಕುಕ್ಕಿಲರವರು ಮಾತನಾಡುತಾತಿ ಆನೀನು ಸಾಯಲು ಒಂದು ತಾಸು ಇರುವುದಾದರೂ ಗಿಡವೊಂದನ್ನು ನೆಡು ಎಂದು ಸಾರಿದ ಪ್ರವಾದಿಯವರ ಅನುಯಾಯಿಗಳಾದ ನಾವು ಪರಿಸರ ಸಂರಕ್ಷಣೆಗೆ ವಿಶೇಷ ಗಮನ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಗಿಡ ನೆಡುವಂತಹ ಪುಣ್ಯ ಕೆಲಸವನ್ನು ಪ್ರತೀ ಊರಿನಲ್ಲಿ ಮಾಡಬೇಕು ಎಂದು ಕರೆ ನೀಡಿದರು.



ಉಪಾಧ್ಯಕ್ಷ ಮಜೀದ್ ಹಾಜಿ ಸಿತಾರ್, ಪ್ರಧಾನ ಕಾರ್ಯದರ್ಶಿ ಎನ್.ಕೆ ಅಬೂಬಕರ್ ಕುದ್ರೋಳಿ, ಖಜಾಂಚಿ ಅಬ್ದುಸ್ಸಮದ್ ಹಾಜಿ ಹೆಚ್.ಬಿ.ಟಿ ಹಾಗೂ ಮುಸತಿಫಾ ಫೈಝಿ ಕಿನ್ಯ, ಅಬೂಬಕರ್ ದಾರಿಮಿ ಬೋಳಂತೂರು, ಖಾಲಿದ್ ಅಕ್ರಂ ಮುಸ್ಲಿಯಾರ್ ಸುಳ್ಯ, ಇಸ್ಮಾಯೀಲ್ ಯಮಾನಿ ತಿಂಗಳಾಡಿ, ಶಾಫಿ ಮುಸ್ಲಿಯಾರ್ ಪೊಳಲಿ, ಬೀಟಿಗೆ ಅಬ್ದುಲ್ ಖಾದರ್ ಮುಸ್ಲಿಯಾರ್, ಅಶ್ರಫ್ ಕರ್ಬಲ, ಮುದಸ್ಸಿರ್ ಕುದ್ರೋಳಿ ಭಾಗವಹಿಸಿದ್ದರು.

## ಕ್ಯಾಂಪಸ್ ಫ್ರಂಟ್‌ನಿಂದ ಸ್ಕಾಲರ್‌ಶಿಪ್ ಅಭಿಯಾನ

ಮಂಗಳೂರು: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಮಂಗಳೂರು ಜಿಲ್ಲಾ ಸಮಿತಿಯ ವತಿಯಿಂದ ಜಿಲ್ಲೆಯ ಹಲವು ಭಾಗಗಳಲ್ಲಿ ಸ್ಕಾಲರ್‌ಶಿಪ್ ಅಭಿಯಾನ ನಡೆಸಲಾಗಿದೆ.

ಸಂಘಟನೆಯು ಜೂನ್ 17ರಂದು 6 ಕಡೆಗಳಲ್ಲಿ - ಅಂದರೆ ಹಂಪನ್‌ಕಟ್ಟೆ, ಬಂದರ್, ದೇರಳಕಟ್ಟೆ, ಬಜ್ಪೆ, ಇಡ್ಯ, ಕೃಷ್ಣಾಪುರ ಮತ್ತು ಜೂನ್ 24ರಂದು ಮೂರು ಕಡೆಗಳಲ್ಲಿ - ಅಂದರೆ ಪಂಪ್‌ವೆಲ್, ಕಣ್ಣೂರು ಮತ್ತು ಉಳ್ಳಾಲಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸ್ಕಾಲರ್‌ಶಿಪ್ ಬಗ್ಗೆ ಮಾಹಿತಿ ನೀಡಿದೆ.

## ಪ್ರವಾದಿ (ಸ)ನುಡಿಗಳು

1. ಕರ್ಮವಿಲ್ಲದ ಜ್ಞಾನಿ-ಮಳೆಯಿಲ್ಲ ಮೋಡದಂತೆ
2. ದಾನಿ ನೀಡದ ಧನಿಕ-ಫಲವಿಲ್ಲದ ಮರವಂತೆ
3. ಕ್ಷಮೆ ಇಲ್ಲದ ಬಡವ-ನೀರಿನಲ್ಲದ ಹೊಳೆಯಂತೆ
4. ನೀತಿ ಇಲ್ಲದ ಅರಸ-ಮೇಯಿಸುವವನಿಲ್ಲದ ಆಡಿನಂತ
5. ಪಶ್ಚಾತ್ತಾಪವಿಲ್ಲದ ಯುವಕ-ಭಾವಣೆಯಿಲ್ಲದ ಮನೆಯಂತೆ
6. ಲಜ್ಜೆ ಇಲ್ಲದ ಮಹಿಳೆ-ಉಪ್ಪಿಲ್ಲದ ಆಹಾರದಂತೆ

ಮಹ್‌ಫೂಲ್ ಎಂ.ಎ., ಬಜ್ಪೆ

## ■ ವಿಶೇಷಾಧಿಕಾರದ ಬಗ್ಗೆ ಸು.ಕೋ ಪ್ರಶ್ನೆ

ಹೊಸದಿಲ್ಲಿ: ಸೇನೆ ಮತ್ತು ಅರೆ ಸೇನಾ ಪಡೆಗೆ ನೀಡಲಾಗುವ ವಿನಾಯಿತಿಯ ಬಗ್ಗೆ ಕೇಂದ್ರ ಸರಕಾರದ ನಿಲುವನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ವಿವಾದಿತ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯ ಬಗ್ಗೆ ಸ್ಪಷ್ಟ ನಿಲುವಿಗೆ ಬರುವಂತೆ ಹೇಳಿದೆ.

'ಕರ್ತವ್ಯದಲ್ಲಿರುವಾಗ ಒಬ್ಬ ಸೈನಿಕನು ಯಾವುದೇ ಮನೆಯನ್ನು ಹೊಕ್ಕು ಅತ್ಯಾಚಾರಗೈಯ್ಯಬಹುದು ಮತ್ತು ನಂತರ ಆತ ವಿನಾಯಿತಿಯನ್ನು ಪಡೆಯಬಹುದು ಎಂದು ನೀವು ಹೇಳುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಸರಕಾರದ ಪರವಾಗಿ ವಾದಿಸಿದ ಹಿರಿಯ ವಕೀಲ ಅಶೋಕ್ ಭಾನ್‌ಗೆ ಹೇಳಿದ್ದಾರೆ. ಜಮ್ಮು ಕಾಶ್ಮೀರ ಮತ್ತು ಅಸ್ಸಾಮ್‌ನಲ್ಲಿ ಭದ್ರತಾ ಸಿಬ್ಬಂದಿಗಳು ನಡೆಸಿದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳ ಬಗ್ಗೆ ಎರಡು ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಕೋರ್ಟ್ ಭಾನ್‌ಗೆ ಈ ರೀತಿ ಹೇಳಿದೆ.

ಜಮ್ಮು ಕಾಶ್ಮೀರದ ಛತ್ತಿಸಿಂಗ್‌ಪುರದಲ್ಲಿ ಜುಲೈ 2004ರಂದು 7 ಯುವಕರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆಗೈದ ರಾಷ್ಟ್ರೀಯ ರೈಫಲ್‌ನ ಸೈನಿಕರನ್ನು ವಿಶೇಷಾಧಿಕಾರ ಕಾಯ್ದೆಯ 6 ಮತ್ತು 7ನೆ ವಿಧಿಯ ಅಡಿಯಲ್ಲಿ ಶಿಕ್ಷಿಸುವಂತೆ ಭಾನ್ ಹೇಳಿದ್ದರು. ಅದೇ ವೇಳೆ, ಅಸ್ಸಾಮ್‌ನ ಪಂಕ ಗ್ರಾಮದಲ್ಲಿ 1983ರಲ್ಲಿ ನಡೆದ ಸಿಆರ್‌ಪಿಎಫ್ ಯೋಧರು ಇದೇ ರೀತಿಯ ನಕಲಿ ಎನ್‌ಕೌಂಟರ್‌ನಲ್ಲಿ ಅವರಿಗೆ ಸಿಆರ್‌ಪಿಎಫ್ ಕಾಯ್ದೆಯ 17ನೆ ಮತ್ತು 197 ವಿಧಿಯಡಿಯಲ್ಲಿ ವಿನಾಯಿತಿ ದೊರೆಯುವ ಬಗ್ಗೆ ಮಾತನಾಡಿದ್ದರು.

## ■ ಕೊಟ್ಟಿಗೆಯಲ್ಲಿ ಬಾಂಬ್ ಸ್ಫೋಟ

ಉಜ್ಜೈನಿ: ಇಲ್ಲಿನ ಕೇಶವಂಗರ್‌ನಲ್ಲಿ ಕೊಟ್ಟಿಗೆಯೊಂದರಲ್ಲಿ ಎರಡು ಸ್ಫೋಟಗಳು ಸಂಭವಿಸಿದ್ದು, ಇದರಲ್ಲಿ ಒಬ್ಬ ಗಾಯಗೊಂಡಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಕೊಟ್ಟಿಗೆಯ ಮಾಲಕ ರವಿ ಎಂಬಾತನನ್ನು ಬಂಧಿಸಿದ್ದಾರೆ.

ಘಟನೆ ನಡೆದ ಸ್ಥಳದಿಂದ ಒಂದು ಜೀವಂತ ಬಾಂಬ್ ಮತ್ತು ಎರಡು ಸಿಡಿಮದ್ದುಗಳನ್ನು ಪತ್ತೆ ಹಚ್ಚಲಾಗಿದೆ. ಎಸ್.ಪಿ.ರಾಕೇಶ್ ಗುಪ್ತರವರ ಪ್ರಕಾರ ಬಾಂಬ್‌ಗಳು ಕೈಯಿಂದ ತಯಾರಿಸಿದವುಗಳಾಗಿದ್ದು, ತುಂಬಾ ಅಪಾಯಕಾರಿಯಾಗಿವೆ.

ಸ್ಫೋಟಗೊಂಡಿರುವ ಬಾಂಬ್‌ಗಳನ್ನು ಹೊಯ್ಗೆಯಲ್ಲಿ ಬಚ್ಚಿಡಲಾಗಿತ್ತು. ಉಳಿದ ಬಾಂಬ್‌ಗಳನ್ನು ಗುಜರಿ ವಸ್ತುಗಳಿದ್ದ ಚೀಲದಲ್ಲಿಡಲಾಗಿತ್ತು. ಇದನ್ನು ತಯಾರಿಸುವುದಕ್ಕಾಗಿ ಸಲ್ಫರ್, ಚೂಪಾದ ಮೊಳೆಗಳು, ಕಲ್ಲು/ಗಾಜಿನ ಚೂರುಗಳು, ಕಾಗದಗಳು ಮತ್ತು ಪೇಪರ್‌ಗಳನ್ನು ಬಳಸಲಾಗಿತ್ತು.

ಕೊಟ್ಟಿಗೆಯನ್ನು ವಿವಾದಿತ ಭೂಮಿಯಲ್ಲಿ ಕಟ್ಟಲಾಗಿತ್ತು. ಈ ಪ್ರದೇಶವನ್ನು ವಕ್ಫ್ ಬೋರ್ಡ್ ತನ್ನದೆಂದು ಹೇಳಿತ್ತು. ಕೊಟ್ಟಿಗೆಯ ಬಳಿಯಲ್ಲಿ ನೆಲ ಗುಡಿಸುತ್ತಿದ್ದ ರಾಮ್‌ಲಾಲ್ ಎಂಬ ವ್ಯಕ್ತಿ ಗಾಯಗೊಂಡಿದ್ದಾನೆ.

ಕೆಲವು ಸಮಯದ ಹಿಂದೆ ಕಲೋಟ ಹತ್ಯಾ ಪ್ರಕರಣದ ತನಿಖೆ ನಡೆಸುವ ವೇಳೆ ಇಂತಹುದೇ ದನದ ಕೊಟ್ಟಿಗೆಯೊಂದು ಬಾಂಬ್‌ಗಳನ್ನು ಬಚ್ಚಿಡುವ ಸ್ಥಳವಾಗಿ ಪೊಲೀಸರಿಗೆ ಪತ್ತೆಯಾಗಿರುವುದು ಇಲ್ಲಿ ಉಲ್ಲೇಖನೀಯ. ಮಳೆಗಾಲಕ್ಕೆ ಮುಂಚಿತವಾಗಿ ರಾಮ್‌ಸಿಂಗ್ ಮತ್ತು ಆತನ ಪುತ್ರ ಜೀತು ಈ ಕೊಟ್ಟಿಗೆಯನ್ನು ದುರಸ್ತಿಗೊಳಿಸುತ್ತಿದ್ದರು. ಈ ವೇಳೆ ಅಲ್ಲಿ ಬಚ್ಚಿಡಲಾಗಿದ್ದ ಬಾಂಬ್‌ಗಳು ಸ್ಫೋಟಿಸಿ ಕೊಟ್ಟಿಗೆ ಹಾನಿಗೊಂಡಿತ್ತು. ಗಾಯಗೊಂಡ ಜೀತುವಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೈಯ್ಯಲಾಗಿತ್ತು ಮತ್ತು ಪ್ರಕರಣವನ್ನು ಮುಚ್ಚಿಡಲಾಗಿತ್ತು.

## ■ ಅಲ್ಪಸಂಖ್ಯಾತ್ಯರ ವಿರುದ್ಧ ತಾರತಮ್ಯ ತಡೆಗೆ ಕಠಿಣ ಕಾನೂನು



ಹೊಸದಿಲ್ಲಿ: ವಿದ್ಯಾಭ್ಯಾಸ, ಉದ್ಯೋಗ ಮತ್ತು ಹೌಸಿಂಗ್‌ನಲ್ಲಿ ಅಲ್ಪಸಂಖ್ಯಾತರಿಗಾಗುವ ತಾರತಮ್ಯವನ್ನು ತಡೆಯುವುದಕ್ಕಾಗಿ ಸರಕಾರವು ಕಠಿಣ ಕಾನೂನೊಂದನ್ನು ರಚಿಸಿದೆ.

ಕಾನೂನನ್ನು ಮುರಿಯುವವರಿಗೆ 5 ಲಕ್ಷ ರೂಪಾಯಿ ದಂಡ ಮತ್ತು ಮೂರು ವರ್ಷಗಳ ಸಜೆಯನ್ನು ನೀಡಬಹುದಾಗಿದೆ. ಈ ಬಗ್ಗೆ ಸಮಾನ ಅವಕಾಶ ಆಯೋಗವನ್ನು ರಚಿಸಲು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಕರಡು ಮಸೂದೆಯೊಂದನ್ನು ರಚಿಸಿದೆ.

ಅಲ್ಪಸಂಖ್ಯಾತರಿಗಾಗುತ್ತಿರುವ ತಾರತಮ್ಯದ ಬಗ್ಗೆ ಸಾಚಾರ್ ಸಮಿತಿಯ ಅನ್ವೇಷಣೆಗಳ ಆಧಾರದಲ್ಲಿ ಈ ಆಯೋಗವನ್ನು ರಚಿಸಲಾಗಿದೆ. ವರದಿಯ ಪ್ರಕಾರ ಅಲ್ಪಸಂಖ್ಯಾತರಲ್ಲಿ ಅತ್ಯಧಿಕ ತಾರತಮ್ಯಕ್ಕೊಳಗಾಗುತ್ತಿರುವವರು ಮುಸ್ಲಿಮರಾಗಿದ್ದಾರೆ.

ತನ್ನ ತೀರ್ಪನ್ನು ಒಪ್ಪಿಕೊಳ್ಳದವರಿಗೆ ಆಯೋಗವು ದಿನಕ್ಕೆ 1 ಲಕ್ಷ ದಂಡ ವಿಧಿಸುವ ಅಧಿಕಾರವನ್ನು ಹೊಂದಿದೆ.

## ■ ಎಸ್‌ಡಿಪಿಐ ಕೇಂದ್ರ ಸಮಿತಿಗೆ ಅಫ್ಸರ್ ಪಾಶ ಆಯ್ಕೆ

ಬೆಂಗಳೂರು : ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಅಖಿಲ ಭಾರತ ಕಾರ್ಯಕಾರಿ ಸಮಿತಿಗೆ ಬೆಂಗಳೂರಿನ ಅಫ್ಸರ್ ಪಾಶರವರು ಆಯ್ಕೆಯಾಗಿದ್ದಾರೆ. ಅವರು ಈ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಜುಲೈ 2ರಂದು ಕೇರಳದ ತ್ರಿಶೂರಿನಲ್ಲಿ ಪಕ್ಷದ ಕೇಂದ್ರ ಸಮಿತಿಯ ಸಭೆ ನಡೆಯಿತು. ಈ ಸಭೆಯಲ್ಲಿ ಅಫ್ಸರ್ ಪಾಶರನ್ನು ನಾಮಕರಣ ಮಾಡಲಾಯಿತು ಎಂದು ಎಸ್‌ಡಿಪಿಐ ಕರ್ನಾಟಕ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ ತಿಳಿಸಿದ್ದಾರೆ.

## ■ ಬಿಜೆಪಿ ಸರಕಾರದೊಂದಿಗೆ ಇಸ್ರೇಲ್ ಸಂಬಂಧ ಉತ್ತಮವಾಗಿತ್ತು: ವಿಕ್ಕಿಲೀಕ್ಸ್




ಹೊಸದಿಲ್ಲಿ: ವಿಕ್ಕಿಲೀಕ್ಸ್ ಬಿಡುಗಡೆಗೊಳಿಸಿದ ಯುಎಸ್ ರಾಯಭಾರಿ ಕೇಬಲ್‌ನ ಪ್ರಕಾರ ಬಿಜೆಪಿ ಆಡಳಿತದ ವೇಳೆ ಭಾರತದೊಂದಿಗೆ ಇಸ್ರೇಲ್ ಸಂಬಂಧವು ಈಗಿನದ್ದಕ್ಕಿಂತಲೂ ಇನ್ನೂ ಉತ್ತಮವಾಗಿತ್ತು.

ದೇಶದಲ್ಲಿ ಮುಸ್ಲಿಮ್ ಜನಸಂಖ್ಯೆಯ ಕಾರಣದಿಂದಾಗಿ ಈಗಿನ ಭಾರತ ಸರಕಾರ ಇಸ್ರೇಲ್‌ನೊಂದಿಗೆ ಸಂಬಂಧ ಬೆಳೆಸುವ ವಿಷಯದಲ್ಲಿ ಎಚ್ಚರವಹಿಸುತ್ತದೆ ಎಂಬುದು ಇಸ್ರೇಲ್ ವಿದೇಶಾಂಗ ಸಚಿವಾಲಯದ ಏಶ್ಯ ಮತ್ತು ಪೆಸಿಫಿಕ್‌ನ ಉಪ ಮಹಾ ನಿರ್ದೇಶಕ ರೂಥ್ ಕ್ಯಾನೊಫ್‌ನ ಅಭಿಪ್ರಾಯ.

''ವಿಶಾಲ ಮುಸ್ಲಿಮ್ ಜನಸಂಖ್ಯೆ, ಅರಬ್ ಜಗತ್ತಿನೊಂದಿಗೆ ಅದರ ಸಂಬಂಧ ಮತ್ತು ಅಲಿಪ್ತ ನೀತಿ/ನೆಹರೂ ಸಿದ್ಧಾಂತದ ಪಂಚಭೂತ ತತ್ವಗಳ ಕಾರಣದಿಂದ ಭಾರತವು ಇಸ್ರೇಲ್‌ನೊಂದಿಗಿನ ಸಂಬಂಧವನ್ನು ಮಿತಿಯಲ್ಲಿಟ್ಟಿದೆ'' ಎಂದು ಕ್ಯಾನೊಫ್ ಹೇಳಿರುವುದಾಗಿ ವಿಕ್ಕಿಲೀಕ್ಸ್‌ನ ಯುಎಸ್ ರಾಯಭಾರಿ ಕೇಬಲ್‌ಗಳು ಬಹಿರಂಗಪಡಿಸಿವೆ.

## ಮಅದನಿ ಜಾಮೀನು ಅರ್ಜಿ: ಸು.ಕೋ. ನ್ಯಾಯಮೂರ್ತಿಗಳಲ್ಲಿ ಭಿನ್ನಾಭಿಪ್ರಾಯ



ಹೊಸದಿಲ್ಲಿ: ಪಿಡಿಪಿ ನಾಯಕ ಅಬ್ದುನ್ನಾಸಿರ್ ಮಅದನಿ ಯವರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶ ಎಸ್.ಎಚ್. ಕಾಪಾಡಿಯ ಕೋರ್ಟ್‌ನ ಇನ್ನೊಂದು ಸಂವಿಧಾನ ಪೀಠಕ್ಕೆ ವರ್ಗಾಯಿಸಿದ್ದಾರೆ.

ಅಬ್ದುನ್ನಾಸಿರ್ ಮಅದನಿ ಯವರನ್ನು ಬೆಂಗಳೂರು ಸ್ಫೋಟ ಪ್ರಕರಣದಲ್ಲಿ ಜೈಲಿನಲ್ಲಿಡಲಾಗಿದೆ. ನ್ಯಾಯಮೂರ್ತಿಗಳಾದ ಮಾರ್ಕಂಡೇಯ ಕಟ್ಜು ಮತ್ತು ಗ್ಯಾನ್ ಸುಧಾಕರ್ ಮಿಶ್ರಾರ ನಡುವೆ ಜಾಮೀನು ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಗಂಭೀರ ಭಿನ್ನಾಭಿಪ್ರಾಯವಿರುವ ಹಿನ್ನೆಲೆಯಲ್ಲಿ ಅರ್ಜಿಯನ್ನು ಇನ್ನೊಂದು ಪೀಠಕ್ಕೆ ವರ್ಗಾಯಿಸಲಾಗಿದೆ.

ಮದನಿ ವಿರುದ್ಧದ ಸಾಕ್ಷ್ಯಗಳು ದುರ್ಬಲವಾಗಿದ್ದು, ಅವರಿಗೆ ಜಾಮೀನು ತಿರಸ್ಕರಿಸಬಾರದೆಂದು ಮಾರ್ಕಂಡೇಯ ಕಟ್ಜು ಅಭಿಪ್ರಾಯಿಸಿದ್ದಾರೆ. ಮಅದನಿ ಉದ್ವಿಗ್ನ ಭಾಷಣವನ್ನು ಮಾಡಿರುವುದರಲ್ಲಿ ಅನುಮಾನವಿಲ್ಲ ಮತ್ತು ಅಂತಹ ಭಾಷಣವನ್ನು ಜಾತ್ಯತೀತ ರಾಷ್ಟ್ರದಲ್ಲಿ ಮಾಡಬಾರದು. ಆದರೆ ಕೇವಲ ಇದರ ಆಧಾರದ ಮೇಲೆ ಅವರು ಬೆಂಗಳೂರು ಬಾಂಬ್ ಸ್ಫೋಟದ ಸಂಚಿನಲ್ಲಿ ಭಾಗಿಯಾಗಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಸ್ಫೋಟ ನಡೆಯುವುದಕ್ಕೆ ಮೊದಲು ಅವರು ಇನ್ನೊಬ್ಬ ಆರೋಪಿಯೊಂದಿಗೆ ಟೆಲಿಫೋನ್‌ನಲ್ಲಿ ಮಾತನಾಡಿದ್ದಾರೆಂಬುದು ಬಾಂಬ್ ಸ್ಫೋಟದ ಪ್ರಧಾನ ಸಂಚುಕೋರ ಎಂಬುದಕ್ಕೆ ಸಾಕ್ಷ್ಯವಾಗುವುದಿಲ್ಲ.

ಇನ್ನೊಂದೆಡೆ ನ್ಯಾಯಮೂರ್ತಿ ಮಿಶ್ರಾ ಈ ಬಾಂಬ್ ಸ್ಫೋಟಗಳಲ್ಲಿ ಮಅದನಿಯವರ ಕೈವಾಡವಿರುದಕ್ಕೆ ಇವೆರಡು ಪುರಾವೆಯಾಗುತ್ತದೆಂದು ಹೇಳಿದ್ದಾರೆ. ಅವರಿಗೆ ಜಾಮೀನು ನೀಡಿದರೆ ಇಡೀ ಕ್ರಿಮಿನಲ್ ಕಾನೂನು ಮತ್ತು ನಿಯಮಗಳನ್ನು ಬದಲಾಯಿಸಬೇಕಾಗುತ್ತದೆ ಮತ್ತು ಕೋರ್ಟ್‌ನಿಂದ ಅಪರಾಧಿಯೆಂದು ಸಾಬೀತಾಗುವವರೆಗೆ ಆರೋಪಿಯನ್ನು ಬಂಧಿಸಬಾರದೆಂಬ ವಿಧಿಯನ್ನು ಸೇರಿಸಬೇಕಾಗುತ್ತದೆ ಎಂದು ಅವರು ವಾದಿಸಿದ್ದಾರೆ. ಇಂತಹ ಭಿನ್ನಾಭಿಪ್ರಾಯಗಳಿಂದಾಗಿ ಇಬ್ಬರೂ ನ್ಯಾಯಮೂರ್ತಿಗಳು ವಿಷಯವನ್ನು ಮುಖ್ಯ ನ್ಯಾಯಮೂರ್ತಿಯ ಮುಂದೆ ತರಲು ಮತ್ತು ಇನ್ನೊಂದು ಪೀಠಕ್ಕೆ ವರ್ಗಾಯಿಸಲು ಒಪ್ಪಿದ್ದಾರೆ.